ಜನಶಿಕ್ಷಣ

ಜನಜಾಗೃತಿ

ಜನಸೇವೆ

# ರಾಷ್ಟ್ರೋತ್ಥಾನ ಪರಿಷತ್

ಕೇಶವಶಿಲ್ಪ, ಕೆಂಪೇಗೌಡನಗರ, ಬೆಂಗಳೂರು - 560 019
E-mail: rashtrotthana@gmail.com Website: www.rashtrotthana.org










# ವಾರ್ಷಿಕ ವರದಿ 2019-20

# ಪ್ರಕಲ್ಪಗಳು

- ಜಾಗರಣ
- ಶೈಕ್ಷಣಿಕ ಚಟುವಟಿಕೆಗಳು
- ರಾಷ್ಟ್ರೋತ್ಥಾನ ಆರೋಗ್ಯಸೇವಾ ಕೇಂದ್ರ
- ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ
- ರಾಷ್ಟ್ರೋತ್ಥಾನ ಬಳಗ
- ಮಂಥನ
- ಉಪನ್ಯಾಸ ಮಾಲೆ
- ಗ್ರಾಮೋತ್ಥಾನ
- ರಾಷ್ಟ್ರೋತ್ಥಾನ ರಿಸರ್ಚ್ ಫೌಂಡೇಷನ್
- ರಾಷ್ಟ್ರೋತ್ಥಾನ ಮುದ್ರಣಾಲಯ
- ರಾಷ್ಟ್ರೋತ್ಥಾನ ಸಾಹಿತ್ಯ
- ಸಾಹಿತ್ಯ ಸಿಂಧು ಪ್ರಕಾಶನ
- ಗೀತಭಾರತಿ
- ಉತ್ಥಾನ

# ನಡೆದು ಬಂದ ಹಾದಿ... ಬದ್ಧತೆಯ ಹೆಜ್ಜೆಗಳು...

ಜನಜಾಗೃತಿ (ಸಾಂಸ್ಕೃತಿಕ ಜಾಗೃತಿ), ಜನಶಿಕ್ಷಣ (ಸಮೂಹ ಶಿಕ್ಷಣ) ಮತ್ತು ಜನಸೇವೆ (ಸಮಾಜಸೇವೆ) ಎಂಬ ಮಾರ್ಗದರ್ಶಕ ಅಂಶಗಳ ಆಧಾರದಲ್ಲಿ ರಾಷ್ಟ್ರೋತ್ಥಾನ ಪರಿಷತ್ ಕಳೆದ 55 ವರ್ಷಗಳಿಂದ ಕಾರ್ಯೋನ್ಮುಖವಾಗಿದೆ. "ಸಂದರ್ಭ ಅನುಕೂಲಕರವಾಗುವಂತೆ ಏರ್ಪಡಲಿ. ಆಮೇಲೆ ಕೆಲಸ ಮಾಡೋಣ – ಎಂದು ಕಾಯುತ್ತ ಕೂರದೇ, ಅಂತಹ ಸಂದರ್ಭವನ್ನು ಸೃಷ್ಟಿಮಾಡಿ ಮುಂದಕ್ಕೆ ಸಾಗುತ್ತಿರಿ" ಎಂಬ ಆರೆಸ್ಸೆಸ್‌ನ ದಿ| ಯಾದವರಾವ್ ಜೋಶಿ ಅವರ ಹಾರೈಕೆಯಂತೆ, ನಿರಂತರವಾಗಿ ಸೇವಾವಕಾಶಗಳನ್ನು ಹುಡುಕಿಕೊಂಡು, ನಮ್ಮ ಪರಿಧಿಯಲ್ಲಿ ಸಮಾಜವನ್ನು ಹೇಗೆ ಹೆಚ್ಚು ಸಚೇತನಗೊಳಿಸಬಹುದು ಎಂಬ ದಿಕ್ಕಿನಲ್ಲಿ 'ಚರೈವೇತಿ ಚರೈವೇತಿ' ಎಂಬಂತೆ ದೃಢವಾದ ಹೆಜ್ಜೆಗಳನ್ನಿಡುತ್ತ ರಾಷ್ಟ್ರೋತ್ಥಾನ ಪರಿಷತ್ ಮುಂದೆ ಸಾಗುತ್ತಿದೆ.

ಭಾರತೀಯತೆಯ ಪುನರ್‌ಜಾಗರಣೆಯ 'ಉತ್ಥಾನ' ಮಾಸಪತ್ರಿಕೆಯ ಮೂಲಕ ಶುಭಾರಂಭಗೊಂಡ ಪರಿಷತ್‌ನ ಚಟುವಟಿಕೆಯು ಇಂದು ರಾಷ್ಟ್ರೀಯ ವಿಚಾರಧಾರೆಯ ಪುಸ್ತಕ ಪ್ರಕಾಶನ; ಸಾಮಾಜಿಕ–ಸಾಂಸ್ಕೃತಿಕ ವಿಕಾಸದ ಗುರಿಹೊತ್ತ ರಾಷ್ಟ್ರೋತ್ಥಾನ ಬಳಗಗಳು; ಸುಸಂಪನ್ನ ದೇಶಭಕ್ತ ಶಿಕ್ಷಿತ ಸಮಾಜ ರೂಪಿಸುವ ಶಿಕ್ಷಣಸಂಸ್ಥೆಗಳು ಹಾಗೂ 'ಸಂವಿತ್'; ಬಡತನದಲ್ಲಿ ಅಡಗಿರುವ ಪ್ರತಿಭೆಗಳನ್ನು ಗುರುತಿಸಿ, ಉಚಿತವಾಗಿ ದೇಶದ ಪ್ರತಿಷ್ಠಿತ ಶಿಕ್ಷಣಕ್ಕೆ ತರಬೇತಿ ನೀಡುವ 'ತಪಸ್' ಹಾಗೂ 'ಸಾಧನಾ' ಶೈಕ್ಷಣಿಕ ಯೋಜನೆಗಳು; ಸೇವಾಬಸ್ತಿ (ಸ್ಲಂ, ಕೊಳೆಗೇರಿ)ಗಳ ವಿಕಾಸಕ್ಕಾಗಿ ಶ್ರಮಿಸುವ ವ್ಯಾಸಂಗ/ ಕಂಪ್ಯೂಟರ್/ವೃತ್ತಿತರಬೇತಿ ಕೇಂದ್ರಗಳು; ಅಗತ್ಯ ಫಲಾನುಭವಿಗಳಿಗೆ ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ರಕ್ತ ಒದಗಿಸುವ ರಕ್ತನಿಧಿಗಳು; ಗುಣಮಟ್ಟದ ರಕ್ತ ಉತ್ಪತ್ತಿಯಾಗದ ನ್ಯೂನತೆ–ತಲಸ್ಸೆಮಿಯಾದಿಂದ ಬಳಲುವ ಮಕ್ಕಳಿಗೆ ಸಂಪೂರ್ಣ ಉಚಿತ ಆರೈಕೆ ನೀಡುವ 'ಸಂರಕ್ಷಾ'; ಆರೋಗ್ಯವಂತ ಸಶಕ್ತ ವ್ಯಕ್ತಿಗಳನ್ನು ರೂಪಿಸುವ ಯೋಗಕೇಂದ್ರಗಳು; ಅವಕಾಶವಂಚಿತ, ಪೋಷಕರಹಿತ ಮಕ್ಕಳ ರಕ್ಷಣೆಗೆ ನಿಂತಿರುವ ನಂದಗೋಕುಲ; ದೇಸೀ ಗೋ–ಸಂತತಿಗಳ ರಕ್ಷಣೆಗೆ ಪಣತೊಟ್ಟ ಗೋಶಾಲೆ; – ಹೀಗೆ ಸೇವೆಯ ಜಗತ್ತನ್ನು life's mission ಆಗಿ ಸ್ವೀಕರಿಸಿರುವ ರಾಷ್ಟ್ರೋತ್ಥಾನ ಪರಿಷತ್ ಇಂದು ಅನೇಕ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ರಾಜ್ಯಾದ್ಯಂತ ವ್ಯಾಪಿಸಿದೆ.

ನಮ್ಮ ಕಾರ್ಯಚಟುವಟಿಕೆಯನ್ನು ಗಮನಿಸಿದ ಪೂಜ್ಯ ಶ್ರೀ ವೀರೇಶಾನಂದ ಸ್ವಾಮಿಜೀ ಅವರು, "ರಾಷ್ಟ್ರೋತ್ಥಾನ ಪರಿಷತ್ ಅಂತಾರಾಷ್ಟ್ರೀಯ ಮಟ್ಟದ ಸೇವೆ ಮಾಡುತ್ತಿದೆ" ಎಂದು ಹಾರೈಸಿದ್ದರು. ಹೀಗೆ ನಾಡಿನ ಮಠಾಧೀಶರು, ಖ್ಯಾತಸಾಹಿತಿಗಳು, ಶಿಕ್ಷಣ ತಜ್ಞರು, ಚಿಂತಕರು, ಪತ್ರಕರ್ತರು, ಅಧಿಕಾರಿಗಳು, ಉದ್ಯಮಿಗಳು ನಮ್ಮನ್ನು ಹರಸಿದ್ದಾರೆ. 'ನ್ಯಗ್ರೋಧಬೀಜಂ ಕಿಲಂ ಸಿಡಿದುಂ ಪೆರ್ಮರವಾಗದೇ' ಎಂದ ಹಾಗೆ ಮೊದಲಿಗೆ ಕಂಡೂ ಕಾಣದ ಹಾಗೆ ಇರುವ ಬೀಜದಿಂದ ಮೊಳೆತು ಹರಡುವ ಆಲದ ಮರ ಎಷ್ಟು ವಿಶಾಲವಾಗಿ ಬಿಡುತ್ತದೆಂದರೆ ಅದೇ ಒಂದು ಪ್ರಪಂಚ ಎನಿಸಿಬಿಡುವಂತಾಗಿದೆ. 'ಇದಕ್ಕೆ ನೈಜ ಉದಾಹರಣೆ ರಾಷ್ಟ್ರೋತ್ಥಾನ ಪರಿಷತ್ – ಎಂದು ಹರಸಿದವರೂ ಹಲವರು.'

ರಾಷ್ಟ್ರೋತ್ಥಾನ ಪರಿಷತ್ 2019–20ರ ಆರ್ಥಿಕ ವರ್ಷದಲ್ಲಿ ನಡೆಸಿದ ಪ್ರಮುಖ ಚಟುವಟಿಕೆಗಳ ಒಂದು ಹಿನ್ನೋಟ ಇಲ್ಲಿದೆ. ಮ್ಯಾಗ್ನೆಟ್ (magnet) ಗಾತ್ರದಲ್ಲಿ ನಾಲ್ಕೋ ಆರೋ ಅಂಗುಲ ಅಷ್ಟೆ ಇರಬಹುದು. ಆದರೆ ಅದರ magnetic field ನಾಲ್ಕೈದು ಅಡಿಗಳಷ್ಟು ಇರುತ್ತದೆ. ಅಂತೆಯೇ ಸಮಾಜದಲ್ಲಿನ ಅನೇಕ ಸವಾಲುಗಳ ನಡುವೆ ನಾವೊಂದು ಕಿರು ಹಣತೆಯನ್ನು ಬೆಳಗಿಸುವ ಪ್ರಯತ್ನ ಮಾಡಿದ್ದೇವೆ ಎಂಬುದು ನಮ್ಮ ನಂಬಿಕೆ.

ಬನ್ನಿ... ಜೊತೆಗೂಡಿ ಸಾಗೋಣ...

ನಾ. ದಿನೇಶ್ ಹೆಗ್ಡೆ
ಪ್ರಧಾನ ಕಾರ್ಯದರ್ಶಿ



# ವಿಷಯ ಸೂಚಿ


3 ಜಾಗರಣ

12 ನಂದಗೋಕುಲ

14 ಆರೋಗ್ಯಸೇವಾ ಕೇಂದ್ರ

20 ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ

24 ಗೋಶಾಲೆ

27 ಶೈಕ್ಷಣಿಕ ಸಂಸ್ಥೆಗಳು

42 ತಪಸ್ ಮತ್ತು ಸಾಧನಾ

47 ಸಂವಿತ್

49 ರಾಷ್ಟ್ರೋತ್ಥಾನ ಬಳಗ

51 ಕೇಂದ್ರ ಕಾರ್ಯಾಲಯ

52 ರಾಷ್ಟ್ರೋತ್ಥಾನ ವಾರ್ತಾ




# ಜಾಗರಣ

ಸೇವಾಬಸ್ತಿಗಳಲ್ಲಿ
ನಾಲ್ಕು ಆಯಾಮಗಳಲ್ಲಿ
ಚಟುವಟಿಕೆ

- ಶಿಕ್ಷಣ
- ಆರೋಗ್ಯ
- ಸ್ವಾವಲಂಬನೆ
- ಸಂಸ್ಕಾರ



ಒಂದೆಡೆ ಜಗದ್ವಿಖ್ಯಾತಿ ಗಳಿಸುತ್ತಿರುವ ಇನ್ನೊಂದೆಡೆ ಮೂಲಭೂತ ಸೌಕರ್ಯಗಳ ಕೊರತೆಗಳಿಂದ ವಂಚಿತರಾಗಿರುವ 800ಕ್ಕೂ ಹೆಚ್ಚು ಸೇವಾಬಸ್ತಿ (ಸ್ಲಂ, ಕೊಳೆಗೇರಿ)ಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿವೆ. ಇಂತಹ ಸೇವಾಬಸ್ತಿಗಳಲ್ಲಿ ಆರ್ಥಿಕ ಸಾಮಾಜಿಕ ಕಾರಣಗಳಿಂದಾಗಿ ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ಅನೌಪಚಾರಿಕ ಶಿಕ್ಷಣ ಕೇಂದ್ರಗಳನ್ನು ತೆರೆಯುವ ಉದ್ದೇಶದಿಂದ ಜಾಗರಣ ಪ್ರಕಲ್ಪವು 1989ರಲ್ಲಿ ಪ್ರಾರಂಭವಾಯಿತು. 1989 ರಿಂದ 2007ರವರೆಗೆ ಅನೌಪಚಾರಿಕ ಶಿಕ್ಷಣ ಕೇಂದ್ರಗಳನ್ನು ನಡೆಸಿ ಸೇವಾಬಸ್ತಿಯ ಮಕ್ಕಳನ್ನು ಮುಖ್ಯವಾಹಿನಿಯಾದ ಶಾಲೆಗೆ ಸೇರಿಸುವ ಪ್ರಯತ್ನದಲ್ಲಿ ಯಶಕಂಡ ನಂತರ, ಇಂದು ಸೇವಾಬಸ್ತಿಯ ಸಂಪೂರ್ಣ ವಿಕಾಸಕ್ಕಾಗಿ ರಾಷ್ಟ್ರೋತ್ಥಾನ ಪರಿಷತ್ ಜಾಗರಣ ಪ್ರಕಲ್ಪದ ಹೆಸರಿನಲ್ಲಿ ವಿವಿಧ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ.

ಶಿಕ್ಷಣ, ಆರೋಗ್ಯ, ಸ್ವಾವಲಂಬನೆ ಮತ್ತು ಸಂಸ್ಕಾರ – ಈ ನಾಲ್ಕು ಆಯಾಮಗಳಲ್ಲಿ 'ಜಾಗರಣ' ಪ್ರಕಲ್ಪವು ಕಳೆದ ಮೂರು ದಶಕಗಳಿಂದ ಬೆಂಗಳೂರಿನ ಸೇವಾಬಸ್ತಿಗಳಲ್ಲಿ ವಿವಿಧ ಸೇವಾಚಟುವಟಿಕೆಗಳನ್ನು ನಡೆಸುತ್ತಿದೆ. ಈ ಚಟುವಟಿಕೆಗಳ ಮೂಲಕ ಸೇವಾಬಸ್ತಿಯ ಸಾವಿರಾರು ಮಕ್ಕಳು, ನೂರಾರು ಮಹಿಳೆಯರು ಹಾಗೂ ಯುವಕ–ಯುವತಿಯರು ಸ್ವಾವಲಂಬೀ ಜೀವನ ರೂಪಿಸಿಕೊಂಡಿದ್ದಾರೆ. ಸೇವಾಬಸ್ತಿಯು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಸೇರಿದಂತೆ ಎಲ್ಲ ಮುಖಗಳಲ್ಲಿಯೂ ಪ್ರಗತಿ ಸಾಧಿಸುತ್ತಿರುವುದನ್ನು ಕಾಣಬಹುದಾಗಿದೆ.

**ಪ್ರಸ್ತುತ ಒಟ್ಟು 210 ಸೇವಾಬಸ್ತಿಗಳಲ್ಲಿ 685 ಚಟುವಟಿಕೆಗಳು ನಡೆಯುತ್ತಿವೆ.**

| | | |
|---|---|---|
| 1 | ವ್ಯಾಸಂಗ ಕೇಂದ್ರಗಳು | 240 |
| 2 | ಶಿಶುಮಂದಿರ | 3 |
| 3 | ಬಾಲಗೋಕುಲ | 200 |
| 4 | ಅನೌಪಚಾರಿಕ ಶಿಕ್ಷಣ ಕೇಂದ್ರ | 1 |
| 5 | ಜೋಳಿಗೆ ಪುಸ್ತಕಾಲಯ | 200 |
| 6 | ಗ್ರಂಥಾಲಯ | 1 |
| 7 | ಮಿನಿ ಬಾಲಭವನ | 2 |
| 8 | ಸರ್ಕಾರಿ ಶಾಲೆಗಳಲ್ಲಿ ಸಂಸ್ಕಾರ ಕೇಂದ್ರ | 8 |
| 9 | ದೇವಸ್ಥಾನ ಕೇಂದ್ರಿತ ಚಟುವಟಿಕೆ | 1 |
| 10 | ಕಂಪ್ಯೂಟರ್ ತರಬೇತಿ | 7 |
| 11 | ಹೊಲಿಗೆ ತರಬೇತಿ | 2 |
| 12 | ಉಚಿತ ಚಿಕಿತ್ಸಾಲಯ | 2 |
| 13 | ಸ್ವಸಹಾಯ ಸಂಘಗಳು | 18 |

## ಶಿಕ್ಷಣ

### ಅ) ವ್ಯಾಸಂಗ ಕೇಂದ್ರಗಳು

ಸೇವಾಬಸ್ತಿಯಲ್ಲಿ (ಸ್ಲಂ, ಕೊಳೆಗೇರಿ) ವಾಸಿಸುತ್ತಿರುವ ಮಕ್ಕಳನ್ನು ಶೈಕ್ಷಣಿಕವಾಗಿ ಮುನ್ನೆಲೆಗೆ ತರುವ ಪ್ರಯತ್ನವಾಗಿ 'ವ್ಯಾಸಂಗ ಕೇಂದ್ರ'ಗಳು ನಡೆಯುತ್ತಿವೆ. ಈ ವ್ಯಾಸಂಗ ಕೇಂದ್ರಗಳ ಮೂಲಕ ಸಂಪೂರ್ಣ ಸೇವಾಬಸ್ತಿಯ ಜೀವನಮಟ್ಟವನ್ನು ಸುಧಾರಿಸುವ ಪ್ರಯತ್ನ ವಿವಿಧ ರೀತಿಯಲ್ಲಿ ನಡೆಯುತ್ತಿವೆ.

ಸೇವಾಬಸ್ತಿಯಲ್ಲಿರುವ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗುವಂತಾಗಲು ಹಾಗೂ ಶಿಕ್ಷಣದ ಜೊತೆಜೊತೆಗೆ ಸಂಸ್ಕಾರ, ಸಾಮಾಜಿಕ ಜ್ಞಾನ–ಹೊಣೆಗಾರಿಕೆಯ ಅರಿವನ್ನು ಮೂಡಿಸುವ ದೃಷ್ಟಿಯಿಂದ ವ್ಯಾಸಂಗ ಕೇಂದ್ರಗಳು (Tution Centers) ಕಾರ್ಯನಿರ್ವಹಿಸುತ್ತಿವೆ.

**ಸೇವಾಬಸ್ತಿಯ ಶಿಕ್ಷಿತ ಯುವತಿಯರೇ ಶಿಕ್ಷಕಿಯರು! :** ವ್ಯಾಸಂಗ ಕೇಂದ್ರಗಳಿಗೆ ಅಗತ್ಯ ಶಿಕ್ಷಕಿಯರನ್ನು ಸೇವಾಬಸ್ತಿಯ ವಿದ್ಯಾವಂತ ಹೆಣ್ಣುಮಕ್ಕಳನ್ನು ಜೋಡಿಸಿಕೊಳ್ಳಬೇಕು, ತನ್ಮೂಲಕ ಅಲ್ಲಿನ ಮಹಿಳೆಯರ ಬದುಕಿಗೆ ಆಸರೆಯಾಗಬೇಕು ಎಂಬ ಆಶಯದಿಂದ ಸೇವಾಬಸ್ತಿಯಲ್ಲಿ ವಾಸವಾಗಿರುವ 10 ಮತ್ತು ಮೇಲ್ಪಟ್ಟ ತರಗತಿಗಳಲ್ಲಿ ಓದುತ್ತಿರುವ ಮತ್ತು ಓದುಮುಗಿಸಿರುವ ಹೆಣ್ಣುಮಕ್ಕಳನ್ನು ಗುರುತಿಸಿ, ಸೂಕ್ತ ತರಬೇತಿ ನೀಡಿ 'ಶಿಕ್ಷಕಿ'ಯರನ್ನಾಗಿ ಆಯ್ಕೆ ಮಾಡಲಾಗುತ್ತದೆ. ಇವರಿಗೆ ಪ್ರತೀ ತಿಂಗಳು ತರಬೇತಿ ನೀಡಲಾಗುತ್ತದೆ.



ಈ ಶಿಕ್ಷಕಿಯರು ತಮ್ಮ ಮನೆಯ ಸುತ್ತಮುತ್ತ ಶಾಲೆಗೆ ಹೋಗುತ್ತಿರುವ 15ಕ್ಕೂ ಅಧಿಕ ಮಕ್ಕಳನ್ನು ಜೋಡಿಸಿಕೊಂಡು, ಆ ಮಕ್ಕಳಿಗೆ ಪ್ರತಿದಿನ 2 1/2 ಗಂಟೆಗಳ ಕಾಲ ಕೋಚಿಂಗ್ (Tution) ನೀಡುತ್ತಾರೆ. ನಿಃಶುಲ್ಕವಾಗಿ ಕೋಚಿಂಗ್ ಪಡೆಯುವ ಸೇವಾಬಸ್ತಿಯ ಈ ವಿದ್ಯಾರ್ಥಿಗಳು ಶಾಲೆಯಲ್ಲಿ ಹಾಗೂ ಅಧ್ಯಯನದ ಸಮಯದಲ್ಲಿ ಎದುರಾದ ಗೊಂದಲಗಳಿಗೆ ಇಲ್ಲಿನ ಶಿಕ್ಷಕಿಯರಿಂದ ಪರಿಹಾರ ಕಂಡುಕೊಳ್ಳುತ್ತಿದ್ದಾರೆ. ಈ ಉಚಿತ ವ್ಯಾಸಂಗ ಕೇಂದ್ರಗಳಿಂದ ಪ್ರತೀ ವರ್ಷ ಸೇವಾಬಸ್ತಿಯ 5000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಲಾಭ ಪಡೆಯುತ್ತಿದ್ದಾರೆ.

**ವ್ಯಕ್ತಿತ್ವ ವಿಕಾಸಕ್ಕೆ ಒತ್ತು:** ಕೇಂದ್ರದ ಮಕ್ಕಳಿಗೆ ಅಕ್ಕ/ಅಮ್ಮನಂತೆ ಇರುವ ಈ 'ಶಿಕ್ಷಕಿ' ಪ್ರತಿ ವಿದ್ಯಾರ್ಥಿಯ ಶೈಕ್ಷಣಿಕ ಪ್ರಗತಿಯ ಜೊತೆಜೊತೆಗೆ ಅವರಲ್ಲಿ ಒಳ್ಳೆಯ ಮೌಲ್ಯಗಳನ್ನು ಬೆಳೆಸುವ ಪ್ರಯತ್ನ ನಡೆಸುತ್ತಿದ್ದಾರೆ.

**ಯೋಜನಾಬದ್ಧ ಶಿಕ್ಷಣಕ್ರಮ:** ವ್ಯಾಸಂಗ ಕೇಂದ್ರವು ವ್ಯವಸ್ಥಿತ ರೂಪದಲ್ಲಿ ನಡೆಯಲು ಮೇ ತಿಂಗಳಿನಲ್ಲಿ ವಾರ್ಷಿಕ ಯೋಜನೆಯನ್ನು ತಯಾರಿಸಲಾಗುತ್ತದೆ. ಈ ಯೋಜನೆಯಲ್ಲಿ ಪಾಠ್ಯ ಚಟುವಟಿಕೆಗಳು, ಸಂಸ್ಕಾರ ಶಿಕ್ಷಣ ಹಾಗೂ ಉತ್ಸವಗಳ ಆಚರಣೆ ಸೇರಿದಂತೆ ಅನೇಕ ವಿಷಯಗಳು ಅಡಕವಾಗಿರುತ್ತವೆ. ಇವುಗಳನ್ನು ಕಾರ್ಯಗತಗೊಳಿಸಲು ಹಾಗೂ ಶಿಕ್ಷಕಿಯರ ಸಾಮರ್ಥ್ಯವರ್ಧನೆಗಾಗಿ ನಿರಂತರ ಮಾಸಿಕ ಪ್ರಶಿಕ್ಷಣ ವರ್ಗಗಳನ್ನು ನಡೆಸಲಾಗುತ್ತಿದೆ.

**ಎಲ್ಲಿ ನಡೆಯುತ್ತವೆ?:** ಬಹುತೇಕ ವ್ಯಾಸಂಗ ಕೇಂದ್ರಗಳು ಸೇವಾಬಸ್ತಿಯ ವ್ಯಾಸಂಗ ಕೇಂದ್ರದ ಶಿಕ್ಷಕಿಯರ ಮನೆಗಳಲ್ಲಿ ಅಥವಾ ಅಂಗನವಾಡಿಗಳಲ್ಲಿ ನಡೆಯುತ್ತಿವೆ. ಬೆಂಗಳೂರಿನ ಕೆಂಪಾಪುರ ಅಗ್ರಹಾರ, ವಿ.ವಿ. ಗಿರಿ ಕಾಲೊನಿ, ಬೈಯ್ಯಪ್ಪನಹಳ್ಳಿ, ನ್ಯೂ ಗುರಪ್ಪನಪಾಳ್ಯ ಮತ್ತು ದೊಮ್ಮಲೂರು ಸೇವಾಬಸ್ತಿಗಳಲ್ಲಿ ಸ್ವಂತ ಕಟ್ಟಡವಿದೆ. ಇಲ್ಲಿ ವ್ಯಾಸಂಗ ಕೇಂದ್ರದ ಜೊತೆಗೆ ಚಿಕಿತ್ಸಾಲಯ, ಹೊಲಿಗೆ ಹಾಗೂ ಕಂಪ್ಯೂಟರ್ ತರಬೇತಿ, ಶಿಶುಮಂದಿರ ಇತ್ಯಾದಿ ಸೇವಾ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಸ್ಥಾನೀಯ ಜನರಿಗೆ 'ಸೇವಾಧಾಮ' ಎಂದು ಪರಿಚಿತವಾಗಿರುವ ಇವುಗಳಿಂದ ದಿನನಿತ್ಯ 350ಕ್ಕೂ ಹೆಚ್ಚು ಜನರು ಸೇವೆಯನ್ನು ಪಡೆಯುತ್ತಿದ್ದಾರೆ.

**ಸಂವಹನಕ್ಕಾಗಿ ಮೇಲ್ವಿಚಾರಕರು:** ವ್ಯಾಸಂಗಕೇಂದ್ರದ ಶಿಕ್ಷಕಿಯರ ಜೊತೆ ನಿರಂತರ ಸಂಪರ್ಕ ಏರ್ಪಡಿಸುವ ಉದ್ದೇಶದಿಂದ ಮೇಲ್ವಿಚಾರಕರನ್ನು ನೇಮಿಸಲಾಗುತ್ತದೆ. ಹಲವು ವರ್ಷಗಳ ಕಾಲ ವ್ಯಾಸಂಗಕೇಂದ್ರದ ಶಿಕ್ಷಕಿಯರಾಗಿ ಕಾರ್ಯನಿರ್ವಹಿಸಿದ ಆಯ್ದ ಅನುಭವಿ ಶಿಕ್ಷಕಿಯರನ್ನು ಮೇಲ್ವಿಚಾರಕರನ್ನಾಗಿ ಆಯ್ಕೆ ಮಾಡಲಾಗುತ್ತದೆ. ಇಂತಹ ಮೇಲ್ವಿಚಾರಕರು 6 ರಿಂದ 8 ಸೇವಾಬಸ್ತಿಗಳ ಸೇವಾ ಚಟುವಟಿಕೆಗಳನ್ನು ಗಮನಿಸುತ್ತಾರೆ.

**ಎಸ್‌ಎಸ್‌ಎಲ್‌ಸಿ ಫಲಿತಾಂಶ:** ಈ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಕೇಂದ್ರದಲ್ಲಿ ಕಲಿತ 42 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅನಕ್ಷರಸ್ಥ ಪೋಷಕರು, ಓದಿಗೆ ಪೂರಕವಾಗದ ಮನೆಯ ವಾತಾವರಣದ ನಡುವೆ 6 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದಾರೆ. 20 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಮತ್ತು 14 ಮಂದಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾದರು. ಇವರಲ್ಲಿ ಹಲವು ವಿದ್ಯಾರ್ಥಿಗಳು ಮನೆಕೆಲಸ, ಅಗರ್‌ಬತ್ತಿ (ಊದುಬತ್ತಿ) ತಯಾರಿಸಿ ಶಾಲೆಗೆ ಹೋಗುತ್ತಿದ್ದರು.

## ಆ) ಜೋಳಿಗೆ ಪುಸ್ತಕಾಲಯ

ಮಕ್ಕಳಲ್ಲಿ ಪುಸ್ತಕ ಓದುವ ಹವ್ಯಾಸವನ್ನು ಬೆಳೆಸುವ ದೃಷ್ಟಿಯಿಂದ ವ್ಯಾಸಂಗ ಕೇಂದ್ರಗಳಲ್ಲಿ ಜೋಳಿಗೆ ಪುಸ್ತಕ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ವಾರಕ್ಕೊಮ್ಮೆ ಎಲ್ಲ ಮಕ್ಕಳೂ ಒಂದೊಂದು ಪುಸ್ತಕವನ್ನು ತೆಗೆದುಕೊಂಡು ಹೋಗಿ ಅವುಗಳನ್ನು ಓದಬೇಕು ಮತ್ತು ಓದಿದ ನಂತರ ಅದರ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಬೇಕು ಹಾಗೂ ಪುಸ್ತಕದ ವಿಶೇಷತೆಗಳನ್ನು ಪಟ್ಟಿಮಾಡಬೇಕು – ಹೀಗೆ ಯೋಜನಾಬದ್ಧವಾಗಿ ಜೋಳಿಗೆ ಗ್ರಂಥಾಲಯ ನಡೆಯುತ್ತಿದೆ. ಪ್ರಾರಂಭಿಕ ಹಂತವಾಗಿ ಭಾರತ–ಭಾರತಿ ಪುಸ್ತಕ ಸಂಪದ ಪುಸ್ತಕಗಳನ್ನು ಮಕ್ಕಳು ಖರೀದಿಸಿದ್ದಾರೆ. ಹೀಗೆ 200 ಸ್ಥಾನಗಳಲ್ಲಿ ಜೋಳಿಗೆ ಗ್ರಂಥಾಲಯ ನಡೆಯುತ್ತಿದೆ.

- ಕಥಾ ಸ್ಪರ್ಧೆಯಲ್ಲಿ ಬಹುಮಾನ: ಜೋಳಿಗೆ ಪುಸ್ತಕ ಯೋಜನೆಯಿಂದಾಗಿ ಹಲವು ವಿದ್ಯಾರ್ಥಿಗಳು ತಮ್ಮ ಶಾಲೆಗಳಲ್ಲಿ ನಡೆದ ಪ್ರತಿಭಾ ಕಾರಂಜಿ ಕಥಾ ಸ್ಪರ್ಧೆಯಲ್ಲಿ ಬಹುಮಾನ ಗಳಿಸಿದ್ದಾರೆ. ಮಕ್ಕಳು ಮನೆಗೆ ತಂದ ಈ ಪುಸ್ತಕಗಳನ್ನು ಪೋಷಕರೂ ಓದುತ್ತಿದ್ದಾರೆ.







## ಇ) ಗ್ರಂಥಾಲಯ

ಕಾಲೇಜು ವಿದ್ಯಾರ್ಥಿಗಳಿಗಾಗಿ ಬೈಯಪ್ಪನಹಳ್ಳಿ ಸೇವಾಬಸ್ತಿಯಲ್ಲಿ ಗ್ರಂಥಾಲಯವನ್ನು ತೆರೆಯಲಾಗಿದೆ. ಸುಮಾರು 5000ಕ್ಕೂ ಅಧಿಕ ಪುಸ್ತಕಗಳನ್ನು ಸಂಗ್ರಹಿಸಲಾಗಿದೆ. ಸುಮಾರು 100ಕ್ಕೂ ಅಧಿಕ ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಿದ್ದಾರೆ.

## ಈ) ಮಿನಿ ಬಾಲಭವನ

ಬಡಮಕ್ಕಳ ಸೃಜನಾತ್ಮಕ–ಕ್ರಿಯಾತ್ಮಕ ವಿಕಾಸಕ್ಕಾಗಿ ಬೆಂಗಳೂರಿನ ಜಯನಗರ, ರಾಜಾಜಿನಗರ, ಕೋಲ್ಸ್‌ಪಾರ್ಕ್‌ನಲ್ಲಿ ಜಾಗರಣ ಪ್ರಕಲ್ಪದ ವತಿಯಿಂದ ಕಳೆದ 2 ವರ್ಷಗಳಿಂದ ಮಿನಿ ಬಾಲಭವನವನ್ನು ನಡೆಸಲಾಗುತ್ತಿದೆ. ಸರ್ಕಾರೀ ಸ್ವಾಮ್ಯದ ಬೆಂಗಳೂರಿನ ಕಬ್ಬನ್ ಪಾರ್ಕ್‌ನ ಬಾಲಭವನ ಸೊಸೈಟಿ ಸಹಯೋಗದಲ್ಲಿ ನಡೆಯುತ್ತಿರುವ ಬಾಲಭವನದಲ್ಲಿ ಬಡಮಕ್ಕಳಿಗೆ ಸಂಗೀತ, ನೃತ್ಯ, ಭರತನಾಟ್ಯ, ಕ್ರೀಡೆ, ಇಂಗ್ಲಿಷ್ ಕಲಿಕೆ ಮುಂತಾದ ಸೃಜನಾತ್ಮಕ–ಕ್ರಿಯಾತ್ಮಕ ಚಟುವಟಿಕೆಗಳನ್ನು ಕಲಿಸಲಾಗುತ್ತಿದೆ.

- ನುರಿತ ಸಂಪನ್ಮೂಲ ವ್ಯಕ್ತಿಗಳ ಮೂಲಕ ಸಂಗೀತ, ಭರತನಾಟ್ಯ, ನೃತ್ಯ, ಕರಕುಶಲಕಲೆ, ಯೋಗ, ಕರಾಟೆ, ದೇಶಿ ಆಟಗಳು ಹೀಗೆ ಹಲವು ಸೃಜನಾತ್ಮಕ ಕಲೆಗಳನ್ನು ಕಲಿಸಲಾಗುತ್ತಿದೆ.
- ಜಯನಗರ ಮತ್ತು ಕೋಲ್ಸ್‌ಪಾರ್ಕ್ ಮಿನಿ ಬಾಲಭವನಗಳಲ್ಲಿ ಈ ವರ್ಷ ಒಟ್ಟು 136 ಮಕ್ಕಳು ಪ್ರತಿನಿತ್ಯ ಈ ಚಟುವಟಿಕೆಗಳ ಲಾಭ ಪಡೆದಿದ್ದಾರೆ.

# ಸ್ವಾವಲಂಬನೆ

ಸೇವಾಬಸ್ತಿಯಲ್ಲಿರುವ ಮಹಿಳೆಯರ, ಯುವಕ–ಯುವತಿಯರ ಕೈಗಳಿಗೆ ವೃತ್ತಿಪರ ತರಬೇತಿ ನೀಡಿ ಸ್ವಾವಲಂಬೀ ಬದುಕನ್ನು ಕಟ್ಟಿಕೊಡುವ ಉದ್ದೇಶದಿಂದ ವಿವಿಧ ವೃತ್ತಿ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ.

**ಅ) ಹೊಲಿಗೆ ತರಬೇತಿ ಕೇಂದ್ರ:** ಕೆ.ಪಿ. ಅಗ್ರಹಾರ ಮತ್ತು ವಿ.ವಿ. ಗಿರಿ ಕಾಲೋನಿ ಸೇವಾಬಸ್ತಿಯಲ್ಲಿ ಒಟ್ಟು 2 ಹೊಲಿಗೆ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಈವರೆಗೆ ಒಟ್ಟು 700ಕ್ಕೂ ಅಧಿಕ ಮಹಿಳೆಯರು ತರಬೇತಿ ಪಡೆದಿದ್ದಾರೆ. 2019–20ರಲ್ಲಿ ಒಟ್ಟು 171 ಮಹಿಳೆಯರು ಹೊಲಿಗೆ ತರಬೇತಿ ಪಡೆದಿದ್ದಾರೆ.

**ಆ) ಕಂಪ್ಯೂಟರ್ ತರಬೇತಿ ಕೇಂದ್ರ:** ಬಾಪೂಜಿನಗರ, ಕಾಮಾಕ್ಷಿಪಾಳ್ಯ, ಬೈಯ್ಯಪ್ಪನಹಳ್ಳಿ, ಹೊಂಗಸಂದ್ರ, ಕೆ.ಪಿ. ಅಗ್ರಹಾರ, ಶೇಷಾದ್ರಿಪುರಂನ ವಿ.ವಿ.ಗಿರಿ ಕಾಲೋನಿ, ಉಲ್ಲಾಳ ಉಪನಗರ (ಯೂತ್ ಫಾರ್ ಸೇವಾದ ವಿದ್ಯಾಚೇತನ ಯೋಜನೆಯ ಸಹಯೋಗ) ಹಾಗೂ ದೊಮ್ಮಲೂರು (ಅಕಾರ್ಡ್ ಸಾಫ್ಟ್‌ವೇರ್ ಕಂಪೆನಿಯ ಸಹಯೋಗ) – ಒಟ್ಟು 7 ಕಂಪ್ಯೂಟರ್ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ.

3 ತಿಂಗಳ ಅವಧಿಯ ಕೋರ್ಸ್‌ಗಳಲ್ಲಿ ಬೇಸಿಕ್ ಮತ್ತು ಟ್ಯಾಲಿ ವಿಷಯಗಳನ್ನು ಕಲಿಸಿ, ನಂತರ ವಿವಿಧ ಕಂಪೆನಿಗಳಲ್ಲಿ ಉದ್ಯೋಗ ಒದಗಿಸಲು ಸಹಾಯ ಮಾಡುವ ಮೂಲಕ ಯುವಕ–ಯುವತಿಯರಿಗೆ ಸ್ವಾವಲಂಬೀ ಬದುಕನ್ನು ಕಟ್ಟಿಕೊಳ್ಳಲು ನೆರವು ನೀಡಲಾಗುತ್ತಿದೆ.

2019–20ರ ಸಾಲಿನಲ್ಲಿ 391 ಯುವಕ–ಯುವತಿಯರು ಕಂಪ್ಯೂಟರ್ ತರಬೇತಿ ಪಡೆದಿದ್ದಾರೆ.

**ಇ) ಸ್ವಸಹಾಯ ಸಂಘಗಳು:** ಸಂಪೂರ್ಣ ಸೇವಾಬಸ್ತಿಯ ವಿಕಾಸ ಹಾಗೂ ಸೇವಾಬಸ್ತಿಯ ಜನರ ಆರ್ಥಿಕ ಪ್ರಗತಿ ಸಾಧಿಸುವ ಸಲುವಾಗಿ 14 ಸೇವಾಬಸ್ತಿಗಳಲ್ಲಿ 18 ಸ್ವಸಹಾಯ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಈ ಸ್ವಸಹಾಯ ಸಂಘದ ಮೂಲಕ ಒಟ್ಟು 200 ಮಂದಿ ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ.

**ಈ) ಉದ್ಯೋಗ ಮಾರ್ಗದರ್ಶಿ ಕಾರ್ಯಕ್ರಮ:** ಸೇವಾಬಸ್ತಿಯ ಯುವಕ ಯುವತಿಯರಿಗಾಗಿ ವಿವಿಧ ಸಂಸ್ಥೆಗಳ ಸಹಕಾರದಲ್ಲಿ ನವೆಂಬರ್ ತಿಂಗಳಲ್ಲಿ 4 ಕಂಪ್ಯೂಟರ್ ಕೇಂದ್ರಗಳಲ್ಲಿ ಉದ್ಯೋಗಾವಕಾಶಗಳ ಮಾಹಿತಿ ಕಾರ್ಯಕ್ರಮವನ್ನು ನಡೆಸಲಾಯಿತು. ಇದರಿಂದ ಸೇವಾಬಸ್ತಿಯ 86 ಮಂದಿ ಉದ್ಯೋಗ ಪಡೆದಿದ್ದಾರೆ.

# ಆರೋಗ್ಯ

## ಅ) ಆರೋಗ್ಯ ರಕ್ಷಕಿಯರು

ಸೇವಾಬಸ್ತಿಗಳ ಮಹಿಳೆಯರಿಗೆ ತಮ್ಮ ವೈಯಕ್ತಿಕ ಆರೋಗ್ಯದ ಸಮಸ್ಯೆಗಳನ್ನು ಹೇಳಿಕೊಳ್ಳಲು ಯಾರೂ ಇರುವುದಿಲ್ಲ. ಆರೋಗ್ಯದ ಸಮಸ್ಯೆ ಉಂಟಾದಾಗ ಎಲ್ಲಿಗೆ ಹೋಗಬೇಕು ಎಂಬ ಅರಿವೂ ಅವರಿಗೆ ತಿಳಿದಿರುವುದಿಲ್ಲ. ಇಂತಹವರಿಗೆ ನೆರವಾಗುವ ಉದ್ದೇಶದಿಂದ ಜಾಗರಣ ಪ್ರಕಲ್ಪವು ಸೇವಾಬಸ್ತಿಯಲ್ಲಿರುವ ಆಸಕ್ತ ಮಹಿಳೆಯನ್ನು 'ಆರೋಗ್ಯ ರಕ್ಷಕಿ'ಯಾಗಿ ಗುರುತಿಸಲಾಗುತ್ತಿದೆ. ಈ ಆರೋಗ್ಯ ರಕ್ಷಕಿಯರು ಅವರಿಗೆ ಸಹಾಯ ಮಾಡುತ್ತಾರೆ. ಹತ್ತಿರದ ಆಸ್ಪತ್ರೆಗಳಿಗೆ ಕರೆದುಕೊಂಡು ಹೋಗಿ ಸೂಕ್ತ ಚಿಕಿತ್ಸೆ ಒದಗಿಸುತ್ತಾರೆ.

- ಸೇವಾಬಸ್ತಿಗಳಲ್ಲಿ ಆರೋಗ್ಯ ಜಾಗೃತಿ, ಆರೋಗ್ಯ ತಪಾಸಣಾ ಶಿಬಿರ, ಗಂಭೀರ ಕಾಯಿಲೆಗಳಿಗೆ ಹೆಚ್ಚಿನ ಚಿಕಿತ್ಸೆಯ ನೆರವು ದೊರಕಿಸುವ ಮತ್ತು ಮಾನಸಿಕವಾಗಿ ನೊಂದಿರುವವರಿಗೆ ಆಪ್ತ ಸಲಹೆ ನೀಡುವ ವಿವಿಧ ಚಟುವಟಿಕೆಗಳನ್ನು ಆರೋಗ್ಯ ರಕ್ಷಕಿಯರು ನಡೆಸುತ್ತಿದ್ದಾರೆ.
- ಅನೇಕ ಬಡ ಗರ್ಭಿಣಿ ಹೆಂಗಸರು ಇವರ ಸಹಾಯದಿಂದ ಉತ್ತಮ ಆಸ್ಪತ್ರೆಗಳಲ್ಲಿ ಉಚಿತ ಹೆರಿಗೆ ಸೌಲಭ್ಯವನ್ನು ಪಡೆದಿದ್ದಾರೆ.
- ಈವರೆಗೆ ಸಾವಿರಾರು ಮಹಿಳೆಯರು ತಮ್ಮ ಆರೋಗ್ಯದ ಸಮಸ್ಯೆಗಳನ್ನು ಇವರ ಮುಂದೆ ಹಂಚಿಕೊಂಡು ಪರಿಹರಿಸಿಕೊಂಡಿದ್ದಾರೆ. ಸಮಾಧಾನ ಪಟ್ಟಿದ್ದಾರೆ. ಇವರ ಮೂಲಕ ಸೇವಾಬಸ್ತಿಯ ಮನೆಗಳ ಸರ್ವೇಕ್ಷಣೆ ನಡೆಸಿ





ಅನಾರೋಗ್ಯದ ಕಾರಣವನ್ನು ಪತ್ತೆ ಹಚ್ಚಲಾಗುತ್ತಿದೆ. ನಿರಂತರವಾಗಿ ವಿವಿಧ ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸಲಾಗುತ್ತಿದೆ. ಅನಾರೋಗ್ಯಕ್ಕೆ ಕಾರಣವಾದ ಅನೈರ್ಮಲ್ಯ ವಾತಾವರಣವನ್ನು ದೂರಗೊಳಿಸಲು ಜನರಲ್ಲಿ ಜಾಗೃತಿ ಮೂಡಿಸುವ ಸಂವಾದ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

- ಪ್ರಸ್ತುತ ಕೆ.ಪಿ. ಅಗ್ರಹಾರದ ಸುತ್ತಲಿನ 5 ಸೇವಾಬಸ್ತಿಗಳಲ್ಲಿ ಹಾಗೂ ಸಿದ್ದಾಪುರ ಸುತ್ತಲಿನ 6 ಸೇವಾಬಸ್ತಿಗಳ ಆರೋಗ್ಯ ರಕ್ಷಕಿಯರು ಶ್ರಮಿಸುತ್ತಿದ್ದಾರೆ.
- ಈ ವರ್ಷ ಗಂಭೀರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದ 126 ರೋಗಿಗಳಿಗೆ ರಂಗದೊರೆ, ಜಯದೇವ, ವಿಕ್ಟೋರಿಯಾ ಮುಂತಾದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

## ಆ) ಕಿಶೋರಿಯರ ಜಾಗೃತಿ ಕಾರ್ಯಕ್ರಮ:

ಸೇವಾಬಸ್ತಿಗಳ ಕಿಶೋರಿಯರಲ್ಲಿ ಉಂಟಾಗುವ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳಿಗೆ ಸಮಾಧಾನ ನೀಡುವ, ಸಮಾಲೋಚನೆ ಮಾಡುವ ಮತ್ತು ಆ ಬಗ್ಗೆ ಅವರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ.

ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ಮಾನಸಿಕ ವೈದ್ಯರ ತಂಡ 'ತಮಸೋಮ ಜ್ಯೋತಿರ್ಗಮಯ' ಎಂಬ ಕಿರುನಾಟಕದ ಮೂಲಕ ಪರಿಸ್ಥಿತಿಯ ಒತ್ತಡದಿಂದಾಗಿ ಕಿಶೋರ ಕಿಶೋರಿಯರಲ್ಲಿ ಉಂಟಾಗುವ ಮಾನಸಿಕ ಒತ್ತಡಗಳಿಗೆ ಪರಿಹಾರದ ಕುರಿತು ಜಾಗೃತಿ ಮೂಡಿಸಿದರು. ನಾಟಕದ ನಂತರ ವೈದ್ಯರು ಸಂವಾದ ನಡೆಸಿ ಸಲಹೆ ನೀಡಿದರು. ಬೆಂಗಳೂರಿನ ಕೆ.ಪಿ. ಅಗ್ರಹಾರ, ನೇತಾಜಿನಗರ, ಮಾರುತಿನಗರ, ಹಳೆಗುಡ್ಡದಹಳ್ಳಿ, ಸೇವಾಬಸ್ತಿಗಳಲ್ಲಿ ಜುಲೈ 19, 23, 26 ಮತ್ತು 30ರಂದು ನಡೆಯಿತು. ವಿಕ್ಟೋರಿಯಾ ಆಸ್ಪತ್ರೆಯ ಮಾನಸಿಕ ಆರೋಗ್ಯ ವಿಭಾಗದ ಪ್ರೊಫೆಸರ್ ಡಾ॥ ಪ್ರಶಾಂತ್ ಹಾಗೂ ಮನಃಶಾಸ್ತ್ರದ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಇ) ಉಚಿತ ಚಿಕಿತ್ಸಾಲಯ

ಸೇವಾಬಸ್ತಿಯ ಜನರ ಸಾಮಾನ್ಯ ರೋಗಗಳಿಗೆ ಚಿಕಿತ್ಸೆ ನೀಡುವ ಸಲುವಾಗಿ ಕೆಂಪಾಪುರ ಅಗ್ರಹಾರ ಮತ್ತು ವಿ.ವಿ. ಗಿರಿ ಸೇವಾಬಸ್ತಿಯಲ್ಲಿ ನಿಯಮಿತವಾಗಿ ಉಚಿತ ಚಿಕಿತ್ಸಾ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಈ ವರ್ಷ ಒಟ್ಟು 712 ಮಂದಿ ಇದರ ಪ್ರಯೋಜನ ಪಡೆದಿದ್ದಾರೆ.

## ಈ) ಆರೋಗ್ಯ ಮತ್ತು ನೇತ್ರ ತಪಾಸಣಾ ಶಿಬಿರಗಳು

ವಿವಿಧ ಆಸ್ಪತ್ರೆಗಳ, ಸಂಸ್ಥೆಗಳ ಸಹಯೋಗದೊಂದಿಗೆ (ಲಯನ್ಸ್ ಕಣ್ಣಾಸ್ಪತ್ರೆ, ಬಿಜಿಎಸ್ ಗ್ಲೋಬಲ್ ಆಸ್ಪತ್ರೆ, ಡಾಕ್ಟರ್ಸ್ ಫಾರ್ ಸೇವಾ, ರೋಟರಿ ಕ್ಲಬ್, ಮದನ ಮೋಹನ ಮಾಳವೀಯ ಮಿಷನ್ ಇತ್ಯಾದಿ) ವಿವಿಧ ಸೇವಾಬಸ್ತಿಗಳಲ್ಲಿ ನಿಯಮಿತವಾಗಿ ಉಚಿತ ಸ್ವಾಸ್ಥ್ಯ ಸಂಬಂಧಿ ಶಿಬಿರಗಳನ್ನು ನಡೆಸಲಾಗುತ್ತಿದೆ.

| | ಶಿಬಿರ ಸಂಖ್ಯೆ | ಮಾತೆಯರು | ಪುರುಷರು | ಒಟ್ಟು | ಕನ್ನಡಕ ಪಡೆದವರು | ಚಿಕಿತ್ಸೆ ಪಡೆದವರು |
|---|---|---|---|---|---|---|
| ನೇತ್ರ ತಪಾಸಣಾ ಶಿಬಿರ | 2 | 198 | 126 | 324 | 103 | 25 |
| ಆರೋಗ್ಯ ತಪಾಸಣಾ ಶಿಬಿರ | 1 | 220 | 112 | 332 | | |
| ಮಹಿಳಾ ಆರೋಗ್ಯ ತಪಾಸಣೆ ಶಿಬಿರ | 10 | 760 | 339 | 1099 | | 56 |
| ಕಿಶೋರಿಯರ ಜಾಗೃತಿ ಕಾರ್ಯಕ್ರಮ | 67 | | | 1474 | | |
| ಮಕ್ಕಳ ಆರೋಗ್ಯ ತಪಾಸಣಾ ಶಿಬಿರ | 6 | | | 595 | | |



- **ಆರೋಗ್ಯ ತಪಾಸಣಾ:** ರಾಷ್ಟ್ರೀಯ ಸಂಘಟನೆಯಾದ 'ಆರೋಗ್ಯ ಭಾರತಿ' ದೇಶಾದ್ಯಂತ ಸೇವಾಬಸ್ತಿಗಳಲ್ಲಿ ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸಲು ಕರೆ ನೀಡಿದ ಪ್ರಯುಕ್ತ ಜೂನ್ 30ರಂದು ಜಾಗರಣ ಪ್ರಕಲ್ಪದ ಕಾರ್ಯಕರ್ತರು 16 ಸೇವಾಬಸ್ತಿಗಳಲ್ಲಿ ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸಿದರು. ಸ್ಥಾನೀಯ ವೈದ್ಯರು ಸಹಕಾರ ನೀಡಿದರು.
- **ಆಯುರ್ವೇದಿಕ್ ತಪಾಸಣೆ:** ಜನರಲ್ಲಿ ಆರೋಗ್ಯ ರಕ್ಷಣೆ ಹಾಗೂ ಆಯುರ್ವೇದದ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ಜುಲೈ 28ರಂದು ಬೆಂಗಳೂರಿನ ಕಮಲಾನಗರ ಸೇವಾಬಸ್ತಿಯಲ್ಲಿ ಆಯುರ್ವೇದ ಆರೋಗ್ಯ ತಪಾಸಣಾ ಶಿಬಿರವನ್ನು ನಡೆಸಲಾಯಿತು. ಆಯುರ್ವೇದ ವೈದ್ಯರು ಆಗಮಿಸಿ ತಪಾಸಣೆ ಚಿಕಿತ್ಸೆ ನೀಡಿದರು. ಶಿಬಿರದಲ್ಲಿ 45 ಮಂದಿ ಭಾಗವಹಿಸಿ ಚಿಕಿತ್ಸೆ ಪಡೆದರು.
- **ಮಕ್ಕಳ ನೇತ್ರ ಪರೀಕ್ಷೆ:** ವ್ಯಾಸಂಗ ಕೇಂದ್ರಗಳ ವಿದ್ಯಾರ್ಥಿಗಳಲ್ಲಿ ದೃಷ್ಟಿ ದೋಷವಿರುವುದನ್ನು ಗಮನಿಸಿ ಮಕ್ಕಳ ನೇತ್ರ ತಪಾಸಣಾ ಶಿಬಿರ ಆಯೋಜಿಸಲಾಯಿತು. ಮಕ್ಕಳಲ್ಲಿನ ದೃಷ್ಟಿ ದೋಷ ಅರಿಯಲು ಅಗತ್ಯವಾದ ಚಾರ್ಟ್‌ಗಳನ್ನು ವ್ಯಾಸಂಗ ಕೇಂದ್ರಗಳ ಮೇಲ್ವಿಚಾರಕರಿಗೆ ನೀಡಲಾಯಿತು. 341 ಮಕ್ಕಳಿಗೆ ದೃಷ್ಟಿ ದೋಷವಿರುವುದು ಗುರುತಿಸಿ ಅವರಿಗೆ ಲಯನ್ಸ್ ಕಣ್ಣಾಸ್ಪತ್ರೆಯ ನೆರವಿನಿಂದ ಚಿಕಿತ್ಸೆ ಕನ್ನಡಕ ನೀಡಲಾಯಿತು.

## ಸಂಸ್ಕಾರ

### ಅ) ಬಾಲಗೋಕುಲ

ಬಾಲಗೋಕುಲಗಳ ಮೂಲಕ ಸೇವಾಬಸ್ತಿಯಲ್ಲಿರುವ ಮಕ್ಕಳಲ್ಲಿ ಉತ್ತಮ ಗುಣಗಳನ್ನು ಬೆಳೆಸುವ ಕಾರ್ಯವನ್ನು ನಡೆಸಲಾಗುತ್ತಿದೆ. ಪ್ರಸ್ತುತ 200 ಬಾಲಗೋಕುಲಗಳು ನಡೆಯುತ್ತಿದ್ದು, ನಾಲ್ಕು ಸಾವಿರಕ್ಕೂ ಅಧಿಕ ಮಕ್ಕಳು ಭಾಗವಹಿಸುತ್ತಿದ್ದಾರೆ.

### ಆ) ದೇವಸ್ಥಾನ ಕೇಂದ್ರಿತ ಚಟುವಟಿಕೆ

ಸೇವಾಬಸ್ತಿಯಲ್ಲಿರುವ ದೇವಸ್ಥಾನವನ್ನು ಕೇಂದ್ರಿತವಾಗಿರಿಸಿ ವಿವಿಧ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಈ ಮೂಲಕ ಸೇವಾಬಸ್ತಿಯ ಜನರಲ್ಲಿ ಸಂಸ್ಕಾರ ನೀಡುವ ಪ್ರಯತ್ನ ನಡೆಯುತ್ತಿದೆ. ಕೆಂಪಾಪುರ ಅಗ್ರಹಾರದ ರಾಷ್ಟ್ರೋತ್ಥಾನ ಸೇವಾಧಾಮದಲ್ಲಿರುವ ಶ್ರೀ ಗಣೇಶ ದೇವಸ್ಥಾನದ ಮೂಲಕ ಸುತ್ತಲಿನ ಜನರಿಗೆ ಧಾರ್ಮಿಕ ಭಾವನೆ ಜಾಗೃತಗೊಳಿಸುವ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ.

### ಇ) ಶಿಶುಮಂದಿರ

ಸೇವಾಬಸ್ತಿಗಳಲ್ಲಿ ವಾಸಿಸುವ ಜನರು ತಮ್ಮ ಆರ್ಥಿಕ ಸ್ಥಿತಿಯ ಸುಧಾರಣೆಗಾಗಿ ಮಹಿಳೆಯರೂ ಸೇರಿದಂತೆ ಮನೆಯ ಎಲ್ಲ ಸದಸ್ಯರು ದುಡಿಮೆಗೆ ಹೋಗುತ್ತಾರೆ. ಇದು ಅವರಿಗೆ ಅನಿವಾರ್ಯವೂ ಆಗಿದೆ. ಮನೆಗೆಲಸ, ಬೀದಿ ಕಸಗುಡಿಸಲು, ಊದುಬತ್ತಿ ಫ್ಯಾಕ್ಟರಿ ಮುಂತಾದ ಕೆಲಸಗಳಿಗೆ ಹೋಗುವ ತಾಯಂದಿರು ಬೆಳಗ್ಗೆಯಿಂದ ಸಂಜೆಯವರೆಗೆ ಮನೆಯಿಂದ ಹೊರಗಿರುವ ಪರಿಸ್ಥಿತಿಯಿದೆ. ಇಂತಹ ಸಂದರ್ಭದಲ್ಲಿ ಅವರ ಮಕ್ಕಳು?

ಇಂತಹವರಿಗೆ ನೆರವಾಗುವ ಉದ್ದೇಶದಿಂದ ಜಾಗರಣ ಪ್ರಕಲ್ಪದ ವತಿಯಿಂದ ಬೆಂಗಳೂರಿನ ವಿ.ವಿ.ಗಿರಿ ಕಾಲೋನಿ, ಕೆಂಪಾಪುರ ಅಗ್ರಹಾರ, ನ್ಯೂಗುರಪ್ಪನ ಪಾಳ್ಯ, ಕಾಮಾಕ್ಷಿಪಾಳ ಸೇವಾಬಸ್ತಿಗಳಲ್ಲಿ ಕಳೆದ 7 ವರ್ಷಗಳಿಂದ ಶಿಶುಮಂದಿರಗಳನ್ನು ನಡೆಸಲಾಗುತ್ತಿದೆ. ಎರಡೂವರೆಯಿಂದ 5 ವರ್ಷದ ಒಳಗಿನ ಮಕ್ಕಳಿರುವ ತಾಯಂದಿರು ತಮ್ಮ ಮಕ್ಕಳನ್ನು ಈ ಶಿಶುಮಂದಿರಗಳಲ್ಲಿ ಬಿಟ್ಟು ಕೆಲಸಗಳಿಗೆ ಹೋಗುತ್ತಾರೆ. ಅಲ್ಲಿ ಶಿಕ್ಷಕಿಯರು ಆ ಮಕ್ಕಳಿಗೆ ಊಟದ ಜೊತೆಗೆ ಆಟ, ಹಾಡು ಮುಂತಾದ ಮನೋವಿಕಾಸದ ಚಟುವಟಿಕೆಗಳನ್ನು ನಡೆಸಿಕೊಡುತ್ತಾರೆ.

ಪ್ರಸ್ತುತ 3 ಶಿಶುಮಂದಿರಗಳಲ್ಲಿ ಒಟ್ಟು 160 ಮಕ್ಕಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

## ಸೇವಾಬಸ್ತಿಯಲ್ಲಿ ನಡೆಸಿದ ವಿವಿಧ ಕಾರ್ಯಕ್ರಮಗಳು

ಸೇವಾಬಸ್ತಿಯನ್ನು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಸಾಂಸ್ಕೃತಿಕವಾಗಿ ಮುನ್ನೆಲೆಗೆ ತರುವ ಸಲುವಾಗಿ ವ್ಯಾಸಂಗ ಕೇಂದ್ರಗಳನ್ನು ಕೇಂದ್ರವಾಗಿರಿಸಿಕೊಂಡು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

- **ಬೇಸಿಗೆ ಶಿಬಿರ:** ಮಕ್ಕಳು ಬೇಸಿಗೆ ರಜೆಯನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂಬ ಆಶಯದಿಂದ ಪ್ರತಿವರ್ಷ ಸೇವಾಬಸ್ತಿಗಳಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗುತ್ತಿದೆ. ಈ ವರ್ಷ ಏಪ್ರಿಲ್ 1 ರಿಂದ 13ರ ವರೆಗೆ 112 ಸೇವಾಬಸ್ತಿಗಳಲ್ಲಿ ನಡೆದ ಬೇಸಿಗೆ ಶಿಬಿರಗಳಲ್ಲಿ 3 ಸಾವಿರಕ್ಕೂ ಅಧಿಕ ಮಕ್ಕಳು ಭಾಗವಹಿಸಿದ್ದರು. ಜೋಳಿಗೆ ಪುಸ್ತಕ ಯೋಜನೆಯಲ್ಲಿ ಓದಿದ ಮಹಾಪುರುಷರ ಕಥೆ ಹೇಳುವ ಸ್ಪರ್ಧೆಯನ್ನು ನಡೆಸಲಾಯಿತು.
- **ಅವಲೋಕನ ಮತ್ತು ವಾರ್ಷಿಕ ಯೋಜನೆ ಸಭೆ:** 2018–19ರ ಸಾಲಿನ ಕಾರ್ಯಕ್ರಮಗಳ ಅವಲೋಕನ ಮತ್ತು 2019–20ರ ಸಾಲಿನ ವಾರ್ಷಿಕ ಯೋಜನೆಯನ್ನು ರೂಪಿಸುವ ಸಲುವಾಗಿ ಮೇ ತಿಂಗಳಲ್ಲಿ ಯೋಜನಾ ಸಭೆ ನಡೆಯಿತು. ಕಳೆದ ವರ್ಷ ನಡೆಸಿದ ಕಾರ್ಯಕ್ರಮಗಳು, ಅದರ ಪರಿಣಾಮ, ಫಲಾನುಭವಿಗಳ ಅಭಿಪ್ರಾಯ, ಅಂಕಿಸಂಖ್ಯೆಗಳ ಕುರಿತು ಚರ್ಚಿಸಲಾಯಿತು. ಮಕ್ಕಳಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿ ಮೂಡಿಸುವ ಹಾಗೂ ಮಕ್ಕಳ ಜೊತೆಜೊತೆಗೆ ಅವರ ಪೋಷಕರನ್ನು ವ್ಯಾಸಂಗ ಕೇಂದ್ರದ ಜೊತೆಗೆ ಜೋಡಿಸುವ ಕಾರ್ಯಕ್ರಮಗಳನ್ನು ಸಿದ್ಧಪಡಿಸಲಾಯಿತು. ಹೀಗೆ ಸಿದ್ಧಪಡಿಸಲಾದ ಪಾಠ್ಯಕ್ರಮ ಹಾಗೂ ವ್ಯಕ್ತಿತ್ವವಿಕಾಸ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಪ್ರತೀ ತಿಂಗಳು ಶಿಕ್ಷಕಿಯರ ಪ್ರಶಿಕ್ಷಣ ವರ್ಗ ನಡೆಸಲಾಯಿತು. ವರ್ಗದಲ್ಲಿ ಚರ್ಚೆ, ಬೌದ್ಧಿಕ್, ತರಬೇತಿ ಮುಂತಾದ ಚಟುವಟಿಕೆಗಳು ನಡೆಯಿತು.
- ಪರಿಸರ ದಿನಾಚರಣೆಯಂದು ಸೇವಾಬಸ್ತಿಗಳಲ್ಲಿ ಪರಿಸರ ಸ್ವಚ್ಛತೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಲಾಯಿತು. ವ್ಯಾಸಂಗಕೇಂದ್ರದ ಶಿಕ್ಷಕಿಯರು ಮತ್ತು ವಿದ್ಯಾರ್ಥಿಗಳು ಮನೆಮನೆಗೆ ತೆರಳಿ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿಡಬೇಕೆಂದು ಮನವಿ ಮಾಡಿದರು. ದೇವಸ್ಥಾನ, ಆಸ್ಪತ್ರೆ ಮೊದಲಾದ ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛಗೊಳಿಸಿದರು.
- ಸೇವಾಬಸ್ತಿಯ ಜನರಲ್ಲಿ ಸಹೋದರತೆ ಮೂಡಿಸುವ ಹಾಗೂ ವ್ಯಾಸಂಗ ಕೇಂದ್ರದ ವಿದ್ಯಾರ್ಥಿಗಳ ಮನೋವಿಕಾಸಕ್ಕಾಗಿ ರಕ್ಷಾಬಂಧನ, ಸಂಕ್ರಾಂತಿ, ಭಾರತಮಾತಾ ಪೂಜನ (108 ಕ್ಲಸ್ಟರ್‌ಗಳಲ್ಲಿ), ದೀಪೋತ್ಸವ (200ಕ್ಕೂ ಹೆಚ್ಚು ಸ್ಥಾನ) ಶಿವರಾತ್ರಿ, ದೀಪಾವಳಿ (ಬೆಂಗಳೂರಿನ ಐಟಿ ಉದ್ಯೋಗಿಗಳು ತಮ್ಮ ದೀಪಾವಳಿ ಉತ್ಸವವನ್ನು ಸೇವಾಬಸ್ತಿಗಳಲ್ಲಿ ಮಕ್ಕಳ ಜೊತೆ ಆಚರಿಸುತ್ತಿದ್ದಾರೆ), ವಿವೇಕಾನಂದ ಜಯಂತಿ (ವಿವೇಕಾನಂದರ ಕುರಿತು ಭಾಷಣ, ಪ್ರಬಂಧ ಸ್ಪರ್ಧೆ ಹಾಗೂ ಗೀತಗಾಯನ ನಡೆಯಿತು) ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.
- ಶ್ರೀಕೃಷ್ಣಜನ್ಮಾಷ್ಟಮಿ, ಸೇವಾಬಸ್ತಿಯ ಜನರಲ್ಲಿ ಏಕತೆ ಮೂಡಿಸುವ ಸಲುವಾಗಿ ಕಳೆದ 16 ವರ್ಷಗಳಿಂದ ನಡೆಯುತ್ತಿದ್ದು, ಇದೀಗ ಸೇವಾಬಸ್ತಿಯ ಎಲ್ಲ ಸಮುದಾಯದ ಜನರು ಪಾಲ್ಗೊಳ್ಳುವ ಮೂಲಕ ಊರಜಾತ್ರೆಯ ಸ್ವರೂಪ







ಪಡೆದಿದೆ. ಸೇವಾಬಸ್ತಿಯ ಎಲ್ಲ ಮನೆಯವರು ತಮ್ಮ ಮನೆಯ ಅಂಗಳದಲ್ಲಿ ರಂಗೋಲಿ ಹಾಕಿ ಕೃಷ್ಣ–ರಾಧೆಯರ ಮೆರವಣಿಗೆಯನ್ನು ಸ್ವಾಗತಿಸಿದರು; ತಾವಾಗಿಯೇ ವಿವಿಧ ಜವಾಬ್ದಾರಿಗಳನ್ನು ವಹಿಸಿಕೊಳ್ಳುತ್ತಿದ್ದಾರೆ. ಈ ವರ್ಷ ಒಟ್ಟು 200ಕ್ಕೂ ಅಧಿಕ ಸೇವಾಬಸ್ತಿಗಳಲ್ಲಿ ಕೃಷ್ಣಾಷ್ಟಮಿ ನಡೆದಿದ್ದು, 8000ಕ್ಕೂ ಅಧಿಕ ಮಕ್ಕಳು ಕೃಷ್ಣ–ರಾಧೆಯರ ವೇಷಧರಿಸಿ ಪಾಲ್ಗೊಂಡಿದ್ದರು. ವೇಷಧಾರಿಗಳಿಂದ ಸೇವಾಬಸ್ತಿಗಳಲ್ಲಿ ಮೆರವಣಿಗೆ, ಮೊಸರು–ಕುಡಿಕೆ ಒಡೆಯುವುದು, ಹಾಡು–ನೃತ್ಯ ಮುಂತಾದ ಕಾರ್ಯಕ್ರಮಗಳು ನಡೆದವು. ಉತ್ಸವಕ್ಕೆ 1 ತಿಂಗಳ ಮೊದಲೇ ವ್ಯಾಸಂಗ ಕೇಂದ್ರಗಳಲ್ಲಿ ಅಗತ್ಯ ತಯಾರಿ ಪ್ರಾರಂಭವಾಗುತ್ತದೆ. ಕಿರೀಟ, ತೋಳುಬಂದಿ, ಕೊಳಲು ಮುಂತಾದ ಅಗತ್ಯ ಸಾಮಗ್ರಿಗಳನ್ನು ಸೇವಾಬಸ್ತಿಯ ತಾಯಂದಿರು, ವ್ಯಾಸಂಗ ಕೇಂದ್ರದ ಶಿಕ್ಷಕಿಯರು ಮತ್ತು ಮಕ್ಕಳು ತಾವೇ ತಯಾರಿಸುತ್ತಾರೆ.

- ಗೋಕುಲೋತ್ಸವ: ಸೇವಾಬಸ್ತಿಯಲ್ಲಿನ ವ್ಯಾಸಂಗ ಕೇಂದ್ರದ ಮಕ್ಕಳ ಪ್ರತಿಭಾ ಪ್ರದರ್ಶನಕ್ಕಾಗಿ 'ಗೋಕುಲೋತ್ಸವ' ಶೀರ್ಷಿಕೆಯಲ್ಲಿ ವಿವಿಧ ಕಾರ್ಯಕ್ರಮ ನಡೆಯಿತು. ಮಕ್ಕಳು ಶ್ರೀಕೃಷ್ಣನ ಬಾಲಲೀಲೆಗಳನ್ನು ನಾಟಕ, ನೃತ್ಯ, ಹಾಡುಗಳ ಮೂಲಕ ಪ್ರದರ್ಶಿಸಿದರು.

- **ಸೇವಾ ಕಾರ್ಯಕರ್ತರ ಸಭೆ:** ಬೆಂಗಳೂರಿನ ಸೇವಾಬಸ್ತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಯಕರ್ತರಿಗಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಸೆಪ್ಟೆಂಬರ್ 22ರಂದು PES ಎಂಜಿನಿಯರಿಂಗ್ ಕಾಲೇಜ್‌ನಲ್ಲಿ ಆಯೋಜಿಸಿದ ಸಭೆಯಲ್ಲಿ ಜಾಗರಣ ಪ್ರಕಲ್ಪದ 23 ಸೇವಾಬಸ್ತಿಗಳ 60 ಮಂದಿ ಪ್ರಮುಖರು ಭಾಗವಹಿಸಿದರು. ರಾ.ಸ್ವ. ಸಂಘದ ಸರಕಾರ್ಯವಾಹ ಭಯ್ಯಾಜಿ ಜೋಷಿ ಅವರು ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಿದರು.





## ಉಲ್ಲೇಖನೀಯ

**ಶಾಲಾ ದಾಖಲಾತಿ:** ಈ ವರ್ಷಾರಂಭದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಸೇರಿಸುವ ಪ್ರಯತ್ನ ನಡೆಸಲಾಯಿತು. ಓದಿನಲ್ಲಿ ಆಸಕ್ತಿ ಇಲ್ಲದೆ, ತಂದೆತಾಯಿಗಳ ಬೇಜವಾಬ್ದಾರಿತನ ಮುಂತಾದ ಕಾರಣಗಳಿಂದ ಶಾಲೆಯಿಂದ ದೂರವಾಗುತ್ತಿರುವ ಮಕ್ಕಳನ್ನು ಮೇಲ್ವಿಚಾರಕರು ಹಾಗೂ ಶಿಕ್ಷಕರ ಸಹಾಯದಿಂದ ಗುರುತಿಸಿ ಅವರಿಗೆ ಅಗತ್ಯ ವ್ಯವಸ್ಥೆ ಮಾಡಲಾಯಿತು. ಸತ್ಯನಗರ ಸೇವಾಬಸ್ತಿಯಲ್ಲಿ ತಂದೆಯ ಸಾವಿನಿಂದಾಗಿ ಶಾಲೆ ತೊರೆದ 4 ಮಕ್ಕಳನ್ನು ಗುರುತಿಸಿ ಶಾಲೆಗೆ ಸೇರಿಸಲಾಯಿತು. ಸರ್ಕಾರೀ ಶಾಲೆಗಳಲ್ಲಿ ನೀಡಿದ ಸಮವಸ್ತ್ರವನ್ನು ಹೊಲಿಸಿಕೊಳ್ಳಲು ಹಣವಿಲ್ಲದೇ ಶಾಲೆ ತ್ಯಜಿಸಿದ 2 ಬಾಲಕರನ್ನು ಶಾಲೆಗೆ ಸೇರಿಸಿ, ಸಮವಸ್ತ್ರವನ್ನು ಮೇಲ್ವಿಚಾರಕಿಯೇ ಹೊಲಿಸಿಕೊಟ್ಟರು. ಹೀಗೆ 8 ಮಂದಿ ವಿದ್ಯಾರ್ಥಿಗಳನ್ನು ಈ ಬಾರಿ ಪುನಃ ಶಾಲೆಗೆ ಸೇರಿಸಲಾಯಿತು.

**ಸ್ಕೂಲ್ ಬ್ಯಾಗ್ ವಿತರಣೆ:** ಸೇವಾಬಸ್ತಿಯ 800ಕ್ಕೂ ಅಧಿಕ ಮಕ್ಕಳಿಗೆ ಯೂತ್ ಫಾರ್ ಸೇವಾ ಸಂಸ್ಥೆಯ ಮೂಲಕ ಸ್ಕೂಲ್ ಬ್ಯಾಗ್ ಮತ್ತು ಪುಸ್ತಕಗಳನ್ನು ವಿತರಿಸಲಾಯಿತು.

**ಉನ್ನತ ವಿದ್ಯಾಭ್ಯಾಸ ಪೂರೈಸಿದ ವ್ಯಾಸಂಗಕೇಂದ್ರದ ವಿದ್ಯಾರ್ಥಿಗಳು:** ಸೇವಾಬಸ್ತಿಯ ಮಕ್ಕಳಿಗೆ 10ನೇ ತರಗತಿಯ ವರೆಗೆ ಶಿಕ್ಷಣ ನೀಡಲು ವ್ಯಾಸಂಗ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಹೀಗೆ 10ನೇ ತರಗತಿ ಪೂರೈಸಿದ ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸಕ್ಕೆ ನೆರವು ನೀಡುವ ಪ್ರಯತ್ನವೂ ಜಾಗರಣ ಪ್ರಕಲ್ಪ ಮಾಡುತ್ತಿದೆ. ಇಂದು ನಮ್ಮ ವ್ಯಾಸಂಗ ಕೇಂದ್ರದಲ್ಲಿ ಶಿಕ್ಷಣ ಪಡೆದ ಸೇವಾಬಸ್ತಿಗಳ ಹತ್ತಾರು ಮಂದಿ ಪ್ರತಿಷ್ಠಿತ ಹುದ್ದೆಗಳಲ್ಲಿದ್ದಾರೆ. ಕಾವಲ್‌ಭೈರಸಂದ್ರದ ಸುನೀಲ್ ಇಂಜಿನಿಯರಿಂಗ್ ಪೂರೈಸಿ ಸಿಂಗಾಪುರದಲ್ಲಿ ಉದ್ಯೋಗ ಪಡೆದಿದ್ದಾರೆ.

**ಎಲ್ಲ ಮನೆಗಳಲ್ಲಿ ಸುಶಿಕ್ಷಿತರು:** ಎಚ್‌ಎಎಲ್ ಸುಧಾಮನಗರ 200ಕ್ಕೂ ಹೆಚ್ಚು ಮನೆ ಹೊಂದಿದ ಸೇವಾಬಸ್ತಿ. ಇಲ್ಲಿ ಕಳೆದ 2 ದಶಕಗಳಿಂದ ಜಾಗರಣ ಪ್ರಕಲ್ಪದ ಚಟುವಟಿಕೆ ನಡೆಯುತ್ತಿದೆ. ಅದರ ಪರಿಣಾಮವಾಗಿ ಪ್ರಸ್ತುತ ಇಲ್ಲಿಯ ಎಲ್ಲರೂ ಶಿಕ್ಷಿತರು ಮತ್ತು ಪ್ರತಿ ಮನೆಯಲ್ಲೂ ಉನ್ನತ ವ್ಯಾಸಂಗ ಮಾಡಿದವರಿದ್ದಾರೆ. ಇವರೆಲ್ಲರೂ ನಮ್ಮ ವ್ಯಾಸಂಗಕೇಂದ್ರದಲ್ಲಿ ಕಲಿತವರು.

ಲಗ್ಗೆರೆ ಸೇವಾಬಸ್ತಿಯ ಮೇಲ್ವಿಚಾರಕರಾಗಿರುವ ಹೈಸ್ಕೂಲ್ ಶಿಕ್ಷಕ ಲಿಂಗರಾಜ್ ಅವರು ತಮ್ಮ ಶಾಲೆ ಹಾಗೂ ಸೇವಾಬಸ್ತಿಯಲ್ಲಿರುವ 10ನೇ ತರಗತಿಯ

ವಿದ್ಯಾರ್ಥಿಗಳಿಗೆ ತಪಸ್ ಪರೀಕ್ಷೆ ಬರೆಯಲು ಪ್ರೋತ್ಸಾಹಿಸಿ, ಅಗತ್ಯ ತರಬೇತಿ ನೀಡುತ್ತಿದ್ದಾರೆ. ಅವರ ಪ್ರಯತ್ನದಿಂದಾಗಿ ಈ ವರ್ಷ 2 ವಿದ್ಯಾರ್ಥಿಗಳು ತಪಸ್‌ಗೆ ಆಯ್ಕೆಯಾಗಿದ್ದಾರೆ.

**ಸಂಕಷ್ಟದಲ್ಲಿದ್ದ ಗೋಪಾಲಕನಿಗೆ ಸಹಾಯ:** ಕಾವಲ್‌ಭೈರಸಂದ್ರದ ಗೋಪಾಲಕ ಆರ್ಥಿಕ ಸಂಕಷ್ಟದಿಂದ ಗೋವನ್ನು ಮಾರಲು ನಿಶ್ಚಯಿಸಿದ. ಈ ವಿಷಯ ತಿಳಿದ ವ್ಯಾಸಂಗ ಕೇಂದ್ರಗಳ ಶಿಕ್ಷಕಿಯರು, ಮಕ್ಕಳು, ತಾಯಂದಿರು ಸಂಕ್ರಾಂತಿ ಪ್ರಯುಕ್ತ ಗೋಪಾಲಕನಿಗೆ ಅಗತ್ಯ ಬೂಸಾ, ಹಿಂಡಿ ಒದಗಿಸಿದರು. ಹೀಗೆ ಕೆಲ ತಿಂಗಳುಗಳ ಕಾಲ ಮುಂದುವರಿಸಿದರು. ಗೋಪಾಲಕ ತನ್ನ ಕಷ್ಟ ನಿವಾರಣೆಯಾಗಿದೆ ಎಂದು ಶಿಕ್ಷಕಿಯರಿಗೆ ಧನ್ಯವಾದ ತಿಳಿಸಿ, ಸಹಾಯ ಮುಂದುವರಿಕೆ ಬೇಡ ಎಂದರು.

**ಸರ್ಕಾರೀ ಶಾಲೆಗಳ ಮಕ್ಕಳಿಗೆ ಸಂಸ್ಕಾರ ಶಿಕ್ಷಣ:** ಸರ್ಕಾರೀ ಶಾಲೆಗಳ ಮಕ್ಕಳಿಗೂ ಸಂಸ್ಕಾರ ಸಿಗಬೇಕು ಎಂಬ ಆಶಯದಿಂದ ಸ್ಥಳೀಯ ಸರ್ಕಾರೀ ಶಾಲೆಗಳ ಪ್ರಮುಖರ ಅನುಮತಿ ಪಡೆದು ಸಂಸ್ಕಾರ ನೀಡುವ ಪ್ರಯತ್ನ ನಡೆಸಲಾಯಿತು. ಹೀಗೆ ಹಲವು ಸೇವಾಬಸ್ತಿಗಳ ಶಿಕ್ಷಕಿಯರು ತಮ್ಮ ಸುತ್ತಮುತ್ತಲಿನ ಸರ್ಕಾರೀ ಶಾಲೆಗಳಲ್ಲಿ ದೇಶಭಕ್ತಿಗೀತೆ, ಭಜನೆ, ಮಹಾಪುರುಷರ ಕಥೆಗಳು, ಭಗವದ್ಗೀತೆ, ಶ್ಲೋಕ, ಕಬೀರರ ದೋಹೆಗಳನ್ನು ಕಲಿಸುತ್ತಿದ್ದಾರೆ.





## ಪ್ರಕಲ್ಪದ ಚಟುವಟಿಕೆಗಳ ಪರಿಣಾಮ

- ಶಾಲೆಯಿಂದ ಹೊರಗುಳಿವ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ. ಶಾಲೆಗೆ ಹೋಗುವ ಹುಡುಗಿಯರ ಸಂಖ್ಯೆ ಹೆಚ್ಚಿದೆ. ಉನ್ನತ ವಿದ್ಯಾಭ್ಯಾಸ ಮಾಡುತ್ತಿರುವವರ ಸಂಖ್ಯೆ ಹೆಚ್ಚಾಗಿದೆ.
- ಸೇವಾಬಸ್ತಿಗಳು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಸದೃಢವಾಗುತ್ತಿವೆ.
- ಕಂಪ್ಯೂಟರ್, ಹೊಲಿಗೆ ಮುಂತಾದ ತರಬೇತಿ ಕೇಂದ್ರಗಳಿಂದಾಗಿ ಸೇವಾಬಸ್ತಿಯ ಯುವತಿಯರು ಸ್ವಾವಲಂಬಿಗಳಾಗಿದ್ದಾರೆ. ಅನೇಕರು ಸ್ವಂತ ಅಂಗಡಿಗಳನ್ನೂ ನಡೆಸುತ್ತಿದ್ದಾರೆ.
- ಸೇವಾಬಸ್ತಿಯಲ್ಲಿ ಭಾರತೀಯ ಮೌಲ್ಯಗಳ ಜಾಗೃತಿ ಹಾಗೂ ಧಾರ್ಮಿಕ–ಹಿಂದುತ್ವ ವಿಚಾರಗಳಿಗೆ ಪ್ರಾಧಾನ್ಯತೆ ಮೂಡುತ್ತಿದೆ. ಸಾಮಾಜಿಕ ಸಾಮರಸ್ಯ ಮೂಡುತ್ತಿದೆ.
- ಸೇವಾಬಸ್ತಿಯ ಅನೇಕ ಪ್ರಮುಖರು ಹಿರಿಯರು ಪ್ರಕಲ್ಪದ ವಿವಿಧ ಚಟುವಟಿಕೆಗಳೊಂದಿಗೆ ಜೋಡಿಸಿಕೊಂಡಿದ್ದಾರೆ.

# ನಂದಗೋಕುಲ

ತಂದೆತಾಯಿಯರ ಪಾಲನೆ–ಪೋಷಣೆಯಿಂದ ವಂಚಿತರಾದ ಮಕ್ಕಳಿಗೆ ಆಶ್ರಯ ನೀಡುವ ಸಲುವಾಗಿ 'ನಂದಗೋಕುಲ' ಕಾರ್ಯನಿರ್ವಹಿಸುತ್ತಿದೆ




ನಾಗರಬಾವಿ ಮತ್ತು ಕಾಮಾಕ್ಷಿಪಾಳ್ಯದ ರಾಷ್ಟ್ರೋತ್ಥಾನ ಶಿಶುಮಂದಿರ – ಎರಡು ಕಡೆಗಳಲ್ಲಿ ನಂದಗೋಕುಲದ ಚಟುವಟಿಕೆಗಳು ನಡೆಯುತ್ತಿದೆ.

ಧಾರವಾಡ, ಚಾಮರಾಜನಗರ, ಮಂಡ್ಯ, ಗುಬ್ಬಿ, ದೊಡ್ಡಬಳ್ಳಾಪುರ, ಬೆಂಗಳೂರು – ಮುಂತಾದ ಸ್ಥಳಗಳ ಒಟ್ಟು 32 ಮಕ್ಕಳು ಇಲ್ಲಿ ಆಶ್ರಯ ಪಡೆದಿದ್ದಾರೆ. ಈ ಮಕ್ಕಳಿಗೆ ಊಟ, ವಸತಿ ಹಾಗೂ ಶಾಲಾ ಶಿಕ್ಷಣದ ಜೊತೆಗೆ ಅವರ ಸರ್ವತೋಮುಖ ವಿಕಾಸಕ್ಕಾಗಿ ಹಲವು ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.

## ಅ) ನಾಗರಬಾವಿಯ ನಂದಗೋಕುಲ

ದಿವಂಗತ ನಂದಕುಮಾರ್ ಅವರು ದಾನವಾಗಿ ನೀಡಿದ ನಾಗರಭಾವಿಯ ಜಾಗದಲ್ಲಿ 2007ರಲ್ಲಿ ನಂದಗೋಕುಲದ ಚಟುವಟಿಕೆಗಳು ಪ್ರಾರಂಭವಾಯಿತು. ಪ್ರಸ್ತುತ 16 ಮಕ್ಕಳು ಆಶ್ರಯ ಪಡೆದಿದ್ದಾರೆ.

- **ಮಕ್ಕಳ ಸಂರಕ್ಷಣಾ ಆಯೋಗದಿಂದ ಮೆಚ್ಚುಗೆ:** ಕೇಂದ್ರ ಹಾಗೂ ರಾಜ್ಯ ಮಕ್ಕಳ ಸಂರಕ್ಷಣಾ ಅಧಿಕಾರಿಗಳು ನಂದಗೋಕುಲಕ್ಕೆ ಭೇಟಿ ನೀಡಿ ವ್ಯವಸ್ಥೆಗಳನ್ನು ಪರಿಶೀಲಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಆಯ್ದ ಸ್ವಯಂಸೇವಾ ಸಂಸ್ಥೆಗಳ ಕಾರ್ಯಕರ್ತರಿಗಾಗಿ ಕರ್ನಾಟಕ ರಾಜ್ಯ ಮಕ್ಕಳ ಸಂರಕ್ಷಣಾ ಘಟಕವು ಆಯೋಜಿಸಿದ 3 ದಿನಗಳ ತರಬೇತಿಗೆ ನಮ್ಮ ನಂದಗೋಕುಲವು ಆಯ್ಕೆಯಾಗಿದ್ದು, ತರಬೇತಿಯಲ್ಲಿ 2 ಶಿಕ್ಷಕರು (ಪುಷ್ಪಾವತಿ ಮತ್ತು ರವಿಕುಮಾರ್) ಭಾಗವಹಿಸಿದರು. ಈ ತರಬೇತಿಯಲ್ಲಿ ಕರ್ನಾಟಕ ರಾಜ್ಯದ ಹಲವು ಜಿಲ್ಲೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.
- 8ನೇ ತರಗತಿಯ ರವಿಕುಮಾರ್ National Means cum Merit Scholarship ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾನೆ. ಆತನಿಗೆ ಮಾಸಿಕ 1000 ರೂ. ಸ್ಕಾಲರ್‌ಶಿಪ್ ಲಭಿಸಿದೆ.
- ಉಚಿತ ಐಟಿ ಶಿಕ್ಷಣ ನೀಡುವ ತಪಸ್ ಯೋಜನೆಗೆ ನಂದಗೋಕುಲದ ಗೌತಮ್ ಆಯ್ಕೆಯಾಗಿದ್ದಾನೆ.
- ನಂದಗೋಕುಲದ ಮಕ್ಕಳು ಆಗಸ್ಟ್ 21ರಂದು ಸುಂಕದಕಟ್ಟೆಯ ಗಂಗೋತ್ರಿ ಶಾಲೆಯಲ್ಲಿ ನಡೆದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದಾರೆ. ಈ ವರ್ಷ 8 ಮಕ್ಕಳು ಜಾನಪದ ನೃತ್ಯ, 3 ಮಕ್ಕಳು ರಸಪ್ರಶ್ನೆ ಹಾಗೂ ಒಬ್ಬ ವಿದ್ಯಾರ್ಥಿ ಚಿತ್ರಕಲೆಯಲ್ಲಿ ಪ್ರಶಸ್ತಿ ಗಳಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ 25 ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.





## ಅ) ರಾಷ್ಟ್ರೋತ್ಥಾನ ಮಕ್ಕಳ ಮಂದಿರ

ಕಾಮಾಕ್ಷಿಪಾಳ್ಯದಲ್ಲಿರುವ 'ರಾಷ್ಟ್ರೋತ್ಥಾನ ಮಕ್ಕಳ ಮಂದಿರ'ದಲ್ಲಿ 16 ಮಕ್ಕಳು ಆಶ್ರಯ ಪಡೆದಿದ್ದಾರೆ. ಈ ಮಕ್ಕಳ ವಿಕಾಸಕ್ಕಾಗಿ ಕಾಮಾಕ್ಷಿಪಾಳ್ಯದ ಅನೇಕರು ಹಿತೈಷಿಗಳಾಗಿ ಕೈಜೋಡಿಸಿದ್ದಾರೆ.

## ಮಕ್ಕಳ ಮನೋವಿಕಾಸಕ್ಕಾಗಿ ನಡೆಸಿದ ಕಾರ್ಯಕ್ರಮಗಳು

- **ಗುರುವಂದನ:** ಮಕ್ಕಳಲ್ಲಿ ಗುರುಹಿರಿಯರ ಬಗೆಗೆ ಗೌರವ ಮೂಡಿಸುವ ದೃಷ್ಟಿಯಿಂದ ಗುರುಪೂರ್ಣಿಮೆಯಂದು ನಂದಗೋಕುಲದಲ್ಲಿ ಮಕ್ಕಳು ತಾವು ಓದುವ ಶಾಲೆಯ ಶಿಕ್ಷಕರಿಗೆ ವಂದನೆ ಸಲ್ಲಿಸುವ 'ಗುರುವಂದನ' ಕಾರ್ಯಕ್ರಮವನ್ನು ಆಯೋಜಿಸಲಾಯಿತು.
- ಮಕ್ಕಳಲ್ಲಿ ಸಾಮೂಹಿಕತೆ, ಸಾಮರಸ್ಯ, ಭಾರತೀಯ ಮೌಲ್ಯಗಳ ಜಾಗರಣೆಗಾಗಿ ರಕ್ಷಾಬಂಧನ, ಗಣೇಶೋತ್ಸವ, ದೀಪಾವಳಿ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.
- ಕಳೆದ ನಾಲ್ಕು ವರ್ಷಗಳಿಂದ ಬೆಂಗಳೂರಿನ ಖ್ಯಾತ ಸಾಫ್ಟ್‌ವೇರ್ ಇಂಜಿನಿಯರ್‌ಗಳ ತಂಡವು ನಂದಗೋಕುಲದ ಮಕ್ಕಳೊಂದಿಗೆ ದೀಪಾವಳಿ ಆಚರಿಸಿಕೊಳ್ಳುತ್ತಿದೆ. ಆ ತಂಡದವರು ನಂದಗೋಕುಲದಲ್ಲಿ ದೀಪ ಬೆಳಗಿಸಿ ಪಟಾಕಿ ಹೊಡೆದು ಸಂಭ್ರಮಿಸಿದರು.
- ಹಲವು ಸಂಘಟನೆಗಳ ಕಾರ್ಯಕರ್ತರು ನಂದಗೋಕುಲಕ್ಕೆ ಭೇಟಿ ನೀಡಿ, ಹುಟ್ಟುಹಬ್ಬ ಮುಂತಾದ ವಿಶೇಷ ದಿನಗಳನ್ನು ಇಲ್ಲಿಯ ಮಕ್ಕಳೊಂದಿಗೆ ಆಚರಿಸುತ್ತಿದ್ದಾರೆ.

# ಆರೋಗ್ಯಸೇವಾ ಕೇಂದ್ರ




## ರಾಷ್ಟ್ರೋತ್ಥಾನ ರಕ್ತಕೇಂದ್ರ

ರಕ್ತದ ಅಗತ್ಯ ಇರುವವರಿಗೆ ಸಮಯಕ್ಕೆ ಸರಿಯಾಗಿ ರಕ್ತ ಸಿಗಬೇಕು ಮತ್ತು ಯಾವುದೇ ವ್ಯಕ್ತಿ ಬರಿಗೈಯಲ್ಲಿ ಹಿಂದಿರುಗಬಾರದು ಎಂಬ ಸಾಮಾಜಿಕ ಕಳಕಳಿಯಿಂದ ರಾಷ್ಟ್ರೋತ್ಥಾನ ರಕ್ತಕೇಂದ್ರ ಮೇ 30, 1993ರಂದು ಆರಂಭವಾಯಿತು.

## ಅ) ರಾಷ್ಟ್ರೋತ್ಥಾನ ರಕ್ತಕೇಂದ್ರ

ರಕ್ತದ ಅಗತ್ಯ ಇರುವವರಿಗೆ ಸಮಯಕ್ಕೆ ಸರಿಯಾಗಿ ರಕ್ತ ಸಿಗಬೇಕು ಮತ್ತು ಯಾವುದೇ ವ್ಯಕ್ತಿ ಬರಿಗೈಯಲ್ಲಿ ಹಿಂದಿರುಗಬಾರದು ಎಂಬ ಸಾಮಾಜಿಕ ಕಳಕಳಿಯಿಂದ 'ರಾಷ್ಟ್ರೋತ್ಥಾನ ರಕ್ತಕೇಂದ್ರ' ಮೇ 30, 1993ರಂದು ಪ್ರಾರಂಭವಾಯಿತು.

ಜನರ ನೋವಿಗೆ ದನಿಯಾಗುವ ರಾಷ್ಟ್ರೋತ್ಥಾನ ರಕ್ತನಿಧಿಯ ಚಟುವಟಿಕೆಗಳನ್ನು ಗುರುತಿಸಿದ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಹಾಗೂ ಕರ್ನಾಟಕ ರಾಜ್ಯ ರಕ್ತಚಾಲನಾ ಪರಿಷತ್ 2011–12ನೇ ಸಾಲಿನ ಕರ್ನಾಟಕದ ಅತ್ಯುತ್ತಮ ರಕ್ತನಿಧಿ (Best Blood Bank in Karnataka) ಎಂದು ಪ್ರಮಾಣಪತ್ರ ಹಾಗೂ ಪರ್ಯಾಯ ಪಾರಿತೋಷಕ ನೀಡಿ ಗೌರವಿಸಿದೆ.

ಹೀಗೆ ಸೇವೆಯ ಪಥದಲ್ಲಿ ಮುನ್ನಡೆದುಕೊಂಡು ಬರುತ್ತಿರುವ ರಕ್ತಕೇಂದ್ರವು ಈವರೆಗೆ (ಮಾರ್ಚ್ 31, 2020) 4510 ಸ್ವಯಂಪ್ರೇರಿತ ರಕ್ತದಾನ ಶಿಬಿರಗಳನ್ನು ನಡೆಸಿದೆ. 4,03,779 ರಕ್ತದಾನಿಗಳಿಂದ ರಕ್ತ ಸಂಗ್ರಹಿಸಿ, 3,07,985 ರೋಗಿಗಳಿಗೆ (8,12,650 ಯೂನಿಟ್) ರಕ್ತ ಪೂರೈಸಲಾಗಿದೆ.

### ವಿಶೇಷತೆಗಳು

ಸಾಮಾಜಿಕ ಕಳಕಳಿಯುಳ್ಳ ಸ್ವಯಂಸೇವಾ ಸಂಸ್ಥೆಗಳು, ಕಂಪೆನಿಗಳು ಹಾಗೂ ವಿದ್ಯಾಸಂಸ್ಥೆಗಳ ಸಹಯೋಗದಲ್ಲಿ ರಾಜ್ಯದ ವಿವಿಧೆಡೆಗಳಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರಗಳನ್ನು ನಡೆಸಿ ರಕ್ತವನ್ನು ಸಂಗ್ರಹಿಸಲಾಗುತ್ತಿದೆ.

ಸುಸಜ್ಜಿತ ವಾಹನ, ಸಲಕರಣೆಗಳು ಸೇರಿದಂತೆ ರಕ್ತದಾನ ಶಿಬಿರ ನಡೆಸಲು ಅಗತ್ಯವಾದ ಎಲ್ಲ ವ್ಯವಸ್ಥೆಗಳನ್ನು ರಕ್ತ ಕೇಂದ್ರ ಹೊಂದಿದೆ. ಏಕಕಾಲದಲ್ಲಿ 5ಕ್ಕೂ ಅಧಿಕ ಕಡೆಗಳಲ್ಲಿ ಶಿಬಿರ ನಡೆಸುವ ವ್ಯವಸ್ಥೆ ಹೊಂದಿದೆ.

ರಕ್ತಕೇಂದ್ರವು 24X7 ಗಂಟೆಗಳ ಕಾರ್ಯನಿರ್ವಹಿಸುತ್ತಿದೆ. ರೋಗಿಗಳಿಗೆ ಗುಣಮಟ್ಟದ ರಕ್ತನೀಡುವುದಕ್ಕಾಗಿ ಆಧುನಿಕ ತಂತ್ರಜ್ಞಾನಗಳನ್ನು {SDP (Single Donor Platelets), CLIA, Automated Blood Grouping and Crossmatching} ಯಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ.

ಸರ್ಕಾರದ ರಕ್ತಚಾಲನಾ ಪರಿಷತ್ ನಿಗದಿಪಡಿಸಿರುವ ತಪಾಸಣಾ ಶುಲ್ಕಕ್ಕಿಂತಲೂ ಕಡಮೆ ಶುಲ್ಕದಲ್ಲಿ (ಸರ್ಕಾರೀ ಆಸ್ಪತ್ರೆಗಳಿಂದ ಬರುವವರಿಗೆ ಅತೀ ಕಡಮೆ ಶುಲ್ಕದಲ್ಲಿ) ಮತ್ತು ಕೆಲ ಸಂದರ್ಭಗಳಲ್ಲಿ ಕಡುಬಡವರಿಗೆ ಉಚಿತವಾಗಿ ರಕ್ತ ಪೂರೈಸುವ ಸಾಮಾಜಿಕ ಕಾಳಜಿ ಹಾಗೂ ಬದ್ಧತೆಯ ಮೂಲಕ ರಾಜ್ಯಾದ್ಯಂತ ಗುರುತಿಸಿಕೊಂಡಿದೆ.

### 2019–20ನೇ ಸಾಲಿನ ವಿವರ

ಈ ವರ್ಷ ರಾಜ್ಯದ 9 ಜಿಲ್ಲೆಗಳಲ್ಲಿ ಒಟ್ಟು 317 ರಕ್ತದಾನ ಶಿಬಿರಗಳನ್ನು ನಡೆಸಲಾಗಿದೆ.

- ಸ್ವಯಂಸೇವಾ ಸಂಸ್ಥೆಗಳು – 82
- ಸಾಫ್ಟ್‌ವೇರ್ ಕಂಪೆನಿಗಳು – 75
- ಶಾಲೆಗಳು – 60
- ಕಂಪೆನಿಗಳು – 59
- ಇತರ (ಗಾರ್ಮೆಂಟ್ಸ್, ಅಪಾರ್ಟ್‌ಮೆಂಟ್ ಇತ್ಯಾದಿ) – 41

ರಕ್ತದಾನಿಗಳು – 30,887
ರಕ್ತದ ಯುನಿಟ್ಸ್ – 72,963
ಫಲಾನುಭವಿಗಳು – 24,179

### ಆಸರೆ

- ಜೀವಮಾನವಿಡೀ ನಿರಂತರ ರಕ್ತಪೂರಣದ ಆವಶ್ಯಕತೆ ಇರುವ ತಲಸ್ಸೆಮಿಯಾದಿಂದ ಬಳಲುತ್ತಿರುವ 425 ಮಕ್ಕಳಿಗೆ 15 ರಿಂದ 20 ದಿನಗಳಿಗೊಮ್ಮೆ ನಿರಂತರ ನಿಶ್ಶುಲ್ಕವಾಗಿ ರಕ್ತವನ್ನು ನೀಡಲಾಗುತ್ತಿದೆ.
- ವಿವಿಧ ಆಸ್ಪತ್ರೆಗಳಲ್ಲಿ ಡಯಾಲಿಸಿಸ್‌ಗೆ ಒಳಪಡುತ್ತಿರುವ ಆರ್ಥಿಕವಾಗಿ ಹಿಂದುಳಿದ 153 ರೋಗಿಗಳು ತಮ್ಮ ಹೆಸರನ್ನು ನೊಂದಾಯಿಸಿಕೊಂಡಿದ್ದಾರೆ. ಇವರಿಗೆ ನಿರಂತರವಾಗಿ ಅತ್ಯಂತ ಕಡಮೆ (ಸಂಸ್ಕರಣ ಶುಲ್ಕದಲ್ಲಿ) ಬೆಲೆಯಲ್ಲಿ ರಕ್ತವನ್ನು ನೀಡಲಾಗುತ್ತಿದೆ.
- ನಮ್ಮ ಫಲಾನುಭವಿಗಳಲ್ಲಿ ಸುಮಾರು 45% ಸರ್ಕಾರೀ ಆಸ್ಪತ್ರೆಯಿಂದ ಬರುವ ರೋಗಿಗಳು. (ಬಹುಶಃ ಈ ಪ್ರಮಾಣದಲ್ಲಿ ಸರ್ಕಾರಿ ಆಸ್ಪತ್ರೆಗಳಿಗೆ ರಕ್ತ ವಿತರಿಸುವ ರಕ್ತಕೇಂದ್ರ ಇನ್ನೊಂದು ಇರಲಾರದು.) ಇವರಿಗೆ ವಿಶೇಷ ರಿಯಾಯಿತಿ ದರದಲ್ಲಿ ರಕ್ತವನ್ನು ಒದಗಿಸಲಾಗುತ್ತಿದೆ.





## ನೂತನ ಭವನದಲ್ಲಿ ಕಾರ್ಯಾರಂಭ:

ರಾಷ್ಟ್ರೋತ್ಥಾನ ರಕ್ತನಿಧಿಯ ಚಟುವಟಿಕೆಯನ್ನು ಇನ್ನಷ್ಟು ಮೇಲ್ದರ್ಜೆಗೇರಿಸಲು ಬೆಂಗಳೂರಿನ ಶ್ರೀ ಗವಿಗಂಗಾಧರೇಶ್ವರ ದೇವಸ್ಥಾನದ ಸಮೀಪದಲ್ಲಿ ನೂತನ ಭವನವೊಂದು (ಶ್ರೀಮತಿ ಸುಭದ್ರಾ ಬೆನ್ ಜಯಂತಿಲಾಲ್ ನಗರ್ ದಾಸ್ ಷಾ ಭವನ) ನಿರ್ಮಿಸಲಾಗಿದೆ.

ನೂತನ ಕಟ್ಟಡವನ್ನು 2019ರ ಏಪ್ರಿಲ್ 2ರಂದು ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ಅಧ್ಯಕ್ಷರಾದ ಪರಮಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಗಿಡ ನೆಡುವ ಮೂಲಕ ಲೋಕಾರ್ಪಣೆಗೊಳಿಸಿದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಮಧ್ಯ ಕ್ಷೇತ್ರೀಯ ಸಂಘಚಾಲಕರಾದ ವಿ. ನಾಗರಾಜ್, ಪ್ರಮುಖ ಪ್ರಾಯೋಜಕರಾದ ಜಯಂತಿಲಾಲ್ ನಗರ್‌ದಾಸ್ ಷಾ (ಜೈನ್) ಮುಖ್ಯ ಅತಿಥಿಗಳಾಗಿ ಆಗಮಿಸಿದರು.

## ಉಲ್ಲೇಖನೀಯ

- ಅಗತ್ಯ ರಕ್ತವನ್ನು ಸ್ವಯಂಪ್ರೇರಿತ ರಕ್ತದಾನ ಶಿಬಿರಗಳ ಮೂಲಕ ಸಂಗ್ರಹಿಸುತ್ತೇವೆ. ಹಲವು ಸ್ವಯಂಸೇವಾ ಸಂಸ್ಥೆಗಳು, ಕಂಪೆನಿಗಳು ಹಾಗೂ ಶಾಲಾ ಕಾಲೇಜುಗಳು ಕಳೆದ 10ಕ್ಕೂ ಹೆಚ್ಚು ವರ್ಷಗಳಿಂದ ನಿರಂತರ ರಕ್ತದಾನ ಶಿಬಿರಗಳನ್ನು ಆಯೋಜಿಸುತ್ತಿವೆ. ಸಿಸ್ಕೋ, ಇನ್ಫೋಸಿಸ್ ಸೇರಿದಂತೆ ಕೆಲವು ಕಡೆಗಳಲ್ಲಿ ವರ್ಷಕ್ಕೆ ಎರಡು ರಕ್ತದಾನ ಶಿಬಿರಗಳನ್ನು ನಡೆಸಲಾಗುತ್ತಿದೆ. ಸಂಕಲ್ಪ ಇಂಡಿಯಾ ಫೌಂಡೇಷನ್‌ನ ಸಹಕಾರದಿಂದ ಈ ವರ್ಷ 84 ರಕ್ತದಾನ ಶಿಬಿರಗಳನ್ನು ನಡೆಸಲಾಯಿತು.
- ರೋಗಿಗಳಿಗೆ ಗುಣಮಟ್ಟದ ರಕ್ತನೀಡುವುದಕ್ಕಾಗಿ 2015ರಲ್ಲಿ ಸುಸಜ್ಜಿತ ಸುರಕ್ಷಿತ ಪ್ಲೇಟ್‌ಲೆಟ್ಸ್ ಫೆರೆಸಿಸ್ ಯಂತ್ರವನ್ನು ಅಳವಡಿಸಿಕೊಳ್ಳಲಾಗಿದೆ. ಈವರೆಗೆ ಒಟ್ಟು 2,753 SDP Unitsಗಳನ್ನು ಸಂಗ್ರಹಿಸಿ ಫಲಾನುಭವಿಗಳಿಗೆ ವಿತರಿಸಲಾಗಿದೆ. ಈ ವರ್ಷ 384 SDP Unitsಗಳನ್ನು ಸಂಗ್ರಹಿಸಿ ಫಲಾನುಭವಿಗಳಿಗೆ ವಿತರಣೆ ಮಾಡಲಾಗಿದೆ.
- ಫಲಾನುಭವಿಗಳು ಹಾಗೂ ಶಿಬಿರ ಆಯೋಜಕರು ರಕ್ತಕೇಂದ್ರದ ಸಿಬ್ಬಂದಿಯ ಸಹಕಾರ ಹಾಗೂ ರಕ್ತದ ಗುಣಮಟ್ಟದ ಬಗ್ಗೆ ಬಹಳ ಪ್ರಶಂಸೆಯ ಮಾತುಗಳನ್ನಾಡುತ್ತಿದ್ದಾರೆ.

**ಅಭ್ಯಾಸ ವರ್ಗಗಳು:** ರಕ್ತನಿಧಿಯ ಸಿಬ್ಬಂದಿಗಳ ತಾಂತ್ರಿಕ ಹಾಗೂ ಸೇವಾ ಗುಣಮಟ್ಟವನ್ನು ವೃದ್ಧಿಸುವ, ಕಾರ್ಯಕ್ಷಮತೆ ಹಾಗೂ ವೈಚಾರಿಕ ಬದ್ಧತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಕಳೆದ 8 ವರ್ಷಗಳಿಂದ (ಆಗಸ್ಟ್ 2013) ತಿಂಗಳಿಗೊಮ್ಮೆ ಅಭ್ಯಾಸ ವರ್ಗವನ್ನು ನಡೆಸಲಾಗುತ್ತಿದೆ.

## ಆಯುರ್ವೇದ ಚಿಕಿತ್ಸಾಲಯ

ಬೆಂಗಳೂರಿನ ರಾಷ್ಟ್ರೋತ್ಥಾನ ರಕ್ತ ಕೇಂದ್ರದಿಂದ ವಿಶೇಷವಾಗಿ ಗಳಗಂಡ (ಥೈರಾಯ್ಡ್) ಸೇರಿದಂತೆ ವಿವಿಧ ರೋಗಗಳಿಗೆ ಆಯುರ್ವೇದ ಪದ್ಧತಿಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

2019–20ನೇ ಸಾಲಿನಲ್ಲಿ ಸುಮಾರು 173 ಮಂದಿ ಗಳಗಂಡ ರೋಗಿಗಳು ಚಿಕಿತ್ಸೆ ಪಡೆದಿದ್ದಾರೆ. ಇವರಿಗೆ ನಿರಂತರವಾಗಿ ಮಾರ್ಗದರ್ಶನ ಹಾಗೂ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಹಲವು ರೋಗಿಗಳ ಆರೋಗ್ಯ ಸುಧಾರಣೆಯಲ್ಲಿದ್ದು, ಹಲವರು ಈ ಚಿಕಿತ್ಸೆ ಪಡೆದು ಸಂಪೂರ್ಣ ಗುಣಮುಖರಾಗಿದ್ದಾರೆ.

5 ಮಂದಿ ಮಂಡಿ ನೋವು (Joint Pain Patinets), Ear, Nose and Throat (ENT)ಗೆ ಸಂಬಂಧಿಸಿದ ರೋಗಗಳಿರುವ 10 ಮಂದಿಗೆ, Polycystic/ Ovarian/Disorder 5 ಮಂದಿಗೆ, ಬ್ರೈನ್ ಟ್ಯೂಮರ್ ರೋಗಿಗೆ ಹಾಗೂ 12 ಮಂದಿ ಥೈರಾಯ್ಡ್ ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ.

## ಶಾ ದಾಮಜಿ ಜಾದವಜಿ ಛೇಡಾ ಸ್ಮಾರಕ ರಾಷ್ಟ್ರೋತ್ಥಾನ ರಕ್ತನಿಧಿ, ಹುಬ್ಬಳ್ಳಿ

ಉತ್ತರ ಕರ್ನಾಟಕ ಭಾಗದ ಜನರಿಗೆ ನೆರವಾಗುವ ಉದ್ದೇಶದಿಂದ ಹುಬ್ಬಳ್ಳಿಯಲ್ಲಿ ಜೂನ್ 2010ರಲ್ಲಿ ಶಾ ದಾಮಜಿ ಜಾದವಜಿ ಛೇಡ ಅವರ ಕಟ್ಟಡದಲ್ಲಿ ರಾಷ್ಟ್ರೋತ್ಥಾನ ರಕ್ತನಿಧಿಯನ್ನು ಪ್ರಾರಂಭಿಸಲಾಯಿತು. ಪ್ರಸ್ತುತ ಇನ್ಫೋಸಿಸ್ ಫೌಂಡೇಷನ್ ಸಹಕಾರದೊಂದಿಗೆ ರಕ್ತನಿಧಿ ಕಾರ್ಯನಿರ್ವಹಿಸುತ್ತಿದೆ.

- ಸುಸಜ್ಜಿತ ವಾಹನ, ಸಲಕರಣೆಗಳು ಸೇರಿದಂತೆ ರಕ್ತದಾನ ಶಿಬಿರ ನಡೆಸಲು ಅಗತ್ಯವಾದ ಎಲ್ಲ ವ್ಯವಸ್ಥೆಗಳನ್ನು ರಕ್ತನಿಧಿ ಹೊಂದಿದೆ.
- ರಕ್ತನಿಧಿಯು 24x7 ಗಂಟೆಗಳ ಕಾರ್ಯನಿರ್ವಹಿಸುತ್ತಿದೆ. ರೋಗಿಗಳಿಗೆ ಗುಣಮಟ್ಟದ ರಕ್ತನೀಡುವುದಕ್ಕಾಗಿ ಆಧುನಿಕ ತಂತ್ರಜ್ಞಾನಗಳನ್ನು (SDP, Automated Blood Grouping and Crossmatching) ಯಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ.
- ರಕ್ತಚಾಲನಾ ಪರಿಷತ್ ನಿಗದಿಪಡಿಸಿರುವ ತಪಾಸಣಾ ಶುಲ್ಕಕ್ಕಿಂತಲೂ ಕಡಮೆ ಶುಲ್ಕದಲ್ಲಿ ಮತ್ತು ಕೆಲವು ಸಂದರ್ಭಗಳಲ್ಲಿ ಕಡುಬಡವರಿಗೆ ಉಚಿತವಾಗಿ ರಕ್ತ ಪೂರೈಸುವ ಸಾಮಾಜಿಕ ಕಾಳಜಿ ಹಾಗೂ ಬದ್ಧತೆಯಿಂದ ಕಾರ್ಯನಿರ್ವಹಿಸುತ್ತಿದೆ.
- ರಕ್ತದಾನಕ್ಕೆ ಅಗತ್ಯ ಡೋನರ್ ಕೋಚ್‌ನ್ನು ಹುಬ್ಬಳ್ಳಿಯ ಕರ್ನಾಟಕ ಬ್ಯಾಂಕ್ ದಾನವಾಗಿ ನೀಡಿದೆ.

**ಅಂಕಿಅಂಶ:** ರಕ್ತನಿಧಿಯ ವತಿಯಿಂದ 2019–20ನೇ ಸಾಲಿನಲ್ಲಿ ಒಟ್ಟು 120 ರಕ್ತದಾನ ಶಿಬಿರಗಳನ್ನು ನಡೆಸಲಾಗಿದೆ. 5685 ಮಂದಿ ರಕ್ತದಾನ ಮಾಡಿದರು. 8719 ಯುನಿಟ್ ರಕ್ತಸಂಗ್ರಹಿಸಿ 6830 ಫಲಾನುಭವಿಗಳಿಗೆ ವಿತರಿಸಲಾಗಿದೆ.






**ರಕ್ತದಾನದ ಕುರಿತು ಜಾಗೃತಿ ಹಾಗೂ ರಕ್ತದಾನಿಗಳ ಸಂಖ್ಯೆ ಹೆಚ್ಚಿಸಲು ಕೈಗೊಂಡ ಪ್ರಯತ್ನಗಳು:**

- 'ಮಾನವನಿಗಾಗಿ ರಕ್ತದಾನ, ಪರಿಸರಕ್ಕಾಗಿ ಸಸಿದಾನ' ಎಂಬ ಪರಿಕಲ್ಪನೆಯಲ್ಲಿ ವಿಆರ್‌ಎಲ್ ಸಮೂಹ ಸಂಸ್ಥೆಗಳ ಆಶ್ರಯದಲ್ಲಿ ನಡೆದ ರಕ್ತದಾನ ಶಿಬಿರದಲ್ಲಿ ರಕ್ತದಾನ ಮಾಡಿದ ಪ್ರತಿಯೊಬ್ಬರಿಗೂ ಸಸಿ ನೀಡಲಾಯಿತು.
- ವಿಶ್ವ ರಕ್ತದಾನಿಗಳ ದಿನದ ಪ್ರಯುಕ್ತ ನಡೆದ ಜಾಗೃತಿ ನಡಿಗೆ ಕಾರ್ಯಕ್ರಮದಲ್ಲಿ ಹುಬ್ಬಳ್ಳಿಯ ನವಗ್ರಹ ತೀರ್ಥ ಧರ್ಮಸೇನ ಭಟ್ಟಾರಕ ಪಟ್ಟಾಚಾರ್ಯ ಸ್ವಾಮಿಜೀ ದಿವ್ಯ ಸಾನ್ನಿಧ್ಯ ವಹಿಸಿದರು. ಹುಬ್ಬಳ್ಳಿಯ ಕನಕದಾಸ ಮಹಾವಿದ್ಯಾಲಯ ಕಾರ್ಯದರ್ಶಿ ರವಿ ದಂಡಿನ, ಧಾರವಾಡ ವೃತ್ತ ಸಹಾಯಕ ಔಷಧ ನಿಯಂತ್ರಕ ಕೆ.ಎಸ್. ಮಲ್ಲಿಕಾರ್ಜುನ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವಿವಿಧ ಕಾಲೇಜಿನ ವಿದ್ಯಾರ್ಥಿಗಳು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ರಕ್ತದಾನದ ಕುರಿತು ಜಾಗೃತಿ ಮೂಡಿಸಿದರು.
- ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಷಿ, ಕರ್ನಾಟಕ ರಾಜ್ಯದ ಸಚಿವರಾದ ಬಸವರಾಜ್ ಬೊಮ್ಮಾಯಿ, ಜಗದೀಶ ಶೆಟ್ಟರ್, ಬಿ.ಸಿ. ಪಾಟೀಲ್, ಶಾಸಕರಾದ ಮಹೇಶ್ ಟೆಂಗಿನಕಾಯಿ ಮುಂತಾದ ಅನೇಕ ಗಣ್ಯವ್ಯಕ್ತಿಗಳು ತಮ್ಮ ಹುಟ್ಟುಹಬ್ಬದ ಪ್ರಯುಕ್ತ ರಕ್ತದಾನ ಶಿಬಿರವನ್ನು ಆಯೋಜಿಸಿದರು.
- ರಕ್ತದಾನಿಗಳೊಂದಿಗೆ ಸಂಪರ್ಕ–ಸಂವಾದ ಏರ್ಪಡಿಸುವ ಸಲುವಾಗಿ ರಕ್ತದಾನಿಗಳ ಸ್ನೇಹಮಿಲನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

## ಆ) 'ಸಂರಕ್ಷಾ'–ತಲೆಸ್ಸೆಮಿಯಾ ಮಕ್ಕಳ ಆರೈಕೆ ಕೇಂದ್ರ

ಮಕ್ಕಳಲ್ಲಿ ಹುಟ್ಟುವಾಗಲೇ ಇರುವ ಆನುವಂಶಿಕ ನ್ಯೂನತೆಯಾದ ತಲೆಸ್ಸೆಮಿಯಾ ಬಾಧಿತ ಮಗುವಿನ ದೇಹದಲ್ಲಿ ಹಿಮೋಗ್ಲೋಬಿನ್‌ಯುಕ್ತ ಗುಣಮಟ್ಟದ ರಕ್ತದ ಉತ್ಪತ್ತಿಯಾಗುವುದಿಲ್ಲ. ಇಂತಹ ಮಕ್ಕಳು ಉಲ್ಲಾಸದಿಂದಿರಲು ನಿರಂತರ ರಕ್ತಪೂರಣ (Blood Transfusion) ಅನಿವಾರ್ಯ. ಈ ನ್ಯೂನತೆಯಿಂದ ಬಳಲುತ್ತಿರುವ ಮಕ್ಕಳಿಗೆ ಹಾಗೂ ಕುಟುಂಬಕ್ಕೆ ನೆರವಾಗುವ ಉದ್ದೇಶದಿಂದ 2013ರಲ್ಲಿ 'ಸಂರಕ್ಷಾ' –ತಲೆಸ್ಸೆಮಿಯಾ ಮಕ್ಕಳ ಆರೈಕೆ ಕೇಂದ್ರವನ್ನು ತೆರೆಯಲಾಗಿದೆ.

- ತಲೆಸ್ಸೆಮಿಯಾ ಪೀಡಿತ ಮಕ್ಕಳಿಗೆ ತಪಾಸಣೆಗೆ ಒಳಪಟ್ಟ ಗುಣಮಟ್ಟದ ರಕ್ತವನ್ನು ನೀಡಲಾಗುತ್ತಿದೆ.
- ರಕ್ತತಪಾಸಣೆ, ರಕ್ತಪೂರಣ ಮಾಡುವುದಲ್ಲದೇ ಫೋಲಿಕ್ ಆ್ಯಸಿಡ್, ಕ್ಯಾಲ್ಸಿಯಂ, ಬಿ–ಕಾಂಪ್ಲೆಕ್ಸ್ ಮತ್ತು ಮಲ್ಟಿ–ವಿಟಮಿನ್ ಮುಂತಾದ ಅಗತ್ಯ ಔಷಧಗಳನ್ನು ಅವರ ಆರ್ಥಿಕ ಸ್ಥಿತಿಗತಿಯನ್ನು ಗಮನಿಸದೆ ಎಲ್ಲರಿಗೂ ಉಚಿತವಾಗಿ ನೀಡಲಾಗುತ್ತಿದೆ.
- ಪ್ರತಿ ಶನಿವಾರ Hydroxyurea Clinic ಮತ್ತು Pretransplant clinicಗಳನ್ನು ನಡೆಸಲಾಗುತ್ತಿದೆ. ಈ ಕ್ಲಿನಿಕ್‌ನಲ್ಲಿ ತಲೆಸ್ಸೆಮಿಯಾ ಮೇಜರ್ ರೋಗಿಗಳನ್ನು ಗುರುತಿಸಿ ಅವರಿಗೆ Hydroxyurea ಎಂಬ ಔಷಧಿಯನ್ನು ಉಚಿತವಾಗಿ ನೀಡಲಾಗುತ್ತದೆ.





- ಹೃದಯ ಸಂಬಂಧಿ ಸಮಸ್ಯೆ ಇರುವ ಮಕ್ಕಳಲ್ಲಿ ಹಿಮೋಗ್ಲೋಬಿನ್ ಪ್ರಮಾಣವನ್ನು 10–11gm/dlನಲ್ಲಿ ಕಾಪಾಡಿಕೊಳ್ಳುವುದು ಅತ್ಯಗತ್ಯ. ಇದಕ್ಕಾಗಿ ಅಂತಹ ಮಕ್ಕಳಿಗಾಗಿ ಪ್ರತೀ ಬುಧವಾರ ಸೂಪರ್–ಟ್ರಾನ್ಸ್‌ಫ್ಯೂಷನ್ ನಡೆಸಲಾಗುತ್ತಿದೆ. ಪ್ರಸ್ತುತ 6 ಮಕ್ಕಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ
- ನಿರಂತರ ರಕ್ತಪೂರಣದಿಂದ ಕೆಲವು ಮಕ್ಕಳ ರಕ್ತದಲ್ಲಿ ಕಬ್ಬಿಣದ ಅಂಶ ಹೆಚ್ಚಾಗುತ್ತದೆ. ಇದನ್ನು ಹೋಗಲಾಡಿಸಲು ಮಕ್ಕಳಿಗೆ ನಿರಂತರವಾಗಿ Desferal ಇಂಜೆಕ್ಷನ್ ನೀಡಲಾಗುತ್ತಿದೆ. ಪ್ರಸ್ತುತ 13 ಮಕ್ಕಳಿಗೆ ಈ ಇಂಜೆಕ್ಷನ್ ನೀಡಲಾಗುತ್ತಿದೆ.
- ತಲೆಸ್ಸೆಮಿಯಾ ಪೀಡಿತ ಮಕ್ಕಳಿಗೆ ಮಾತ್ರವಲ್ಲದೇ ಸಂಪೂರ್ಣ ಕುಟುಂಬಕ್ಕೆ ನಿರಂತರವಾಗಿ ಅಗತ್ಯ ಮಾರ್ಗದರ್ಶನ ನೀಡಲಾಗುತ್ತಿದೆ.

**ಫಲಾನುಭವಿಗಳು:** ಪ್ರಸ್ತುತ 447 ಮಕ್ಕಳು ಸಂರಕ್ಷಾದಲ್ಲಿ ಆರೈಕೆ ಪಡೆಯುತ್ತಿದ್ದಾರೆ. ಬೆಂಗಳೂರು ಮಾತ್ರವಲ್ಲದೆ ರಾಜ್ಯದ 30 ಜಿಲ್ಲೆಗಳು ಹಾಗೂ ಪಶ್ಚಿಮಬಂಗಾಳ, ಒರಿಸ್ಸಾ, ಬಿಹಾರ, ಮಹಾರಾಷ್ಟ್ರ, ತೆಲಂಗಾಣ, ಆಂಧ್ರ ಪ್ರದೇಶ, ತಮಿಳುನಾಡು ಸೇರಿದಂತೆ 8 ರಾಜ್ಯಗಳಿಂದ ತಲೆಸ್ಸೆಮಿಯಾ ಪೀಡಿತರು ಆರೈಕೆಗಾಗಿ 'ಸಂರಕ್ಷಾ'ಕ್ಕೆ ಬರುತ್ತಿದ್ದಾರೆ.

### ಈ ವರ್ಷದ ಅಂಕಿ–ಅಂಶ

| | |
|---|---|
| ಆರೈಕೆ ಪಡೆಯುತ್ತಿರುವ ಮಕ್ಕಳು | 447 |
| ಹೊಸದಾಗಿ ನೋಂದಾಯಿತ ಮಕ್ಕಳು | 40 |
| ಈ ಮಕ್ಕಳಿಗೆ ನೀಡಲಾದ ಒಟ್ಟು ರಕ್ತದ ಯುನಿಟ್ | 7602 |

## ಉಪಲಬ್ಧಿ

- ಸಂರಕ್ಷಣದಲ್ಲಿ ಶುಶ್ರೂಷೆ ಪಡೆಯುತ್ತಿರುವ ಬಹುತೇಕ ಎಲ್ಲ ಮಕ್ಕಳಲ್ಲಿ ಇದೀಗ ಆರೋಗ್ಯದಲ್ಲಿ ಸ್ಥಿರತೆ ಕಂಡುಬರುತ್ತಿವೆ. ಅವರ ಎತ್ತರ ಹಾಗೂ ತೂಕದಲ್ಲೂ ಸುಧಾರಣೆಯಾಗಿದೆ. ಗುಣಮಟ್ಟದ ಪರೀಕ್ಷಿತ ರಕ್ತವನ್ನು ನೀಡುತ್ತಿರುವುದರಿಂದ ಮಕ್ಕಳಲ್ಲಿ ಹಿಮೋಗ್ಲೋಬಿನ್ ಪ್ರಮಾಣ ಹೆಚ್ಚಾಗಿದೆ.
- ಪಿತ್ತಕೋಶ (Liver) ಮತ್ತು ಗುಲ್ಮ (Spleen)ಗಳ ಗಾತ್ರದಲ್ಲಿ ಸುಧಾರಣೆಯಾಗುತ್ತಿದೆ.
- ಉಚಿತವಾಗಿ Hydroxy Urea ಚಿಕಿತ್ಸೆ ನೀಡಲಾಗುತ್ತಿದೆ. ಇದರಿಂದ ರಕ್ತಪೂರಣದ ನಡುವಿನ ಅವಧಿಯು ಹೆಚ್ಚಿದೆ. ಮಕ್ಕಳ ದೇಹದಲ್ಲಿ Iron Overload ಕಡಮೆಯಾಗಿ ಆರೋಗ್ಯದಲ್ಲಿ ಸುಧಾರಣೆ ಕಂಡುಬರುತ್ತಿವೆ. ಸಾಮಾನ್ಯವಾಗಿ 15–20 ದಿನಗಳಿಗೊಮ್ಮೆ ಇದ್ದ ರಕ್ತಪೂರಣದ ಅವಧಿ ಕೆಲ ಮಕ್ಕಳಲ್ಲಿ 2 ರಿಂದ 10 ತಿಂಗಳವರೆಗೆ ವಿಸ್ತರಿಸಿದೆ.
- ಪ್ರಸ್ತುತ 32 Sickle Cell ರೋಗಿಗಳಿಗೆ ಕೂಡ ಹೈಡ್ರಾಕ್ಸ್ ಯೂರಿಯಾ ನೀಡಲಾಗುತ್ತಿದೆ. ಅದರಿಂದ ಅವರು ನೋವಿಲ್ಲದೇ ಸಹಜ ಜೀವನವನ್ನು ನಡೆಸಲು ಸಾಧ್ಯವಾಗುತ್ತಿದೆ.
- ಪೋಷಕರು ತಮ್ಮ ಮಕ್ಕಳ ಬಗ್ಗೆ ಅಗತ್ಯ ಕಾಳಜಿ ವಹಿಸುತ್ತಿದ್ದಾರೆ. ಮಕ್ಕಳು ಶಾಲೆಗೆ ಹೋಗಲು ಆರಂಭಿಸಿದ್ದಾರೆ. ಶಾಲೆ ಮತ್ತು ಮನೆಯಲ್ಲಿ ಅವರ ಸಾಧನೆ–ನಡವಳಿಕೆಗಳು ಉತ್ತಮಗೊಂಡಿವೆ.

## ಇ) ಅಗ್ನಿವೇಶ ಆಯುರ್ವೇದ ಅನುಷ್ಠಾನ

ಆರೋಗ್ಯ ಸಂರಕ್ಷಣೆಗಾಗಿ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಆಯುರ್ವೇದ ಪದ್ಧತಿ ಜಾರಿಯಲ್ಲಿತ್ತು. ಯಾವುದೇ ಬಾಹ್ಯ ತೊಂದರೆಗಳಿಲ್ಲದೆ ರೋಗವನ್ನು ಪರಿಣಾಮಕಾರಿಯಾಗಿ ಹಾಗೂ ಸಂಪೂರ್ಣವಾಗಿ ಗುಣಪಡಿಸಬಲ್ಲ ಮತ್ತು ಆರೋಗ್ಯಸ್ಥಿತಿಯನ್ನು ಸ್ಥಿರವಾಗಿ ಕಾಪಾಡಬಲ್ಲ ಚಿಕಿತ್ಸಾ ಕ್ರಮ ಆಯುರ್ವೇದ ಪದ್ಧತಿಯದ್ದು. ತಾತ್ಕಾಲಿಕ ಪರಿಹಾರವನ್ನೇ ನೆಚ್ಚಿಕೊಂಡಿರುವ ಜನಸಾಮಾನ್ಯರ ಮನಃಸ್ಥಿತಿಗೆ ಹೊಂದಾಣಿಕೆ ಮಾಡಿಕೊಳ್ಳುವಂತೆ ಇಂದು ಆಯುರ್ವೇದ ವೈದ್ಯರು ಇನ್ನಿತರ ವೈದ್ಯಕೀಯ ಪದ್ಧತಿಯಲ್ಲಿ ಚಿಕಿತ್ಸೆ ನೀಡುತ್ತಿದ್ದಾರೆ. ಹೀಗಾಗಿ ಆಯುರ್ವೇದ ವೈದ್ಯರನ್ನು ಸಂಘಟಿಸಿ, ಅವರಲ್ಲಿ ವಿಶ್ವಾಸ ತುಂಬುವ ಸಲುವಾಗಿ ಹಾಗೂ ಆಯುರ್ವೇದದ ವಿವಿಧ ಮಜಲುಗಳನ್ನು ಪರಿಚಯಿಸುವ ಮತ್ತು ಅನೇಕ ಸಮಸ್ಯೆಗಳಿಗೆ ಆಯುರ್ವೇದದ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಹಂಚಿಕೊಳ್ಳುವ ಸಲುವಾಗಿ ಅಗ್ನಿವೇಶ ಆಯುರ್ವೇದ ಅನುಷ್ಠಾನ ಪ್ರಾರಂಭವಾಯಿತು.

ಅಗ್ನಿವೇಶ ಆಯುರ್ವೇದ ಅನುಷ್ಠಾನವು ರಾಷ್ಟ್ರೋತ್ಥಾನ ಆರೋಗ್ಯ ಸೇವಾ ಕೇಂದ್ರದ ಚಟುವಟಿಕೆಯಾಗಿದ್ದು ಕಳೆದ 28 ವರ್ಷಗಳಿಂದ ಆಯುರ್ವೇದ ವೈದ್ಯರ ನಡುವೆ ಕೆಲಸ ನಿರ್ವಹಿಸುತ್ತಿದೆ.

**ಸದಸ್ಯರು:** ಬಳ್ಳಾರಿ, ಹಾವೇರಿ, ತುಮಕೂರು, ಬೆಳಗಾವಿ, ಗದಗ, ಬಾಗಲಕೋಟೆ, ಕಲಬುರಗಿ, ಚಿತ್ರದುರ್ಗ, ಮೈಸೂರು ಹಾಗೂ ಬೆಂಗಳೂರು ಸೇರಿದಂತೆ ರಾಜ್ಯದ 16 ಜಿಲ್ಲೆಗಳ ಮತ್ತು ಆಂಧ್ರ ಪ್ರದೇಶ ಹಾಗೂ ಅಮೆರಿಕದ ಆಯುರ್ವೇದ ವೈದ್ಯರು ಅಗ್ನಿವೇಶದ ಸದಸ್ಯತ್ವ ಹೊಂದಿದ್ದಾರೆ. ಪ್ರಸ್ತುತ ಒಟ್ಟು 403 ಆಯುರ್ವೇದ ವೈದ್ಯರು ಸದಸ್ಯತ್ವ ಹೊಂದಿದ್ದಾರೆ.

**ಸದಸ್ಯ ವೈದ್ಯರಿಗಾಗಿ:** ಆಯುರ್ವೇದ ಪದ್ಧತಿಯನ್ನು ಪರಿಣಾಮಕಾರಿಯಾಗಿಸಲು ಹಾಗೂ ಎದುರಾಗುವ ಗೊಂದಲ–ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸಲುವಾಗಿ ಆಯುರ್ವೇದ ವೈದ್ಯರಿಗಾಗಿ (ವಿವಿಧ ಆಯುರ್ವೇದ ಔಷಧ ಕಂಪೆನಿಗಳ ಸಹಯೋಗದಲ್ಲಿ) ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

- ತಿಂಗಳಿಗೊಮ್ಮೆ ವಿಶಿಷ್ಟ ವಿಷಯಗಳ ಕುರಿತು ಉಪನ್ಯಾಸ–ಸಂವಾದ ಕಾರ್ಯಕ್ರಮಗಳನ್ನು (ಮಾಸಿಕ ನಿರಂತರ ವೈದ್ಯಕೀಯ ಶಿಕ್ಷಣ – ಸಿ.ಎಂ.ಇ.) ನಡೆಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ದೇಶ ಹಾಗೂ ರಾಜ್ಯದ ಪ್ರತಿಷ್ಠಿತ ಆಯುರ್ವೇದ ವೈದ್ಯರು ಆಗಮಿಸಿ ಮಾರ್ಗದರ್ಶನ ಮಾಡುತ್ತಾರೆ.
- ಪ್ರತೀ ತಿಂಗಳು ಆಯುರ್ವೇದ ವೈದ್ಯರಿಗಾಗಿ ವಿಶೇಷ ತರಗತಿಗಳನ್ನು ನಡೆಸಲಾಯಿತು. 2019–20ರಲ್ಲಿ 12 ತರಗತಿಗಳು ನಡೆದವು. ಶ್ರೀ ಬೈದ್ಯನಾಥ ಆಯುರ್ವೇದ ಸಂಸ್ಥೆಯ ಪ್ರಾಯೋಜಕತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಪ್ರತೀ ತರಗತಿಗಳಲ್ಲಿ ಸುಮಾರು 70 ಮಂದಿ ವೈದ್ಯರು ಭಾಗವಹಿಸಿದರು.
- ಆಯುರ್ವೇದ ವೈದ್ಯಕೀಯ ಸೇವೆ ಮತ್ತು ವಿಚಾರ ಸಂಕಿರಣಗಳನ್ನು ನಡೆಸಲಾಗುತ್ತಿದೆ.
- ಡಯಾಬಿಟೀಸ್, ಆಮ್ಲಪಿತ್ತ ಸೇರಿದಂತೆ ದೇಹದ ವಿವಿಧ ಭಾಗಗಳಿಗೆದುರಾಗುವ ರೋಗಗಳಿಗೆ ಆಯುರ್ವೇದ ಚಿಕಿತ್ಸಾ ಕ್ರಮಗಳ ಕುರಿತು ಬಸವನಗುಡಿಯ ಅಮೃತ ಆಯುರ್ವೇದ ಸೆಂಟರ್‌ನ ಡಾ. ಪದ್ಮನಾಭ ರಾವ್ ಅವರಿಂದ ತಿಂಗಳಿಗೊಮ್ಮೆ ಪ್ರತೀ 2ನೇ ಭಾನುವಾರ ತರಬೇತಿ ಶಿಬಿರವನ್ನು ನಡೆಸಲಾಗಿದೆ. 95 ಮಂದಿ ಆಯುರ್ವೇದ ವೈದ್ಯರು ಭಾಗವಹಿಸುತ್ತಿದ್ದಾರೆ.



# ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ

'ಸರ್ವೇ ಸಂತು ನಿರಾಮಯಾಃ' ಎಂಬ ಪಾರಂಪರಿಕ ಉಕ್ತಿಯಂತೆ ಎಲ್ಲರೂ ಕಾಯಿಲೆಮುಕ್ತ, ಆದರ್ಶ ಜೀವನವನ್ನು ನಡೆಸುವಂತಾಗಬೇಕೆಂಬ ಆಶಯದಿಂದ ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ 1972ರಲ್ಲಿ ಪ್ರಾರಂಭವಾಯಿತು.

ಕಳೆದ 48 ವರ್ಷಗಳಿಂದ ಯೋಗ ಸಂಬಂಧಿತ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿರುವ ರಾಷ್ಟ್ರೋತ್ಥಾನ ಯೋಗ ವಿಭಾಗವು ಪ್ರಸ್ತುತ ಬೆಂಗಳೂರಿನಲ್ಲಿ ಒಟ್ಟು 9 ಯೋಗಕೇಂದ್ರಗಳನ್ನು – ಜಯನಗರ, ಕೇಶವಶಿಲ್ಪ, ಸುಂಕೇನಹಳ್ಳಿ, ಕುಂದಲಹಳ್ಳಿ, ಸದಾಶಿವನಗರ, ಕಲ್ಯಾಣನಗರ, ಗಾಯಿತ್ರಿನಗರ, ನಾಗರಬಾವಿ ಮತ್ತು ಕಾಮಾಕ್ಷಿಪಾಳ್ಯ – ನಡೆಸುತ್ತಿದೆ.

ಪ್ರತಿನಿತ್ಯ ಬೇರೆ ಬೇರೆ ಅವಧಿಗಳಲ್ಲಿ, ಬೇರೆ ಬೇರೆ ಸ್ತರಗಳಲ್ಲಿ (ಪ್ರವೇಶ, ಅಭ್ಯಾಸ, ಪ್ರಗತ, ಯೋಗ ಚಿಕಿತ್ಸೆ, ವಾರಾಂತ್ಯದ ಯೋಗ ತರಗತಿ, ಮಕ್ಕಳ ಯೋಗ ತರಗತಿಗಳು) ಒಟ್ಟು 126 ಯೋಗ ತರಗತಿಗಳು ನಡೆಯುತ್ತಿವೆ. ಸುಮಾರು 3000 ಯೋಗಬಂಧುಗಳು ಪ್ರತಿನಿತ್ಯ ಯೋಗತರಗತಿಗಳಲ್ಲಿ ಭಾಗವಹಿಸುತ್ತಿದ್ದಾರೆ. ಸುಮಾರು 100 ಶಿಕ್ಷಕರು ತರಬೇತಿ ನೀಡುತ್ತಿದ್ದಾರೆ.

## ಯೋಗಶಿಕ್ಷಕರಿಗಾಗಿ

**ಶಿಕ್ಷಕರ ಸೇರ್ಪಡೆ:** ಅಗತ್ಯಕ್ಕೆ ತಕ್ಕಂತೆ ಯೋಗಶಿಕ್ಷಕರನ್ನು ಸೇರ್ಪಡೆಗೊಳಿಸುವ ಸಲುವಾಗಿ ಸಂಸ್ಥೆಯ ಯೋಗಕೇಂದ್ರದಲ್ಲಿ ಹಲವು ವರ್ಷಗಳಿಂದ ಯೋಗಾಭ್ಯಾಸ ಮಾಡುತ್ತಿರುವ ಯೋಗಾಭ್ಯಾಸಿಗಳನ್ನು ಗುರುತಿಸಿ, ಅವರಿಗೆ ವಿಶೇಷ ತರಬೇತಿ ನೀಡಿ ಅವರನ್ನು ಯೋಗಶಿಕ್ಷಕರನ್ನಾಗಿ ನೇಮಿಸಿಕೊಳ್ಳಲಾಗುತ್ತಿದೆ. ಇವರು ತಮ್ಮ ಬಿಡುವಿನ ಅವಧಿಯಲ್ಲಿ ನಮ್ಮ ಯೋಗಕೇಂದ್ರದಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಾರೆ. ಹೀಗೆ ಪ್ರಸ್ತುತ 15 ಮಂದಿ ಗೌರವ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಯೋಗಕೇಂದ್ರದ ನಿರ್ವಹಣೆ ಹಾಗೂ ಯೋಗತರಬೇತಿಗಾಗಿ 2019–20ರಲ್ಲಿ 8 ಮಂದಿ ಪೂರ್ಣಾವಧಿ ಕಾರ್ಯಕರ್ತರನ್ನು ಗುರುತಿಸಿ ಅವರನ್ನು ಶಿಕ್ಷಕರನ್ನಾಗಿ ನೇಮಿಸಿಕೊಳ್ಳಲಾಗಿದೆ. ಒಟ್ಟು 19 ಪೂರ್ಣಾವಧಿ ಕಾರ್ಯಕರ್ತರನ್ನು ಜೋಡಿಸಿಕೊಳ್ಳಲಾಗಿದೆ.

**ಚಿಂತನ–ಮಂಥನ:** ರಾಷ್ಟ್ರೋತ್ಥಾನ ಯೋಗ ವಿಭಾಗದ ಶಿಕ್ಷಕರ ಚಿಂತನ ಶಕ್ತಿ ಹೆಚ್ಚಿಸುವ ಸಲುವಾಗಿ ಮತ್ತು ಜ್ಞಾನಾರ್ಜನೆಯನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ತಿಂಗಳಿಗೊಮ್ಮೆ ವಿಷಯ ತಜ್ಞರಿಂದ ಸಂವಾದ ಉಪನ್ಯಾಸಗಳನ್ನು ಆಯೋಜಿಸಲಾಗುತ್ತಿದೆ.

**ಪ್ರಶಿಕ್ಷಣ ವರ್ಗ:** ಯೋಗ ಶಿಕ್ಷಕರ ಸಾಮರ್ಥ್ಯವರ್ಧನೆಗಾಗಿ 2 ದಿನಗಳ ಪ್ರಶಿಕ್ಷಣ ವರ್ಗವನ್ನು ಆಯೋಜಿಸಲಾಯಿತು. ಡಿಸೆಂಬರ್ 7 ಮತ್ತು 8ರಂದು ರಾಮಮೂರ್ತಿನಗರದ ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆದ ಈ ವರ್ಗದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತದ ಪ್ರಚಾರ ಪ್ರಮುಖರಾದ ಪ್ರದೀಪ ಅವರು ಶಿಬಿರವನ್ನು ಉದ್ಘಾಟಿಸಿದರು. ಖ್ಯಾತ ಎಲುಬು ಮತ್ತು ಮೂಳೆ ತಜ್ಞ ಡಾ॥ ಗೌರಿಶಂಕರ ಸ್ವಾಮಿ ಅವರು ಶರೀರ ರಚನಾಶಾಸ್ತ್ರ ಮತ್ತು ಯೋಗದ ಸಂಬಂಧವನ್ನು ತಿಳಿಸಿದರು. ಒಟ್ಟು 99 ಶಿಕ್ಷಕರು ಭಾಗವಹಿಸಿದರು. ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ, ಯೋಗ ವಿಭಾಗದ ನಿರ್ದೇಶಕ ನಾಗೇಂದ್ರ ಕಾಮತ್ ಅವರು ಉಪಸ್ಥಿತರಿದ್ದರು.

## ಯೋಗಬಂಧುಗಳಿಗಾಗಿ

ಯೋಗಾಭ್ಯಾಸದ ಜೊತೆಜೊತೆಗೆ ಯೋಗಬಂಧುಗಳಲ್ಲಿ (ಯೋಗಾಭ್ಯಾಸಿಗಳಲ್ಲಿ) ಸಾಮಾಜಿಕ ಕಾಳಜಿ, ಸಾಂಸ್ಕೃತಿಕ ಪರಂಪರೆ ಬಗೆಗೆ ಜಾಗೃತಿ–ಹೆಮ್ಮೆ ಮೂಡಿಸುವ ಸಲುವಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.



**ಉಪನ್ಯಾಸ :** ಯೋಗಭ್ಯಾಸದ ಜೊತೆಗೆ ಒಳ್ಳೆಯ ಆರೋಗ್ಯ, ಒಳ್ಳೆಯ ನಡವಳಿಕೆ, ಸುಸಂಸ್ಕೃತ ಜೀವನದ ಬಗ್ಗೆ ಜಾಗೃತಿ ಮೂಡಿಸಲು ಅನೇಕ ಉಪನ್ಯಾಸಗಳನ್ನು ಆಯೋಜಿಸಲಾಯಿತು. ಎಲುಬು ಮತ್ತು ಮೂಳೆ ತಜ್ಞ ಡಾ॥ ಗೌರಿಶಂಕರ (ಬೆನ್ನುನೋವು ಹಾಗೂ ಕುತ್ತಿಗೆನೋವು), ಡಾ॥ ಶ್ರೀಶೈಲ ಬಾದಾಮಿ (ಮಧುಮೇಹ – ಕಾರಣ ಮತ್ತು ಪರಿಹಾರ) ಡಾ॥ ಸಂಜಯ (ಮಹಿಳೆಯರಲ್ಲಿ ಮುಟ್ಟಿನ ಸಮಸ್ಯೆ) ಡಾ॥ ರಾಜಾರಾಂ ಪ್ರಸಾದ (ಚರ್ಮದ ಹಾಗೂ ಕೂದಲಿನ ಸೌಂದರ್ಯ ರಕ್ಷಣೆ), ಡಾ॥ ಸಂಜೀವ ನಾಯಕ (ಆಹಾರ ಪದ್ಧತಿಗಳು) ಮುಂತಾದವರು ಆಗಮಿಸಿ ಉಪನ್ಯಾಸ ನೀಡಿದರು.

ರಾಷ್ಟ್ರೋತ್ಥಾನ ಯೋಗ ವಿಭಾಗದ ಶಿಕ್ಷಕರಿಗಾಗಿ ಜೂನ್ 23ರಂದು ರಾಮನಗರದ ಶಿಲಾಂದರಾ ರೆಸಾರ್ಟ್‌ನಲ್ಲಿ ನಡೆದ ಅಭ್ಯಾಸ ವರ್ಗದಲ್ಲಿ ಭಾರತೀಯ ಜನತಾ ಪಾರ್ಟಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರು ಆಗಮಿಸಿ ಉಪನ್ಯಾಸ ನೀಡಿದರು.

ನೆಲ್ಲಿಕಾಯಿ ಉಪಯೋಗಗಳ ಕುರಿತು ಯೋಗಾಭ್ಯಾಸಿಗಳಿಗೆ ತರಬೇತಿ ಕಾರ್ಯಗಾರವನ್ನು ನಡೆಸಲಾಯಿತು. ಮಂಜುಳಾ ಭೀಮರಾವ್ ಅವರು ನೆಲ್ಲಿಕಾಯಿಯಿಂದ ಔಷಧ ತಯಾರಿ ಮುಂತಾದವುಗಳನ್ನು ಕಲಿಸಿದರು.

**ವಿವಿಧ ಉತ್ಸವಗಳ ಆಚರಣೆ:** ಯೋಗಾಭ್ಯಾಸಿಗಳಲ್ಲಿ ಭಾರತೀಯ ಮೌಲ್ಯಗಳ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ರಥಸಪ್ತಮಿಯ ಪ್ರಯುಕ್ತ ಸಾಮೂಹಿಕ ಸೂರ್ಯನಮಸ್ಕಾರ, ರಕ್ಷಾಬಂಧನ, ಗುರುಪೂರ್ಣಿಮೆಯ ನಿಮಿತ್ತ ಪತಂಜಲಿ ನಮನ, ಆಯುಧಪೂಜೆ, ಅಂತಾರಾಷ್ಟ್ರೀಯ ಯೋಗದಿನಾಚರಣೆ ಮುಂತಾದ ಉತ್ಸವಗಳನ್ನು ಆಚರಿಸಲಾಯಿತು.



ಗಾಯತ್ರಿ ನಗರದಲ್ಲಿ ನಡೆದ ನೂತನ ಯೋಗಕೇಂದ್ರದ ಲೋಕಾರ್ಪಣಾ ಕಾರ್ಯಕ್ರಮ

ವಿವಿಧ ಯೋಗಕೇಂದ್ರಗಳಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಮಕೃಷ್ಣಾಶ್ರಮದ ಮಂಗಳನಾಥಾನಂದ ಸ್ವಾಮಿಜೀ, ಎನ್.ಎಂ.ಆರ್.ವಿ. ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕ ಡಾ॥ ಎಸ್. ರಂಗನಾಥ್, ತಾಂಜೆನಿಯಾದಲ್ಲಿ ಭಾರತದ ಸಾಂಸ್ಕೃತಿಕ ರಾಯಭಾರಿಯಾಗಿರುವ ಸಂತೋಷ್ ಜಿ.ಆರ್. ಖ್ಯಾತ ವಾಗ್ಮಿ ಆರತಿ ವಿ.ಬಿ. ಮತ್ತು ಖ್ಯಾತ ಆಯುರ್ವೇದ ತಜ್ಞ ಡಾ. ಅನಂತ ರಾಮನ್ ಅವರು ಉಪನ್ಯಾಸ ನೀಡಿದರು.

**ಸಹಲ್ ಕಾರ್ಯಕ್ರಮ:** ಯೋಗ ಬಂಧುಗಳಲ್ಲಿ ಕೌಟುಂಬಿಕ ಭಾವನೆ ಮೂಡಿಸುವ ಸಲುವಾಗಿ ಸಹಲ್ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಒಟ್ಟು 650ಕ್ಕೂ ಅಧಿಕ ಮಂದಿ ಭಾಗವಹಿಸಿದರು.

**ಸೇವಾಚಟುವಟಿಕೆಗೆ ಸಹಭಾಗಿತ್ವ:** ಯೋಗಾಭ್ಯಾಸಿಗಳಲ್ಲಿ ಸಾಮಾಜಿಕ ಕಳಕಳಿ ಹಾಗೂ ಸಾಮಾಜಿಕ ಸ್ಥಿತಿಗತಿಗಳ ಅರಿವು ಮೂಡಿಸುವ ಸಲುವಾಗಿ ತರಗತಿವಾರು ಸೇವಾ ಚಟುವಟಿಕೆಗಳಿಗೆ ಭೇಟಿ ನೀಡಿ ಸಂವಾದ ಕಾರ್ಯಕ್ರಮ ವರ್ಷಪೂರ್ತಿ ನಡೆಯಿತು. ರಾಷ್ಟ್ರೋತ್ಥಾನ ಪರಿಷತ್ ನಡೆಸುವ ತಲೆಸ್ಸೆಮಿಯಾ, ಗೋಶಾಲೆ ಮುಂತಾದ ಚಟುವಟಿಕೆಗಳಿಗೆ ಯೋಗವಿಭಾಗದ 10 ಯೋಗಕೇಂದ್ರದ ಸುಮಾರು 40ಕ್ಕೂ ಅಧಿಕ ತರಗತಿಗಳ ಯೋಗಾಭ್ಯಾಸಿಗಳು ಭೇಟಿ ನೀಡಿದರು. ತಲೆಸ್ಸೆಮಿಯಾ ಮಕ್ಕಳ ಆರೋಗ್ಯ ವಿಚಾರಿಸಿ, ಅವರಿಗೆ ಧೈರ್ಯ ತುಂಬಿ ಹಣ್ಣುಹಂಪಲು ವಿತರಿಸಿದರು. ಗೋಶಾಲೆಯಲ್ಲಿ ಗೋವುಗಳೊಂದಿಗೆ ಸಮಯ ಕಳೆದು, ಗೋಪೂಜೆ ನೆರವೇರಿಸಿ, ವೃಂದಾವನದಲ್ಲಿ ಗಿಡಗಳನ್ನು ನೆಟ್ಟರು.

**ರಕ್ತದಾನ ಶಿಬಿರ:** ಯೋಗಬಂಧುಗಳಲ್ಲಿ ಸಾಮಾಜಿಕ ಕಳಕಳಿ ಮೂಡಿಸುವ ಉದ್ದೇಶದಿಂದ ಕಳೆದ ಹಲವಾರು ವರ್ಷಗಳಿಂದ ರಕ್ತದಾನ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ಈ ವರ್ಷ ಕೇಶವಶಿಲ್ಪ, ಜಯನಗರ, ಕಲ್ಯಾಣನಗರ, ಕುಂದಲಹಳ್ಳಿ, ಸದಾಶಿವನಗರ ಯೋಗಕೇಂದ್ರಗಳಲ್ಲಿ ಎರಡು ಬಾರಿ (ಜೂನ್ ಮತ್ತು ಫೆಬ್ರುವರಿಯಲ್ಲಿ) ರಕ್ತದಾನ ಶಿಬಿರ ನಡೆಯಿತು. ಒಟ್ಟು 580ಕ್ಕೂ ಅಧಿಕ ಯೋಗಬಂಧುಗಳು ರಕ್ತದಾನ ಮಾಡಿದರು.

## ವಿದ್ಯಾರ್ಥಿಗಳಿಗಾಗಿ

**ಮಕ್ಕಳ ಯೋಗ ತರಗತಿ:** ಮಕ್ಕಳ ದೈಹಿಕ ಹಾಗೂ ಮಾನಸಿಕ ವಿಕಾಸಕ್ಕಾಗಿ ಪ್ರತಿ ಭಾನುವಾರ ಜಯನಗರ, ಸದಾಶಿವನಗರ, ಕಲ್ಯಾಣನಗರ, ಕೇಶವಶಿಲ್ಪ ಯೋಗಕೇಂದ್ರಗಳಲ್ಲಿ 'ಮಕ್ಕಳ ವಾರಾಂತ್ಯದ ತರಗತಿ'ಗಳನ್ನು ನಡೆಸಲಾಗುತ್ತಿದೆ. 100ಕ್ಕೂ ಹೆಚ್ಚು ಮಕ್ಕಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

**ಮಕ್ಕಳ ಬೇಸಿಗೆ ಶಿಬಿರ:** ರಾಷ್ಟ್ರೋತ್ಥಾನ ಯೋಗ ವಿಭಾಗದ ವತಿಯಿಂದ ಕೇಶವಶಿಲ್ಪ, ಜಯನಗರ ಹಾಗೂ ಸದಾಶಿವನಗರ ಯೋಗಕೇಂದ್ರದಲ್ಲಿ 10 ದಿನಗಳ ಬೇಸಿಗೆ ಶಿಬಿರ ನಡೆಯಿತು. ಬೆಳಗ್ಗೆ 8ರಿಂದ 12 ಗಂಟೆಯವರೆಗೆ ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ಪೂರಕವಾದ ಬೌದ್ಧಿಕ, ಶಾರೀರಿಕ, ಮಾನಸಿಕ, ಸಾಮಾಜಿಕ, ನೈತಿಕ, ಆಧ್ಯಾತ್ಮಿಕ ಚಟುವಟಿಕೆಗಳನ್ನು ನಡೆಸಲಾಯಿತು. ಮಕ್ಕಳಿಗೆ ಯೋಗ, ಪ್ರಾಣಾಯಾಮ, ದೇಶಭಕ್ತರ ಜೀವನಚರಿತ್ರೆ, ರಾಮಾಯಣ, ಮಹಾಭಾರತ ಮುಂತಾದ ವಿವಿಧ ನೀತಿ ಕಥೆಗಳು ಹಾಗೂ ಭಜನೆ, ದೇಶಭಕ್ತಿ ಗೀತೆಗಳು ಮತ್ತು ಆಟಗಳ ಮೂಲಕ ಮಕ್ಕಳ ಸಮಗ್ರ ವಿಕಾಸಕ್ಕೆ ಪೂರಕವಾದಂತಹ ಚಟುವಟಿಕೆಗಳನ್ನು ಮಾಡಿಸಲಾಯಿತು. ಸಮಾರೋಪ ಕಾರ್ಯಕ್ರಮದಲ್ಲಿ ಪೋಷಕರು ಶಿಬಿರದ ಕುರಿತು ಮುಕ್ತವಾಗಿ ಹಂಚಿಕೊಂಡರು. ಶಿಬಿರದಲ್ಲಿ ಒಟ್ಟು 150 ಮಕ್ಕಳು ಭಾಗವಹಿಸಿದ್ದರು.

# ಇತರ ಚಟುವಟಿಕೆಗಳು

## ನೃತ್ಯ–ಸಂಗೀತ ಕೇಂದ್ರ

ಸಂಗೀತಾಸಕ್ತರಿಗೆ ಸಂಗೀತದ ಕುರಿತು ತರಬೇತಿ ನೀಡುವ ಉದ್ದೇಶದಿಂದ ಜಯನಗರ (2013ರಲ್ಲಿ) ಮತ್ತು ಸದಾಶಿವನಗರ(2016) ರಾಷ್ಟ್ರೋತ್ಥಾನ ನೃತ್ಯ–ಸಂಗೀತ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ತಬಲಾ, ವೀಣೆ, ಮೃದಂಗ, ಭರತನಾಟ್ಯ, ಸುಗಮಸಂಗೀತ, ಕರ್ನಾಟಕ ಸಂಗೀತ, ಕಥಕ್ ತರಗತಿಗಳು ನಡೆಯುತ್ತಿವೆ. ಪ್ರಸ್ತುತ 165ಕ್ಕೂ ಅಧಿಕ ಮಂದಿ ಸಂಗೀತ ನೃತ್ಯ ಕೇಂದ್ರದ ಪ್ರಯೋಜನ ಪಡೆಯುತ್ತಿದ್ದಾರೆ.

**ಪ್ರತಿಭಾ ಪ್ರದರ್ಶನ:** ಜಯನಗರ ಕೇಂದ್ರದ ಕಲಾಭ್ಯಾಸಿಗಳಿಗಾಗಿ ಜನವರಿ 19ರಂದು ಕೇಶವ ಶಿಲ್ಪ ಸಭಾಂಗಣದಲ್ಲಿ ಪ್ರತಿಭಾ ಪ್ರದರ್ಶನ ಕಾರ್ಯಕ್ರಮ ನಡೆಯಿತು. ರಾಷ್ಟ್ರೋತ್ಥಾನ ಸಂಗೀತ ನೃತ್ಯ ಕೇಂದ್ರ ಹಾಗೂ ಶಾರದಾ ನಾಟ್ಯಾಲಯ ಇವರ ಜಂಟಿ ಆಶ್ರಯದಲ್ಲಿ ನಡೆದ 'ನೃತ್ಯೋತ್ಸವ ನೃತ್ಯಾರ್ಪಣೆ' ಕಾರ್ಯಕ್ರಮದಲ್ಲಿ ಎರಡೂ ನೃತ್ಯಕೇಂದ್ರಗಳ ವಿದ್ಯಾರ್ಥಿಗಳು ಭರತನಾಟ್ಯ ಪ್ರದರ್ಶನ ನಡೆಸಿದರು. 500ಕ್ಕೂ ಅಧಿಕ ಕಲಾಸಕ್ತರು ಭಾಗವಹಿಸಿದರು.

## ಫಿಟ್ನೆಸ್ ಸೆಂಟರ್

ಇಂದಿನ ಯಾಂತ್ರಿಕ ಮತ್ತು ವೇಗದ ಬದುಕಿನಿಂದ ಬದಲಾದ ಜೀವನಶೈಲಿಯಲ್ಲಿಯೂ ಸದೃಢ ದೇಹವನ್ನು ಹೊಂದುವ ಹಾಗೂ ಆರೋಗ್ಯವನ್ನು ಸುರಕ್ಷಿತವಾಗಿಡುವ ಕಳಕಳಿಯವರಿಗಾಗಿ ಆಧುನಿಕ ಜೀವನ ಶೈಲಿಗೆ ಸರಿಹೊಂದುವಂತಹ ಫಿಟ್ನೆಸ್ ಸೆಂಟರ್‌ನ್ನು ಜಯನಗರ, ಸದಾಶಿವನಗರದಲ್ಲಿ ಕಾರ್ಯನಿರ್ವಹಿಸುತ್ತಿವೆ. ಎಲ್ಲ ವಯೋಮಾನದವರು ಇದರ ಲಾಭ ಪಡೆಯುತ್ತಿದ್ದಾರೆ.



ಜಯನಗರ (623 ಮಂದಿ) ಮತ್ತು ಸದಾಶಿವನಗರದಲ್ಲಿ (850) ಸೇರಿದಂತೆ ಒಟ್ಟು 1473 ಮಂದಿ ಪ್ರತಿನಿತ್ಯ ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ರಾಷ್ಟ್ರೋತ್ಥಾನ ಫಿಟ್ನೆಸ್ ಸೆಂಟರ್‌ನಲ್ಲಿ ಅಭ್ಯಾಸ ನಡೆಸುತ್ತಿರುವವರಿಗಾಗಿ ಜಯನಗರದ ಎಂ.ಇ.ಎಸ್. ಆಟದ ಮೈದಾನದಲ್ಲಿ ಪ್ರತ್ಯೇಕವಾಗಿ ಫಿಟ್–ಮೆನ್ ಹಾಗೂ ಫಿಟ್–ವುಮೆನ್ ಸ್ಪರ್ಧೆಯನ್ನು ಆಯೋಜಿಸಲಾಯಿತು. ವಿಜೇತರಿಗೆ ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಅವರು ಬಹುಮಾನ ವಿತರಿಸಿದರು. ರಾಷ್ಟ್ರೋತ್ಥಾನ ಪರಿಷತ್ತಿನ ಆಡಳಿತ ಮಂಡಳಿ ಸದಸ್ಯ ನಾರಾಯಣ ಅವರು ಸ್ಪರ್ಧೆಯನ್ನು ಉದ್ಘಾಟಿಸಿದರು.

## ಕರಾಟೆ ತರಗತಿಗಳು

ಆತ್ಮರಕ್ಷಣೆ ಕಲೆಯಾದ ಕರಾಟೆಯ ತರಗತಿಗಳು ಜಯನಗರ ಕೇಂದ್ರದಲ್ಲಿ ನಡೆಯುತ್ತಿವೆ. ಸ್ಕೂಲ್ ಆಫ್ ಇಂಡಿಯನ್ ಕರಾಟೆಯ ಮಾಸ್ಟರ್ ಸುರೇಶ್ ಎಸ್. ರಾವ್ ಅವರ ಮಾರ್ಗದರ್ಶನದಲ್ಲಿ ಜಯನಗರ ಯೋಗಕೇಂದ್ರದಲ್ಲಿ ಕಳೆದ ಹಲವಾರು ವರ್ಷಗಳಿಂದ ಕರಾಟೆ ತರಗತಿಗಳು ನಡೆಯುತ್ತಿವೆ.

ಅನೇಕರು ವಿವಿಧ ಸ್ತರಗಳಲ್ಲಿ ಉತ್ತೀರ್ಣರಾಗಿ ವಿವಿಧ ಬೆಲ್ಟ್‌ಗಳನ್ನು ಪಡೆದಿದ್ದಾರೆ. ಪ್ರಸ್ತುತ 165 ಮಂದಿ ಪ್ರತಿನಿತ್ಯ ಕರಾಟೆ ಅಭ್ಯಾಸ ಮಾಡುತ್ತಿದ್ದಾರೆ. ಜಪಾನ್ ಕರಾಟೆ ಶೋಟೋಕೊನ್ ಅಕಾಡೆಮಿಯ ವತಿಯಿಂದ ಬೆಂಗಳೂರಿನಲ್ಲಿ ನಡೆದ 3ನೇ ರಾಷ್ಟ್ರಮಟ್ಟದ ಶೋಟೋಕೊನ್ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಜಯನಗರ ಕರಾಟೆ ಕೇಂದ್ರದ 9 ಮಂದಿ ಬಂಗಾರದ ಪದಕ ಪಡೆದರು.

## ರಾಷ್ಟ್ರೋತ್ಥಾನ ಅಂಗಮರ್ದನ ಚಿಕಿತ್ಸೆ ಮತ್ತು ಉಗಿಸ್ನಾನ ಚಿಕಿತ್ಸಾ ಕೇಂದ್ರ

ಜಯನಗರದಲ್ಲಿ ಕಳೆದ 16 ವರ್ಷಗಳಿಂದ ರಾಷ್ಟ್ರೋತ್ಥಾನ ಅಂಗಮರ್ದನ ಮತ್ತು ಉಗಿಸ್ನಾನ ಚಿಕಿತ್ಸಾ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ.

- ಕಳೆದ ಒಂದು ವರ್ಷದ ಅವಧಿಯಲ್ಲಿ 1000 ಮಂದಿ ಅಂಗಮರ್ದನ ಮತ್ತು ಉಗಿಸ್ನಾನದ ಲಾಭವನ್ನು ಪಡೆದುಕೊಂಡಿದ್ದಾರೆ.
- ಪಾರ್ಶ್ವವಾಯು, ಪಾರ್ಕಿನ್ಸನ್, ಬೆನ್ನುನೋವು, ಗಂಟುನೋವು, ರಕ್ತದೊತ್ತಡ ಮುಂತಾದ ತೊಂದರೆಗಳಿಂದ ನರಳುತ್ತಿರುವವರೂ ಇದರ ಲಾಭಪಡೆದು, ತಮ್ಮ ದೈಹಿಕ ಬದಲಾವಣೆಯ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



# ರಾಷ್ಟ್ರೋತ್ಥಾನ ಗೋಶಾಲೆ

**ಭಾರತೀಯ ದೇಶಿ ತಳಿಗಳ ಸಂರಕ್ಷಣೆ ಮತ್ತು ಸಂವರ್ಧನೆ**

ಅನಾದಿಕಾಲದಿಂದಲೂ ಭಾರತದಲ್ಲಿ ಗೋವಿಗೆ ಪೂಜ್ಯಸ್ಥಾನವನ್ನು ನೀಡಲಾಗಿದೆ. ಗೋವು ಕೇವಲ ಹಾಲು ಕೊಡುವ ಪ್ರಾಣಿಯಲ್ಲ. ಮಾನವ ಜೀವನದ ವಿಕಾಸದ ಪ್ರತಿಹಂತದಲ್ಲೂ ಗೋವಿಗೆ ಪ್ರಮುಖವಾದ ಸ್ಥಾನವನ್ನು ನೀಡಿ, ಅದನ್ನು ದೇವತೆಗಳ ಮೂಲಸ್ಥಾನ ಎಂದು ನಂಬಿದವರು ಭಾರತೀಯರು. ಆದರೆ ವಿದೇಶೀ ಮಾನಸಿಕತೆಯ ಪರಿಣಾಮದಿಂದಾಗಿ ಗೋವನ್ನು ಹಾಲು ಕೊಡುವ ಯಂತ್ರವಾಗಿ ಚಿತ್ರಿಸಲಾಗುತ್ತಿದೆ. ಈ ಮಾನಸಿಕತೆಯ ಭರಾಟೆಯಲ್ಲಿ ಗೋವಿನ ಮಹಾನತೆ ಮರೆಯಾಗುತ್ತಿದೆ. ಹಸುವನ್ನು ಕೇವಲ ಹಾಲಿನ ಮೂಲವೆಂದು ಪರಿಗಣಿಸಿ, ಭಾರತೀಯ ಗೋತಳಿಗಳನ್ನು ಅಲಕ್ಷಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೋತ್ಥಾನ ಪರಿಷತ್ ದೇಶೀಯ (ಭಾರತೀಯ) ತಳಿಗಳ ಸಂರಕ್ಷಣೆ, ಸಂವರ್ಧನೆ ಮತ್ತು ಸಂಶೋಧನೆಗಾಗಿ ದೊಡ್ಡಬಳ್ಳಾಪುರ ಸಮೀಪದ ಶ್ರೀ ಘಾಟಿಸುಬ್ರಹ್ಮಣ್ಯ ಕ್ಷೇತ್ರದ ತಪ್ಪಲಿನ 'ಶ್ರೀಮಾಧವ ಸೃಷ್ಟಿ'ಯಲ್ಲಿ ಗೋಶಾಲೆಯನ್ನು ನಡೆಸಿಕೊಂಡು ಬರುತ್ತಿದೆ.

- ದೇಸೀ ತಳಿಗಳ ಸಂರಕ್ಷಣೆ: ಗೋಪಾಲನೆಗೆ ಯೋಗ್ಯವಾದ ಈ ಪರಿಸರದಲ್ಲಿ ಗುಜರಾತಿನ ಗೀರ್, ಹರ್ಯಾಣದ ಸಾಹೀವಾಲ್, ರಾಜಸ್ಥಾನದ ಕಾಂಕ್ರಿಜ್, ರಾಜಸ್ಥಾನ–ಹರ್ಯಾಣದ ಕಾರ್‌ಪಾರ್ಕರ್, ಮಹಾರಾಷ್ಟ್ರದ ದೇವನಿ, ದಕ್ಷಿಣ ಒಳನಾಡಿನ ಹಳ್ಳಿಕಾರ್, ಮಲೆನಾಡಿನ ಗಿಡ್ಡ, ಹೊಂಗೋಲ್, ಜವಾರಿ, ಅಮೃತಮಹಲ್ ಸೇರಿದಂತೆ 10 ತಳಿಗಳ ಸಂರಕ್ಷಣೆ ಮಾಡಲಾಗುತ್ತಿದೆ.
- ಎತ್ತು, ಹೋರಿ, ದನ ಹಾಗೂ ಕರುಗಳು ಸೇರಿದಂತೆ ಒಟ್ಟು 600ಕ್ಕೂ ಅಧಿಕ ಜಾನುವಾರುಗಳಿಗೆ ಆಶ್ರಯ ನೀಡಲಾಗಿದೆ.
- **ತಳಿಗಳ ಅಭಿವೃದ್ಧಿ:** ದೇಶೀ ತಳಿಗಳ ಅಭಿವೃದ್ಧಿಗೆ ವಿಶೇಷ ಪ್ರಯತ್ನ ನಡೆಸಲಾಗುತ್ತಿದೆ. ದೇಶಿ ಗೋವುಗಳ ರಕ್ಷಣೆಗಾಗಿ ಕಾರ್ಯನಿರ್ವಹಿಸುತ್ತಿರುವ ಗೋಶಾಲೆಗಳಿಗೆ ಅಗತ್ಯ ನೆರವು ನೀಡಲು ನಿರ್ಧರಿಸಿದೆ. ಇದರ ಪ್ರಾರಂಭಿಕ ಹಂತವಾಗಿ ತಳಿ ಅಭಿವೃದ್ಧಿಗಾಗಿ ಅನೇಕ ಗೋಶಾಲೆಗಳಿಗೆ ದೇಶಿ ಹೋರಿಯನ್ನು ನೀಡಲಾಗುತ್ತಿದೆ. ಈ ವರ್ಷ 7 ಉತ್ತಮ ಗುಣಮಟ್ಟದ ಹೋರಿಗಳನ್ನು ರಾಜ್ಯದ ವಿವಿಧ ಗೋಶಾಲೆಗಳಿಗೆ ನೀಡಲಾಗಿದೆ.
- ಸಗಣಿಯನ್ನು ಬಳಸಿ ಕಾಂಪೋಸ್ಟ್, ಎರೆಗೊಬ್ಬರ ಹಾಗೂ ಅಗ್ನಿಹೋತ್ರಗಳನ್ನು ತಯಾರಿಸಲಾಗುತ್ತಿದೆ. ಸುತ್ತಮುತ್ತಲಿನ ರೈತರಿಗೆ ನೀಡಲಾಗುತ್ತಿದೆ.
- ಗೋಸಾಕಣೆ, ಹೈನುಗಾರಿಕೆ, ಸಾವಯವ ಕೃಷಿ, ಪ್ರಕೃತಿಚಿಕಿತ್ಸೆ – ಇವುಗಳಲ್ಲಿ ಸಮನ್ವಯ ಸಾಧಿಸುವ ಕಾರ್ಯಯೋಜನೆ ರೂಪಿಸಲಾಗಿದೆ.
- **ಸ್ವಾವಲಂಬೀ ವಿದ್ಯುತ್ ವ್ಯವಸ್ಥೆ:** ಗೋಶಾಲೆಯಲ್ಲಿ ಸೌರಶಕ್ತಿ ಮತ್ತು ಗೋಬರ್ ಗ್ಯಾಸ್ ಬಳಕೆಗೆ ಆದ್ಯತೆ ನೀಡಲಾಗುತ್ತಿದೆ. ಎಲ್ಲ ಬೋರ್‌ವೆಲ್‌ಗಳಿಗೆ ಸೌರವಿದ್ಯುತ್ ಅಳವಡಿಸಲಾಗಿದೆ. ಗೋಶಾಲೆಗಳ ಬೆಳಕಿನ ವ್ಯವಸ್ಥೆ ಸಂಪೂರ್ಣ ಸೌರಶಕ್ತಿಯಿಂದಲೇ ನಡೆಯುತ್ತಿದೆ.



- ಎರೆಗೊಬ್ಬರ ಘಟಕದ ಮೂಲಕ ಎರೆಗೊಬ್ಬರ ತಯಾರಿಸಲಾಗುತ್ತಿದೆ. ಸುತ್ತಮುತ್ತಲಿನ ರೈತರಿಗೆ ಈ ಎರೆಗೊಬ್ಬರವನ್ನು ನೀಡಲಾಗುತ್ತಿದೆ. 22 ತೊಟ್ಟಿಗಳಿರುವ ಎರೆಗೊಬ್ಬರ ಘಟಕ ಕಾರ್ಯ ನಿರ್ವಹಿಸುತ್ತಿದೆ.
- ಗೋಶಾಲೆಯಲ್ಲಿ ಗೋಮೂತ್ರ ಅರ್ಕ, ಧೂಪ, ಜೀವಾಮೃತ, ಘನ ಜೀವಾಮೃತ, ಕೀಟ ನಿಯಂತ್ರಕ, ಬರಣಿ, ದಂತಮಜ್ಜನ, ಗೋಚೂರ್ಣ, ಗೋಮಯ ಭಸ್ಮಗಳನ್ನು ತಯಾರಿಸಿ ರೈತರಿಗೆ ಕಡಮೆ ದರದಲ್ಲಿ ಮಾರಾಟ ಮಾಡುವ ಗುರಿಯಿಂದ ಕಾರ್ಯ ಪ್ರಾರಂಭಿಸಲಾಗಿದೆ.
- **ಉಚಿತ ಹೋರಿ/ಎತ್ತು ವಿತರಣೆ:** ಸುತ್ತಮುತ್ತಲಿನ ಹಳ್ಳಿಗಳ ರೈತರಿಗೆ ನೆರವಾಗುವ ಉದ್ದೇಶದಿಂದ ಉಚಿತ ಹೋರಿ ಹಾಗೂ ಎತ್ತುಗಳನ್ನು ನೀಡುವ ಯೋಜನೆ ಹಮ್ಮಿಕೊಳ್ಳಲಾಗಿದೆ. 2011ರಲ್ಲಿ ಪ್ರಾರಂಭಗೊಂಡ ಈ ಯೋಜನೆಯಲ್ಲಿ ಈವರೆಗೆ 263 ಜೊತೆ ಹೋರಿ/ಎತ್ತುಗಳನ್ನು ರೈತರಿಗೆ ವಿತರಿಸಲಾಗಿದೆ. ಈ ವರ್ಷ ಒಟ್ಟು 43 ಜೊತೆ ಹೋರಿ/ಎತ್ತುಗಳನ್ನು ರೈತರಿಗೆ (ಮಂಡ್ಯ, ದೊಡ್ಡಬಳ್ಳಾಪುರ, ಗೌರಿಬಿದನೂರು, ಪಾಂಡವಪುರ, ಮೇಲುಕೋಟೆ, ಹಿರಿಯೂರು, ಮದ್ದೂರು ಮುಂತಾದ ಗ್ರಾಮೀಣ ಭಾಗದವರಿಗೆ) ನೀಡಲಾಗಿದೆ. ರೈತರು ತಮ್ಮ ಗದ್ದೆಗಳ ಉಳುಮೆಗಾಗಿ ಇವುಗಳನ್ನು ಉಪಯೋಗಿಸಿಕೊಳ್ಳುತ್ತಾರೆ. ಆರೈಕೆ ಮಾಡಲು ಅಸಾಧ್ಯವಾದಾಗ ಪುನಃ ಗೋಶಾಲೆಗೆ ಹಿಂತಿರುಗಿಸಬೇಕು. ಯಾವುದೇ ಕಾರಣಕ್ಕೂ ಮಾರಾಟ ಮಾಡುವಂತಿಲ್ಲ ಎಂಬ ಒಪ್ಪಂದದ ಮೇರೆಗೆ ಇವುಗಳನ್ನು ನೀಡಲಾಗುತ್ತಿದೆ.
- ಹಂಪಿ ವಿರೂಪಾಕ್ಷ ವಿದ್ಯಾರಣ್ಯ ಮಹಾ ಸಂಸ್ಥಾನಂ ಪೀಠಾಧಿಪತಿಗಳಾದ ಪೂಜ್ಯ ವಿರೂಪಾಕ್ಷ ಸ್ವಾಮಿಜೀಗಳು, ಬೆಂಗಳೂರಿನ ಗಾಂಧಿನಗರದ ಮಹಾಬೋಧಿ ಸೊಸೈಟಿಯ 70ಸದಸ್ಯರು ಹಾಗೂ ವಿವಿಧ ಸಂಘಟನೆಗಳ ಸದಸ್ಯರು ಗೋಶಾಲೆಗೆ ಭೇಟಿ ನೀಡಿದರು
- ಲಕ್ಷ್ಮೀ ಉಮೇಶ್ ಭಟ್, ಜಯನಗರದ Liones Rotary Club, ಬೆಂಗಳೂರಿನ ಗಾಂಧಿನಗರದ ಮಹಾಬೋಧಿ ಸೊಸೈಟಿ ಸದಸ್ಯರು ಸೇರಿದಂತೆ ಸಾಮಾಜಿಕ ಕಳಕಳಿಯಿರುವ ಹಲವರು ಮೇವು ಹಾಗೂ ಕಟ್ಟಡ ನಿರ್ಮಾಣ ಕಾರ್ಯಗಳಿಗೆ ಅಗತ್ಯ ನೆರವು ನೀಡಿದರು.
- ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ಕೋಲಾರದ ಮುಳಬಾಗಿಲಿನ ಧರ್ಮಸ್ಥಳ ಸಂಘದ ಕೃಷಿಕರು ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು

ಮತ್ತು ಗ್ರಾಮ ವಿಕಾಸದ ಸಂಘಟನೆಯ ಸದಸ್ಯರು ಮುಂತಾದವರು ವಿವಿಧ ತಂಡಗಳಲ್ಲಿ ಆಗಮಿಸಿ ಸಮಗ್ರ ಸಾವಯವ ಕೃಷಿ ಹಾಗೂ ಗೋಸಾಕಣೆಯ ಕುರಿತು ಮಾಹಿತಿ ಪಡೆದರು.

- ನಾಗಪುರದ ಗೋ ವಿಜ್ಞಾನ ಅನುಸಂಧಾನ ಕೇಂದ್ರದ ಸುನಿಲ್ ಮಾನ್‌ಸಿಂಗ್, ಭಾರತೀಯ ಗೋ ಸಂರಕ್ಷಣಾ ಸಮಿತಿಯ ಸದಸ್ಯರಾದ ಶಂಕರ್‌ಲಾಲ್ ಅವರು ಗೋಶಾಲೆಗೆ ಭೇಟಿ ನೀಡಿ ಸಮಗ್ರಸಾವಯವ ಕೃಷಿ, ಗೋ ಸಂವರ್ಧನೆಯ ಕುರಿತು ಮಾರ್ಗದರ್ಶನ ಮಾಡಿದರು.
- ಗೋಶಾಲೆಯಲ್ಲಿನ ಗೋ ಸಾಕಣೆಯ ಕುರಿತು ರಾಜ್ಯದ ವಿವಿಧ ಭಾಗಗಳ ರೈತರು ಹಾಗೂ ಹೈನುಗಾರಿಕಾ ಇಲಾಖೆಯವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.
- ರಾಜ್ಯದ ವಿವಿಧೆಡೆಗಳಲ್ಲಿ ನಡೆಯುವ ಗೋಶಾಲೆ ಸಂಬಂಧಿತ ಕಾರ್ಯಾಗಾರ, ಉತ್ಸವಗಳಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಲಾಗುತ್ತಿದೆ.
- 40 ಮಂದಿ ಗೋಪಾಲಕರು ಕೆಲಸ ನಿರ್ವಹಿಸುತ್ತಿದ್ದಾರೆ.

**ಉತ್ಸವಗಳು :** ಗೋಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರಲ್ಲಿ ಸಹೋದರತೆ ಮೂಡಿಸುವ ಹಾಗೂ ನಮ್ಮ ಪರಂಪರೆ ಸಂಸ್ಕೃತಿಗಳ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಶ್ರೀರಾಮನವಮಿ, ರಕ್ಷಾಬಂಧನ, ಕೃಷ್ಣಜನ್ಮಾಷ್ಟಮಿ, ಗಣೇಶಚತುರ್ಥಿ, ಆಯುಧಪೂಜೆ, ದೀಪಾವಳಿ, ಮಕರಸಂಕ್ರಾಂತಿ, ಯುಗಾದಿ, ವಿವೇಕಾನಂದ ಜಯಂತಿ ಮುಂತಾದ ಉತ್ಸವಗಳನ್ನು ನಿರಂತರವಾಗಿ ಆಚರಿಸಿಕೊಂಡು ಬರಲಾಗುತ್ತಿದೆ.



## ವೃಂದಾವನ – ಕಾಡು ಬೆಳೆಸುವ ವಿಶೇಷ ಯೋಜನೆ

ಭೂಮಿ, ಕಾಡು ಮತ್ತು ದೇಶಿ ಗೋವುಗಳ ನಡುವೆ ಅವಿನಾಭಾವ ಸಂಬಂಧವಿದೆ. ಈ ವಾಸ್ತವದ ಆಧಾರದ ಮೇಲೆ ಗೋಶಾಲೆಯ 20 ಎಕರೆ ಪರಿಸರದಲ್ಲಿ ಕಾಡನ್ನು ಬೆಳೆಸುವ 'ವೃಂದಾವನ' ಎಂಬ ಯೋಜನೆಯನ್ನು ರಾಷ್ಟ್ರೋತ್ಥಾನ ಪರಿಷತ್ 2018ರಲ್ಲಿ ಪ್ರಾರಂಭಿಸಿದೆ.

- ಸುಪ್ರಸಿದ್ಧ ಮಾಕಳಿ ಗುಡ್ಡದ ಸಮೀಪದ 20 ಎಕರೆ ಜಾಗದಲ್ಲಿ 4 ಪರಿಕಲ್ಪನೆಯಲ್ಲಿ (ಮಹಾವನ, ತಪೋವನ, ಶ್ರೀವನ ಹಾಗೂ ವಸುಧೈವ ಕುಟುಂಬಕಂ) ಕಾಡು ನಿರ್ಮಾಣ.
- ಖ್ಯಾತ ಪರಿಸರ ತಜ್ಞ ಡಾ. ಯಲ್ಲಪ್ಪ ರೆಡ್ಡಿ ಅವರ ಮಾರ್ಗದರ್ಶನ.
- ಔಷಧೀಯ, ಆಯುರ್ವೇದೀಯ ಗುಣಗಳಿರುವ ಸಾಂಪ್ರದಾಯಿಕ ಸ್ಥಳೀಯ ಪಾಣಿಪಕ್ಷಿಸಂಕುಲಕ್ಕೆ ಪೂರಕ ಸಸ್ಯಗಳು.
- ಸಂಪೂರ್ಣ ಸೋಲಾರ್ ಶಕ್ತಿಯನ್ನು ಬಳಸಿ ನೀರಾವರಿ ವ್ಯವಸ್ಥೆ. ಹನಿ ನೀರು ವ್ಯರ್ಥವಾಗದಂತೆ ಜಲಸಂರಕ್ಷಣೆಯ ಯೋಜನೆ.
- ಪ್ರಾರಂಭಿಕ ಹಂತವಾಗಿ 5 ಎಕರೆ ಜಾಗದಲ್ಲಿ 'ಮಹಾವನ' ರೂಪುಗೊಳ್ಳಲಿದ್ದು, ಈಗಾಗಲೇ 3000ಕ್ಕೂ ಅಧಿಕ ಗಿಡಗಳನ್ನು ನೆಡಲಾಗಿದೆ.
- ಮೂರನೇ ಹಂತದ ಗಿಡನೆಡುವ ಕಾರ್ಯಕ್ರಮದಲ್ಲಿ ಬೆಂಗಳೂರಿನ ಗ್ಲೋಬಲ್ ಎಡ್ಜ್ ಸಾಫ್ಟ್‌ವೇರ್ ಕಂಪೆನಿಯು 400 ಶ್ರೀಗಂಧ ಹಾಗೂ ಹಣ್ಣಿನ ಗಿಡಗಳು, ಸೇವಕ್ ಸಮುದಾಯವು 30 ಹಣ್ಣಿನ ಗಿಡಗಳು ಮತ್ತು ದೊಡ್ಡಬಳ್ಳಾಪುರದ ಮಹಿಳಾ ಸಮಾಜ ಪದಾಧಿಕಾರಿಗಳು ಹತ್ತು ತೆಂಗಿನ ಗಿಡಗಳನ್ನು ನೀಡಿದೆ. ಸಾಮಾಜಿಕ ಕಾರ್ಯಕರ್ತ ಅಶ್ವಿನ್ ಕೆ. ಪಜ್ವಾ ಅವರು ತಮ್ಮ ಮಗಳ ನಾಮಕರಣ ಕಾರ್ಯಕ್ರಮವನ್ನು ಗೋಶಾಲೆಯಲ್ಲಿ ಆಯೋಜಿಸಿ ಆ ನಿಮಿತ್ತ ವೃಂದಾವನದಲ್ಲಿ 70 ಗಿಡಗಳನ್ನು ನೆಟ್ಟರು.



# ಶೈಕ್ಷಣಿಕ ಸಂಸ್ಥೆಗಳು

ಸಾಮಾಜಿಕ ವ್ಯವಸ್ಥೆಯ ಉಪಕ್ರಮದ ಮೇಲೆ ಪ್ರಭಾವ ಬೀರಬಲ್ಲ ಬಹುಪ್ರಮುಖ ಅಂಗ ಶೈಕ್ಷಣಿಕ ಕ್ಷೇತ್ರ, ಸುಶಿಕ್ಷಿತ, ಸುಸಂಸ್ಕೃತ ಸಮಾಜದ ನಿರ್ಮಾಣಕ್ಕಾಗಿಯೇ ಹುಟ್ಟಿಕೊಂಡ ರಾಷ್ಟ್ರೋತ್ಥಾನ ಪರಿಷತ್, ಶಿಕ್ಷಣ ಕ್ಷೇತ್ರದಲ್ಲಿ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಹೆಸರಿನಲ್ಲಿ ಮಹತ್ತ್ವದ ಮೈಲಿಗಲ್ಲುಗಳನ್ನಿಡುತ್ತಿದೆ. ವಿದ್ಯಾರ್ಥಿಗಳನ್ನು ಸಮರ್ಥ, ಸುಯೋಗ್ಯ ನಾಗರಿಕರನ್ನಾಗಿ ರೂಪಿಸುವ ಉದ್ದೇಶದಿಂದ 1972ರಲ್ಲಿ ಬಳ್ಳಾರಿಯ ಹಗರಿಬೊಮ್ಮನ ಹಳ್ಳಿಯಲ್ಲಿ ಶಿಶುಮಂದಿರದೊಂದಿಗೆ ಪ್ರಾರಂಭಗೊಂಡ ಪರಿಷತ್‌ನ ಶೈಕ್ಷಣಿಕ ಚಟುವಟಿಕೆಗಳು ಇಂದು 22 ಶಿಶುಮಂದಿರಗಳು, 13 ಪ್ರಾಥಮಿಕ ಶಾಲೆಗಳು, 10 ಪ್ರೌಢಶಾಲೆ ಹಾಗೂ ಒಂದು ವಸತಿ ಶಾಲೆಯೂ ಸೇರಿದಂತೆ ಒಟ್ಟು 6 ಕೇಂದ್ರೀಯ ಪಠ್ಯಕ್ರಮಾಧಾರಿತ (CBSE) ಶಾಲೆ ಹಾಗೂ 2 ಪದವಿಪೂರ್ವ ಕಾಲೇಜುಗಳ ಮೂಲಕ ರಾಜ್ಯಾದ್ಯಂತ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿದೆ.











## ಶಿಶುಮಂದಿರಗಳು

| ಕ್ರ.ಸಂ | ಶಿಶುಮಂದಿರಗಳು | ಸಂಖ್ಯೆ |
|---|---|---|
| 1 | ರಾಷ್ಟ್ರೋತ್ಥಾನ ಶಿಶುಮಂದಿರ, ಕಲಬುರ್ಗಿ | 1 |
| 2 | ರಾಷ್ಟ್ರೋತ್ಥಾನ ಶಿಶುಮಂದಿರ, ಕೆರೂರು ಗ್ರಾಮಾಂತರ | 1 |
| 3 | ರಾಷ್ಟ್ರೋತ್ಥಾನ ಶಿಶುಮಂದಿರ, ಧಾರವಾಡ ಗ್ರಾಮಾಂತರ | 5 |
| 4 | ರಾಷ್ಟ್ರೋತ್ಥಾನ ಶಿಶುಮಂದಿರ, ಹುಬ್ಬಳ್ಳಿ | 1 |
| 5 | ರಾಷ್ಟ್ರೋತ್ಥಾನ ಶಿಶುಮಂದಿರ, ದಾವಣಗೆರೆ | 1 |
| 6 | ಶಾರದಾ ಶಿಶುಮಂದಿರ, ಹಗರಿಬೊಮ್ಮನಹಳ್ಳಿ | 1 |
| 7 | ಸರಸ್ವತಿ ಶಿಶುಮಂದಿರ, ಹಗರಿಬೊಮ್ಮನಹಳ್ಳಿ | 1 |
| 8 | ಜ್ಞಾನಭಾರತಿ ಶಿಶುಮಂದಿರ, ಚಿತ್ರದುರ್ಗ | 1 |
| 9 | ಲಯನ್ಸ್ ಸೇವಾಭಾರತಿ ಶಿಶುಮಂದಿರ, ಬೆಂಗಳೂರು | 1 |
| 10 | ಸಾಂದೀಪನ ಶಿಶುಮಂದಿರ, ಬೆಂಗಳೂರು | 1 |
| 11 | ರಾಷ್ಟ್ರೋತ್ಥಾನ ಶಿಶುಮಂದಿರ, ಹೊಳೆಹೊನ್ನೂರು & ಗ್ರಾಮಾಂತರ | 7 |
| 12 | ಜೈ ಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ಶಿಶುಮಂದಿರ, ಬೆಂಗಳೂರು | 1 |
| | **ಒಟ್ಟು ಸಂಖ್ಯೆ** | **22** |

## ರಾಷ್ಟ್ರೋತ್ಥಾನ ಪರಿಷತ್ತಿನ ಕೇಂದ್ರ ಪಠ್ಯಕ್ರಮ ಶಾಲೆಗಳು

1 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಧಾರವಾಡ (ಗಂಡು ಮಕ್ಕಳ ವಸತಿ ಶಾಲೆ)
2 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಥಣಿಸಂದ್ರ, ಬೆಂಗಳೂರು
3 ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ರಾಮಮೂರ್ತಿನಗರ, ಬೆಂಗಳೂರು
4 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಬನಶಂಕರಿ, ಬೆಂಗಳೂರು
5 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಹಗರಿಬೊಮ್ಮನಹಳ್ಳಿ
6 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ದಾವಣಗೆರೆ

## ರಾಜ್ಯ ಪಠ್ಯಕ್ರಮ ಪ್ರಾಥಮಿಕ ಶಾಲೆಗಳು

1. ರಾಷ್ಟ್ರೋತ್ಥಾನ ವಿದ್ಯಾಲಯ, ಕಲಬುರ್ಗಿ
2. ರಾಮಕೃಷ್ಣ ವಿದ್ಯಾಮಂದಿರ, ಕೆರೂರು
3. ರಾಷ್ಟ್ರೋತ್ಥಾನ ವಿದ್ಯಾಲಯ, ಧಾರವಾಡ
4. ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಹುಬ್ಬಳ್ಳಿ
5. ರಾಷ್ಟ್ರೋತ್ಥಾನ ವಿದ್ಯಾಲಯ, ದಾವಣಗೆರೆ
6. ರಾಷ್ಟ್ರೋತ್ಥಾನ ಹಿರಿಯ ಪ್ರಾಥಮಿಕ ಶಾಲೆ, ಹಗರಿಬೊಮ್ಮನಹಳ್ಳಿ
7. ರಾಷ್ಟ್ರೋತ್ಥಾನ ವಿದ್ಯಾಲಯ, ಹೊಳೆಹೊನ್ನೂರು
8. ಸಾಂದೀಪನ ವಿದ್ಯಾಭವನ, ಶ್ರೀರಾಂಪುರ, ಬೆಂಗಳೂರು
9. ಲಯನ್ಸ್ ಸೇವಾಭಾರತಿ ವಿದ್ಯಾಲಯ, ಉಲ್ಲಾಳು ಉಪನಗರ, ಬೆಂಗಳೂರು
10. ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಲಯ, ಕಲ್ಯಾಣನಗರ, ಬೆಂ.
11. ಜ್ಞಾನಭಾರತಿ ವಿದ್ಯಾಮಂದಿರ, ಚಿತ್ರದುರ್ಗ
12. ಶಾರದಾ ಆಂಗ್ಲ ಮಾಧ್ಯಮಿಕ ವಿದ್ಯಾಲಯ, ಹಗರಿಬೊಮ್ಮನಹಳ್ಳಿ
13. ರಾಷ್ಟ್ರೋತ್ಥಾನ ವಿದ್ಯಾಲಯ, ಮುಂಗಾನಹಳ್ಳಿ

## ರಾಜ್ಯ ಪಠ್ಯಕ್ರಮ ಪ್ರೌಢಶಾಲೆಗಳು

1. ರಾಷ್ಟ್ರೋತ್ಥಾನ ಪ್ರೌಢಶಾಲೆ, ಹಗರಿಬೊಮ್ಮನಹಳ್ಳಿ
2. ರಾಷ್ಟ್ರೋತ್ಥಾನ ಪ್ರೌಢಶಾಲೆ, ದಾವಣಗೆರೆ
3. ರಾಷ್ಟ್ರೋತ್ಥಾನ ಪ್ರೌಢಶಾಲೆ, ಹೊಳೆಹೊನ್ನೂರು
4. ವಿಕಾಸ ಪ್ರೌಢಶಾಲೆ, ರಾಮಮೂರ್ತಿನಗರ, ಬೆಂಗಳೂರು
5. ಪತ್ತಿ ಆದಿನಾರಾಯಣಯ್ಯ ರಾಮಲಕ್ಷ್ಮಮ್ಮ ಪ್ರೌಢಶಾಲೆ, ಮುಂಗಾನಹಳ್ಳಿ, (ಚಿಂತಾಮಣಿ) (2)
6. ಶಾರದಾ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಹಗರಿಬೊಮ್ಮನಹಳ್ಳಿ
7. ಜ್ಞಾನಭಾರತಿ ವಿದ್ಯಾಮಂದಿರ, ಚಿತ್ರದುರ್ಗ
8. ಸಾಂದೀಪನ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಶ್ರೀರಾಂಪುರ, ಬೆಂಗಳೂರು
9. ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ಪ್ರೌಢಶಾಲೆ, ಕಲ್ಯಾಣನಗರ, ಬೆಂಗಳೂರು
10. ಶ್ರೀ ಬೀರೇಶ್ವರ ಗ್ರಾಮಾಂತರ ಪ್ರೌಢಶಾಲೆ, ಅಬ್ಬೂರುದೊಡ್ಡಿ, ಚನ್ನಪಟ್ಟಣ

## ಪದವಿಪೂರ್ವ ಕಾಲೇಜುಗಳು

1. ರಾಷ್ಟ್ರೋತ್ಥಾನ ಪದವಿಪೂರ್ವ ಕಾಲೇಜು, ಹಗರಿಬೊಮ್ಮನಹಳ್ಳಿ
2. ರಾಷ್ಟ್ರೋತ್ಥಾನ ಪದವಿಪೂರ್ವ ಕಾಲೇಜು, ಥಣಿಸಂದ್ರ



**ನೂತನ ಕಟ್ಟಡ ಲೋಕಾರ್ಪಣೆ ಸಮಾರಂಭ:** ಮುಂಗಾನಹಳ್ಳಿಯಲ್ಲಿ ರಾಷ್ಟ್ರೋತ್ಥಾನ ಪರಿಷತ್ ನಡೆಸುತ್ತಿರುವ ಪತ್ತಿ ಆದಿನಾರಾಯಣಯ್ಯ ರಾಮಲಕ್ಷ್ಮಮ್ಮ ವಿದ್ಯಾಸಂಸ್ಥೆಯಲ್ಲಿ ನೂತನವಾಗಿ ನಿರ್ಮಿಸಲಾದ ಕಟ್ಟಡದ ಲೋಕಾರ್ಪಣೆ ಸಮಾರಂಭ ಕಾರ್ಯಕ್ರಮ ಅಕ್ಟೋಬರ್ 20ರಂದು ನಡೆಯಿತು. ಹೈದರಾಬಾದಿನ Cyient Limited ಸಂಸ್ಥೆಯ ಹಿರಿಯ ಉಪಾಧ್ಯಕ್ಷರಾದ ಡಾ। ಪಿ.ಎನ್.ಎಸ್.ವಿ. ನರಸಿಂಹಂ ಮತ್ತು ಪತ್ತಿ ಸಿಲ್ಕ್ ಹೌಸ್‌ನ ಮಾಲೀಕರಾದ ಪತ್ತಿ ಪಾಂಡುರಂಗ ಅವರು ಲೋಕಾರ್ಪಣೆ ನೆರವೇರಿಸಿದರು. ಪತ್ತಿ ಕುಟುಂಬದ ಸದಸ್ಯರು, ಪರಿಷತ್ತಿನ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಭಾಗವಹಿಸಿದರು. ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಗರಿಷ್ಠ ಅಂಕ ಗಳಿಸಿದ ಶಾಲೆಯ ವಿದ್ಯಾರ್ಥಿಗಳಾದ ಮಧುಕರ ರೆಡ್ಡಿ, ವಿವೇಕ ಕುಮಾರ್ ಮತ್ತು ರಾಜೇಶ್ ಅವರನ್ನು ಪದಕ ಮತ್ತು ಆರ್ಥಿಕ ನೆರವು ನೀಡಿ ಪುರಸ್ಕರಿಸಲಾಯಿತು.

**ಬನಶಂಕರಿ ವಿದ್ಯಾಕೇಂದ್ರದ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ :** ವಿದ್ಯಾರ್ಥಿಗಳ ಮನೋವಿಕಾಸದ ಸಲುವಾಗಿ ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಸೆಪ್ಟೆಂಬರ್ 26 ರಿಂದ ಅ. 6ರ ತನಕ ಉತ್ತರಾಖಂಡ್ ಪ್ರವಾಸ ಕಾರ್ಯಕ್ರಮ ನಡೆಯಿತು. 10ನೇ ತರಗತಿಯ 51 ವಿದ್ಯಾರ್ಥಿಗಳು ಹಾಗೂ 6 ಶಿಕ್ಷಕರು ಈ ಸಾಂಸ್ಕೃತಿಕ ವಿನಿಮಯ ಪ್ರವಾಸದಲ್ಲಿ ಭಾಗವಹಿಸಿದರು. ಉತ್ತರಾಖಂಡದ ನೈನಿತಾಲ್, ಮುಸೌರಿ, ಡೆಹ್ರಾಡೂನ್,



ಹರಿದ್ವಾರ, ಹೃಷಿಕೇಶ ಮತ್ತು ದೆಹಲಿಯ ಸಂಸತ್ ಭವನ, ಜಂತರ್ ಮಂತರ್, ಸೈನಿಕರ ಸ್ಮಾರಕ ಇಂಡಿಯಾ ಗೇಟ್ ಮುಂತಾದೆಡೆಗಳಿಗೆ ಭೇಟಿ ನೀಡಿ ಮಾಹಿತಿ ಪಡೆದರು. ಕೇಂದ್ರ ಸರ್ಕಾರದ ಕ್ರೀಡಾ ಮತ್ತು ಯುವಜನ ಸಚಿವಾಲಯದ ಮಂತ್ರಿಗಳಾದ ಕಿರಣ್ ರಿಜಿಜು ಅವರನ್ನು ಭೇಟಿ ಮಾಡಿ ಸಂವಾದ ನಡೆಸಿದರು.

**ಗುದ್ದಲಿಪೂಜೆ:** ಜನವರಿ 29ರಂದು ಶ್ರೀರಾಮಪುರದ ಶ್ರೀ ಸಾಂದೀಪನ ವಿದ್ಯಾಭವನದ ಕಟ್ಟಡ ನವೀಕರಣದ ಗುದ್ದಲಿಪೂಜೆಯನ್ನು ರಾಜ್ಯ ಶಿಕ್ಷಣ ಸಚಿವರಾದ ಎಸ್. ಸುರೇಶ್ ಕುಮಾರ್ ಅವರು ನೆರವೇರಿಸಿದರು.



## ಸಂಕಲ್ಪನಾ

ಭಾರತವನ್ನು ಸರ್ವರೀತಿಗಳಲ್ಲಿಯೂ ಪರಮ ವೈಭವ ಸ್ಥಿತಿಗೆ ಕೊಂಡೊಯ್ಯುವುದರಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರ ಪಾತ್ರ ಮಹತ್ತ್ವದ್ದು ಎಂಬುದನ್ನು ಗಮನದಲ್ಲಿಟ್ಟುಕೊಂಡು ರಾಷ್ಟ್ರೋತ್ಥಾನ ಪರಿಷತ್ 'ಸಂಕಲ್ಪನಾ' ಎಂಬ ಹೆಸರಿನಲ್ಲಿ ವಿವಿಧ ಚಟುವಟಿಕೆಗಳನ್ನು ನಡೆಸುತ್ತಿದೆ.

### ಅ) ಶಿಕ್ಷಕರಿಗಾಗಿ

ಶಿಕ್ಷಕರಿಗೆ ಕಾರ್ಯಕ್ಷೇತ್ರದಲ್ಲಿ ಎದುರಾಗುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಹಾಗೂ ಗುಣಮಟ್ಟವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುವ ಪರಿಣಾಮಕಾರಿಯಾಗಿಸುವ ಸಲುವಾಗಿ ಶಿಕ್ಷಕರಿಗಾಗಿ ವಿವಿಧ ಕಾರ್ಯಾಗಾರ, ಪ್ರಶಿಕ್ಷಣ ವರ್ಗಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

**ಶಿಕ್ಷಕರ ಪ್ರಶಿಕ್ಷಣ ವರ್ಗ:** ಹೊಸದಾಗಿ ನಿಯುಕ್ತಿಗೊಂಡ ಶಿಕ್ಷಕರಿಗಾಗಿ ಮೇ 20ರಿಂದ 25ರವರೆಗೆ ಚಿತ್ರದುರ್ಗದ ಜ್ಞಾನಭಾರತಿ ವಿದ್ಯಾಮಂದಿರದಲ್ಲಿ ಶಿಕ್ಷಕರ ಪ್ರಶಿಕ್ಷಣ ವರ್ಗ ನಡೆಯಿತು.

ವಿವಿಧ ಅವಧಿಗಳಲ್ಲಿ ಶಿಕ್ಷಣದ ಮಹತ್ತ್ವ, ನಮ್ಮ ಸಂಸ್ಕೃತಿ, ಮಹಾಪುರುಷರ ಜೀವನಚರಿತ್ರೆ, ತರಗತಿ ನಿರ್ವಹಣೆ ಮುಂತಾದ ವಿಷಯಗಳ ಕುರಿತು ಚರ್ಚೆ–ಮಾರ್ಗದರ್ಶನ ನಡೆಯಿತು. ರಾಷ್ಟ್ರೋತ್ಥಾನ ಪರಿಷತ್‌ನ ಆಡಳಿತ ಮಂಡಳಿ ಸದಸ್ಯರಾದ ಕೆ.ಎಸ್. ನಾರಾಯಣ, ರವಿಕುಮಾರ್, ದ್ವಾರಕಾನಾಥ್, ರಾಜಾರಾಮ್, ವಿದ್ಯಾಭಾರತಿಯ ಸದಸ್ಯ ಪರಮೇಶ್ವರ ಹೆಗಡೆ, ಬೆಂಗಳೂರಿನ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನಲ್ಲಿ ಕನ್ನಡ ಉಪನ್ಯಾಸಕರಾದ ರಾಜು, ರಾಷ್ಟ್ರೋತ್ಥಾನ ಪರಿಷತ್ತಿನ ಶೈಕ್ಷಣಿಕ ಕ್ರಿಯಾ ಸಮಿತಿಯ ಸಹಸಂಚಾಲಕರಾದ ಬಸವರಾಜ್ ಮುಂತಾದವರು ಆಗಮಿಸಿ ಮಾರ್ಗದರ್ಶನ ಮಾಡಿದರು.



**ಕನ್ನಡ ಭಾಷಾ ಶಿಕ್ಷಕರ ಪ್ರಶಿಕ್ಷಣ ವರ್ಗ:** ಕನ್ನಡ ಶಿಕ್ಷಕರ ಸಾಮರ್ಥ್ಯ–ಕೌಶಲ್ಯವರ್ಧನೆಗಾಗಿ ಹೊಳೆಹೊನ್ನೂರಿನ ರಾಷ್ಟ್ರೋತ್ಥಾನ ವಿದ್ಯಾಲಯದಲ್ಲಿ ಕನ್ನಡ ಭಾಷಾ ಶಿಕ್ಷಕರ ಪ್ರಶಿಕ್ಷಣ ವರ್ಗ ನಡೆಯಿತು. ನ್ಯಾಷನಲ್ ಪ್ರೌಢಶಾಲೆಯ ಕನ್ನಡ ಶಿಕ್ಷಕರಾದ ರಾಜು ಪಿ., ಶೈಕ್ಷಣಿಕ ಕ್ರಿಯಾ ಸಮಿತಿಯ ಸಂಚಾಲಕರಾದ ರಾಜಾರಾಂ, ಸಹಸಂಯೋಜಕ ಬಸವರಾಜ ಮುಂತಾದವರು ಆಗಮಿಸಿ ಕನ್ನಡ ಭಾಷಾ ಬೋಧನೆಯ ಕೌಶಲ್ಯ, ಮಾತುಗಾರಿಕೆ, ಕಥೆ ಹೇಳುವುದು ಮುಂತಾದ ವಿಷಯಗಳ ಬಗೆಗೆ ಮಾರ್ಗದರ್ಶನ ಮಾಡಿದರು.

**ಕಾರ್ಯದರ್ಶಿಗಳು ಹಾಗೂ ಮುಖ್ಯಶಿಕ್ಷಕರ ಬೈಠಕ್:** ರಾಷ್ಟ್ರೋತ್ಥಾನ ಪರಿಷತ್ತಿನ ರಾಜ್ಯ ಪಠ್ಯಕ್ರಮ ಶಾಲೆಗಳ ಕಾರ್ಯದರ್ಶಿಗಳು ಹಾಗೂ ಮುಖ್ಯ ಶಿಕ್ಷಕರು, ಹಿರಿಯ ಶಿಕ್ಷಕರ ಬೈಠಕ್ ಕುಂದಾಪುರ ತಾಲೂಕಿನ ತೆಕ್ಕಟ್ಟೆಯ ಸೇವಾಸಂಗಮ ವಿದ್ಯಾಕೇಂದ್ರದಲ್ಲಿ ನಡೆಯಿತು.

ತಮ್ಮ ಶಾಲೆಗಳಲ್ಲಿ ನಡೆದ ಉಲ್ಲೇಖನೀಯ ಚಟುವಟಿಕೆಗಳ ಕುರಿತು ವರದಿ ನೀಡಿದರು. ವಿದ್ಯಾರ್ಥಿಗಳಲ್ಲಿ ಹಾಗೂ ಸಮಾಜದಲ್ಲಿ ಗುಣ ನಿರ್ಮಾಣ ಮಾಡಲು ಪೂರಕವಾದ ಚಟುವಟಿಕೆಗಳ ಕುರಿತು ಚರ್ಚೆ ನಡೆಯಿತು.

**ಮುಖ್ಯಶಿಕ್ಷಕರ ಯೋಜನಾ ಬೈಠಕ್:** 2020–21ನೇ ಶೈಕ್ಷಣಿಕ ವರ್ಷದ ಯೋಜನಾ ಬೈಠಕ್ ಮಾರ್ಚ್ 1ರಂದು ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆಯಿತು. ರಾಜ್ಯ ಪಠ್ಯಕ್ರಮದ ಎಲ್ಲ ಮುಖ್ಯ ಶಿಕ್ಷಕರು ಭಾಗವಹಿಸಿದರು. ಕಳೆದ ವರ್ಷದ ಯೋಜನೆಯ ಕಾರ್ಯಾನ್ವಯದ ವರದಿ ಹಾಗೂ ಮುಂದಿನ ವರ್ಷದ ಚಟುವಟಿಕೆಗಳ ಕುರಿತು ಚರ್ಚೆ–ಸಂವಾದ ನಡೆಯಿತು.

**ಶಿಕ್ಷಕರ ತರಬೇತಿ ಶಿಬಿರ:** ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಸಿಬಿಎಸ್‌ಇ ಶಾಲಾ ಶಿಕ್ಷಕರಿಗಾಗಿ ಮೇ 16ರಿಂದ ಮೂರು ದಿನಗಳ ಶಿಕ್ಷಕರ ತರಬೇತಿ ಶಿಬಿರ ನಡೆಯಿತು. ಶಿಬಿರವನ್ನು ದಾವಣಗೆರೆಯ ರಾಮಕೃಷ್ಣ ಮಠದ ಪೂಜ್ಯ ತ್ಯಾಗಾನಂದೇಶ್ವರ ಸ್ವಾಮಿಜೀ ಅವರು ಉದ್ಘಾಟಿಸಿದರು. ವಿವಿಧ ಅವಧಿಗಳಲ್ಲಿ ನಡೆದ ಶಿಬಿರದಲ್ಲಿ ಸಿಬಿಎಸ್‌ಇ ಶಾಲೆಗಳ ಸಹ ಸಂಯೋಜಕರಾದ ಗಜಾನನ ಲೋಂಡೆ ಅವರು ಯೋಗದ ಮಹತ್ತ್ವ ಹಾಗೂ ಯೋಗದ ವಿವಿಧ ಮುಖಗಳನ್ನು ಪರಿಚಯಿಸಿದರು.



**ಶಿಕ್ಷಕರ ಕಾರ್ಯಾಗಾರ:** ಜೂನ್ 22ರಂದು ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆದ ಶಿಕ್ಷಕರ ಕಾರ್ಯಾಗಾರದಲ್ಲಿ ಸಂವೇದ್ ಶಿಕ್ಷಕರ ತರಬೇತಿ ವಿದ್ಯಾಲಯದ ಸುರೇಂದ್ರನಾಥ್ ಪಿ. ನಿಶಾನಿಮಠ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು.

**ಶಿಕ್ಷಕರ ತರಬೇತಿ ಕಾರ್ಯಾಗಾರ:** ರಾಷ್ಟ್ರೋತ್ಥಾನ ಪರಿಷತ್‌ನ ಸಿಬಿಎಸ್‌ಇ ಶಾಲೆಗಳ ಶಿಕ್ಷಕರ ತರಬೇತಿ ಕಾರ್ಯಗಾರ ಅಕ್ಟೋಬರ್ 11 ಮತ್ತು 12ರಂದು ಹಗರಿಬೊಮ್ಮನಹಳ್ಳಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆಯಿತು. ಹೊಸಪೇಟೆಯ ಹಾಸನಾಂಬ ಶಾರದಾಂಬ ಆಶ್ರಮದ ಪ್ರಭೋದಮಯಿ ಮಾತಾಜಿ ಅವರು ಕಾರ್ಯಾಗಾರವನ್ನು ಉದ್ಘಾಟಿಸಿದರು. ಆಟ–ಪಾಠ–ಒಡನಾಟ, ಮಕ್ಕಳ ಮನಃಸ್ಥಿತಿ ಮತ್ತು ನಮ್ಮ ಪಾಠ್ಯರೀತಿ, ಬೋಧನಾ ಕ್ರಮ ಮುಂತಾದವುಗಳ ಬಗ್ಗೆ ಚರ್ಚೆ ನಡೆಯಿತು. ಧಾರವಾಡ, ದಾವಣಗೆರೆ, ಹಗರಿಬೊಮ್ಮನಹಳ್ಳಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಶಿಕ್ಷಕರು ಉಪಸ್ಥಿತರಿದ್ದರು.

**ಶಿಕ್ಷಕರ ಸಾಮರ್ಥ್ಯ ಸಂವರ್ಧನ ಶಿಬಿರ:** ರಾಮಮೂರ್ತಿನಗರದ ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಡಿ.20 ಮತ್ತು 21ರಂದು ನಡೆದ ಶೈಕ್ಷಣಿಕ ವರ್ಷದ ಮೂರನೇ ಶಿಕ್ಷಕರ ಸಾಮರ್ಥ್ಯ ಸಂವರ್ಧನ ಶಿಬಿರದಲ್ಲಿ ನಿಲುಮೆ ಸಂಸ್ಥೆಯ ಸ್ಥಾಪಕರಾದ ರಾಕೇಶ್ ಶೆಟ್ಟಿ, ವಿಪ್ರೋ ಸಂಸ್ಥೆಯ ಹಿರಿಯ ಸಲಹೆಗಾರ ಪ್ರಮೋದ್, ಮನಃಶಾಸ್ತ್ರಜ್ಞೆ ಮೀನಾ ಜೈನ್ ಅವರು ಆಗಮಿಸಿ ಮಾರ್ಗದರ್ಶನ ಮಾಡಿದರು. ಶಿಕ್ಷಕರ ಸಾಮರ್ಥ್ಯ ವರ್ಧನೆಗಾಗಿ ಚಿತ್ರದುರ್ಗದ ಜ್ಞಾನಭಾರತಿ ವಿದ್ಯಾಮಂದಿರದಲ್ಲಿ ಸೆಪ್ಟೆಂಬರ್ 12ರಂದು ಶಿಕ್ಷಕರ ರಸಪ್ರಶ್ನೆ ಕಾರ್ಯಕ್ರಮ ನಡೆಯಿತು.

## ಆ) ಪೋಷಕರಿಗಾಗಿ

ಶಾಲೆ ಹಾಗೂ ಶಾಲಾ ಸಂಬಂಧಿತರ ನಡುವೆ ಕೌಟುಂಬಿಕ ಮನೋಭಾವ ಮೂಡಿಸುವ ಸಲುವಾಗಿ ಹಾಗೂ ಮಕ್ಕಳ ವಿಕಾಸಕ್ಕೆ ಶಿಕ್ಷಕರು ಹಾಗೂ ಪೋಷಕರು ಪರಸ್ಪರ ಪೂರಕವಾಗಿ ಕಾರ್ಯನಿರ್ವಹಿಸಬೇಕು ಎಂಬ ಚಿಂತನೆಯಿಂದ ಪರಿಷತ್ ಕಾರ್ಯನಿರ್ವಹಿಸುತ್ತಿದೆ. ಇದಕ್ಕಾಗಿ ಪೋಷಕರೊಂದಿಗೆ ನಿರಂತರ ಸಂಪರ್ಕವಿಟ್ಟುಕೊಳ್ಳುವ ವಿವಿಧ ಚಟುವಟಿಕೆಗಳನ್ನು ರಾಷ್ಟ್ರೋತ್ಥಾನ ಪರಿಷತ್‌ನ ಶೈಕ್ಷಣಿಕ ಚಟುವಟಿಕೆಗಳಲ್ಲಿ ನಿರಂತರವಾಗಿ ನಡೆಸಲಾಗುತ್ತಿದೆ.

**ಪೋಷಕರ ಸಭೆ:** ಶಾಲಾ ಚಟುವಟಿಕೆಗಳು ಹಾಗೂ ಮಕ್ಕಳ ವಿದ್ಯಾಭ್ಯಾಸದ ಗುಣಮಟ್ಟವನ್ನು ಪರಿಚಯಿಸುವ ಸಲುವಾಗಿ ನಿರ್ದಿಷ್ಟ ದಿನಗಳಿಗೊಮ್ಮೆ ಶಾಲಾ ಪೋಷಕರ ಸಭೆಯನ್ನು ನಿರಂತರವಾಗಿ ನಡೆಸಲಾಗುತ್ತಿದೆ.

**ಪೋಷಕರ ಅಭ್ಯಾಸವರ್ಗ:** ಪೋಷಕರ ಜವಾಬ್ದಾರಿಯನ್ನು ಅವರಿಗೆ ಮನನ ಮಾಡುವ ಸಲುವಾಗಿ ನಮ್ಮ ಶಾಲೆಗಳಲ್ಲಿ ಪೋಷಕರ ಅಭ್ಯಾಸ ವರ್ಗಗಳನ್ನು ನಡೆಸಲಾಗುತ್ತಿದೆ. ಆರೆಸ್ಸೆಸ್‌ನ ದಕ್ಷಿಣ ಮಧ್ಯ ಕ್ಷೇತ್ರೀಯ ಕಾರ್ಯಕಾರಿಣಿ ಸದಸ್ಯ ಡಾ. ಕಲ್ಲಡ್ಕ ಪ್ರಭಾಕರ್ ಭಟ್ ಮುಂತಾದವರು ಆಗಮಿಸಿ ಮಾರ್ಗದರ್ಶನ ಮಾಡಿದರು.

**ಮಾತೃಮಂದಿರ/ಮಂಡಳಿ:** ವಿದ್ಯಾಸಂಸ್ಥೆಗಳೊಂದಿಗೆ ಸಂಪರ್ಕದಲ್ಲಿರುವವರು ಹಾಗೂ ಇತರ ಮಹಿಳೆಯರಲ್ಲಿ ಸಾಮಾಜಿಕ ಕಳಕಳಿ ಮೂಡಿಸುವ ಸಲುವಾಗಿ ಕೆಲವು ವಿದ್ಯಾಲಯ/ಕೇಂದ್ರಗಳಲ್ಲಿ ಮಾತೃಮಂದಿರಗಳು ಕಾರ್ಯನಿರ್ವಹಿಸುತ್ತಿವೆ.

ವಿದ್ಯಾಭಾರತಿಯ ಜಗದೀಶ್ (ಕಲ್ಯಾಣನಗರದ ಜೆಜಿಆರ್‌ವಿ), ರಾಷ್ಟ್ರ ಸೇವಿಕಾ ಸಮಿತಿಯ ಅರುಣಕ್ಕ (ಶ್ರೀರಾಮಪುರದ ಶ್ರೀ ಸಾಂದೀಪನ ವಿದ್ಯಾಭವನ), ಕುಟುಂಬ ಪ್ರಭೋದನದ ಪ್ರಮುಖರಾದ ಪ.ರಾ. ನಾಗರಾಜ (ಹಗರಿಬೊಮ್ಮನಹಳ್ಳಿ) ಮುಂತಾದವರು ಮಾರ್ಗದರ್ಶನ ಮಾಡಿದರು.

**ಪೋಷಕರ ರಕ್ತದಾನ ಶಿಬಿರ:** ಪೋಷಕರು ಹಾಗೂ ಸಾರ್ವಜನಿಕರಿಗಾಗಿ ರಕ್ತದಾನ ಶಿಬಿರಗಳನ್ನು ಆಯೋಜಿಸಲಾಯಿತು. ರಕ್ತದಾನಿಗಳಿಗೆ ತುಳಸಿಗಿಡ ಮತ್ತು ಪುಸ್ತಕಗಳನ್ನು ಸ್ಮರಣಿಕೆಯಾಗಿ ನೀಡಲಾಯಿತು.

## ಇ) ಹಳೆ ವಿದ್ಯಾರ್ಥಿಗಳಿಗಾಗಿ

**ಹಳೆ ವಿದ್ಯಾರ್ಥಿಗಳ ಕೂಟ (ರೂಟ್ಸ್):** ರಾಷ್ಟ್ರೋತ್ಥಾನದ ಶಾಲೆಗಳಲ್ಲಿ ಕಲಿತ ವಿದ್ಯಾರ್ಥಿಗಳು ಇಂದು ಸಮಾಜದ ಅನೇಕ ಪ್ರತಿಷ್ಠಿತ ಹುದ್ದೆಗಳಲ್ಲಿ

ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಹಲವು ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅಂತಹ ವಿದ್ಯಾರ್ಥಿಗಳನ್ನು ಒಂದೆಡೆ ಸೇರಿಸುವ ಸಲುವಾಗಿ ಆಯಾ ಶಾಲೆಗಳಲ್ಲಿ ರೂಟ್ಸ್ (Roots–ರಾಷ್ಟ್ರೋತ್ಥಾನ ಓಲ್ಡ್ ಸ್ಟೂಡೆಂಟ್ ಆರ್ಗನೈಸೇಷನ್ ಫಾರ್ ಟ್ರಾನ್ಸ್‌ಫಾರ್ಮಿಂಗ್ ಸೊಸೈಟಿ) ಸಮಾವೇಶಗಳನ್ನು ನಡೆಸಲಾಗುತ್ತಿದೆ. ತನ್ಮೂಲಕ ಹಳೆವಿದ್ಯಾರ್ಥಿಗಳನ್ನು ಶಾಲೆಯ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಲಾಗುತ್ತಿದೆ.

## ಈ) ವಿದ್ಯಾರ್ಥಿಗಳಿಗಾಗಿ

**ಸೃಷ್ಟಿ ವ್ಯಕ್ತಿತ್ವ–ವಿಕಸನ ಶಿಬಿರ:** ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕಾಗಿ ರಾಜ್ಯಪಠ್ಯಕ್ರಮ ಶಾಲೆಗಳ ಆಯ್ದ ವಿದ್ಯಾರ್ಥಿಗಳ ಸೃಷ್ಟಿ ವ್ಯಕ್ತಿತ್ವ ವಿಕಸನ ಶಿಬಿರ ಅ. 10ರಿಂದ 14ರ ವರೆಗೆ ಧಾರವಾಡದ ಮುಮ್ಮಿಗಟ್ಟಿಯ ರಾಷ್ಟ್ರೋತ್ಥಾನ ವಿದ್ಯಾಲಯದಲ್ಲಿ ನಡೆಯಿತು. ಬಾಲಕರ ಹಾಗೂ ಬಾಲಕಿಯರನ್ನು ಪ್ರತ್ಯೇಕವಾಗಿ ಒಟ್ಟು 6 ಗುಂಪುಗಳಾಗಿ ವಿಂಗಡಿಸಲಾಯಿತು. ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ, ಆಡಳಿತ ಮಂಡಳಿ ಸದಸ್ಯ ರವಿಕುಮಾರ್, ರಾಜ್ಯ ಪಠ್ಯಕ್ರಮ ಕ್ರಿಯಾ ಸಮಿತಿಯ ಬಸವರಾಜ್, ಶ್ರೀಧರಮೂರ್ತಿ ಮುಂತಾದವರು ಆಗಮಿಸಿ ಆರೆಸ್ಸೆಸ್‌ನ ಪರಿಚಯ, ದೇಶಕ್ಕಾಗಿ ಬದುಕಿದ ಮಹಾಪುರುಷರ ಜೀವನ ಪರಿಚಯ, ದೇಶ ಮತ್ತು ರಾಷ್ಟ್ರಕ್ಕಿರುವ ವ್ಯತ್ಯಾಸದ ಕುರಿತು ಭಾಷಣ ಸ್ಪರ್ಧೆ ಮುಂತಾದ ಚಟುವಟಿಕೆಗಳನ್ನು ನಡೆಸಿಕೊಟ್ಟರು.

**ಅನ್ವೇಷಣ ಕಾರ್ಯಾಗಾರ:** ಮಕ್ಕಳಲ್ಲಿ ಸರ್ಜನಶೀಲತೆಯನ್ನು ಬೆಳೆಸುವ ಸಲುವಾಗಿ ಆಗಸ್ಟ್ 3 ಮತ್ತು 4ರಂದು ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಭವಿಷ್ಯ ಭಾರತದ ತಂತ್ರಜ್ಞಾನ ಮತ್ತು ವಿಜ್ಞಾನ ಎಂಬ ವಿಷಯದ ಕುರಿತ 2 ದಿನಗಳ ಅನ್ವೇಷಣ ಕಾರ್ಯಾಗಾರ ನಡೆಯಿತು.

ಗುಂಪುಗಳನ್ನಾಗಿ ವಿಂಗಡಿಸಿ ಸಾಮಾಜಿಕ ಬದಲಾವಣೆ ತರುವಂತಹ ಸಂಶೋಧನೆಗೆ ಒಳಪಡುವ ಮಾದರಿಗಳನ್ನು ಸಿದ್ಧಗೊಳಿಸುವಂತೆ ಸೂಚಿಸಲಾಯಿತು. ವಿದ್ಯಾರ್ಥಿಗಳು ತಾವು ತಯಾರಿಸಿದ ಮಾದರಿಗಳನ್ನು ಸಾಮಾಜಿಕವಾಗಿ ಉಪಯುಕ್ತವಾಗುವ ಅನಿವಾರ್ಯ ಪ್ರಸಂಗಗಳಲ್ಲಿ ಬಳಕೆಯಾಗುವ ಸನ್ನಿವೇಶಗಳನ್ನು ಪರಿಚಯಿಸಿದರು. ಬೆಳಗಾವಿಯ ರಾಣಿಚೆನ್ನಮ್ಮ ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಬಾಲಚಂದ್ರ ಹೆಗ್ಡೆ, ಕೃಷಿವಿಜ್ಞಾನಿ ದೇವರಾಜ್, ಕೆ.ಎಲ್.ಇ ತಾಂತ್ರಿಕ ವಿದ್ಯಾಲಯದ ಸಂಶೋಧನ ವಿಭಾಗದ ಮುಖ್ಯಸ್ಥರಾದ ಡಾ. ನಿತಿನ್ ಕುಲಕರ್ಣಿ ಮುಂತಾದವರು ಆಗಮಿಸಿ ಮಾರ್ಗದರ್ಶನ ಮಾಡಿದರು.



**ಸ್ವದೇಶೀ & ಸಂಸ್ಕೃತ ಸಪ್ತಾಹ:** ವಿದ್ಯಾರ್ಥಿಗಳಲ್ಲಿ ಸ್ವದೇಶೀ ಚಿಂತನೆ ಹಾಗೂ ಸಂಸ್ಕೃತದ ಕುರಿತು ಅರಿವು ಮೂಡಿಸುವ ಸಲುವಾಗಿ ಹಲವು ಶಾಲೆಗಳಲ್ಲಿ ಪ್ರತ್ಯೇಕವಾಗಿ ಸ್ವದೇಶಿ ಮತ್ತು ಸಂಸ್ಕೃತ ಸಪ್ತಾಹವನ್ನು ಆಯೋಜಿಸಲಾಯಿತು. ವಿದ್ಯಾರ್ಥಿಗಳು ನಾಟಕ, ವಸ್ತುಪ್ರದರ್ಶನ ಮುಂತಾದವುಗಳ ಮೂಲಕ ದೇಶೀಯ ವಸ್ತುಗಳ ಬಳಕೆ ಹಾಗೂ ಅವುಗಳ ಉಪಯುಕ್ತತೆಯನ್ನು ತಿಳಿಸಿಕೊಟ್ಟರು.

**ಶಿಶುಶಿಬಿರ:** ಮಕ್ಕಳ ಮನೋವಿಕಾಸಕ್ಕಾಗಿ ಹಗರಿಬೊಮ್ಮನಹಳ್ಳಿಯ ಶಾರದಾ ಶಿಶುಮಂದಿರದಲ್ಲಿ ಸೆ. 21 ರಂದು ವಸತಿ ಸಹಿತ ಶಿಶುಶಿಬಿರ ನಡೆಯಿತು. ಕಥೆ, ಪೇಪರ್ ಕಟ್ಟಿಂಗ್ಸ್, ಮಣ್ಣಿನಿಂದ ಆಕೃತಿ ರಚನೆ, ಧ್ಯಾನ, ಭಜನೆ, ಆಟ ಮುಂತಾದ ಚಟುವಟಿಕೆಗಳನ್ನು ನಡೆಸಲಾಯಿತು. ಸುಮಾರು 76 ಮಕ್ಕಳು ಭಾಗವಹಿಸಿದರು.

**ಸುಮೇಧಾ ಶಿಬಿರ:** ವಿದ್ಯಾರ್ಥಿಗಳ ಸಾಮರ್ಥ್ಯವೃದ್ಧಿಗಾಗಿ ಹಗರಿಬೊಮ್ಮನಹಳ್ಳಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಅಕ್ಟೋಬರ್ 5 ಮತ್ತು 6ರಂದು ಎರಡು ದಿನಗಳ ಕಾಲ ಆಯ್ದ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ಸುಮೇಧಾ ಶಿಬಿರ ನಡೆಯಿತು.

ಮಾಹಿತಿ ಕಲೆಹಾಕುವ ಕೌಶಲ ಬೆಳೆಸಲು ಹಳ್ಳಿಜನರ ಜೀವನಸ್ಥಿತಿಗಳ ಕುರಿತು ಗ್ರಾಮಸರ್ವೆ ಮಾಡಿಸಲಾಯಿತು. ಹಳ್ಳಿಯ ಒಟ್ಟು 135 ಮನೆಗಳಲ್ಲಿ 105 ಮನೆಗಳಿಗೆ ವಿದ್ಯಾರ್ಥಿಗಳು ಭೇಟಿ ನೀಡಿ ಸರ್ವೆ ನಡೆಸಿದರು. ತಹಶೀಲ್ದಾರರಾದ ಆಶಪ್ಪ ಪೂಜಾರ್ ಅವರು ಶಿಬಿರವನ್ನು ಉದ್ಘಾಟಿಸಿ, ತಹಶೀಲ್ದಾರರ, ದಂಡಾಧಿಕಾರಿಗಳ

ಕಾರ್ಯಚಟುವಟಿಕೆಗಳ ಬಗ್ಗೆ ತಿಳಿಸಿದರು. ಸ್ಥಳೀಯ ವಕೀಲರಾದ ವಿಜಯ್ ಇಟ್ಟಿಗಿ ಆಗಮಿಸಿದರು.

**ಅನುಭವಧಾರೆ (ಅಜ್ಜ–ಅಜ್ಜಿಯಂದಿರ ದಿನ):** ವಿದ್ಯಾರ್ಥಿಗಳಲ್ಲಿ ಸಂಸ್ಕಾರ ಮೂಡಿಸುವ ಹಾಗೂ ಅವಿಭಕ್ತ ಕುಟುಂಬದ ಮಹತ್ತ್ವವನ್ನು ತಿಳಿಸಿಕೊಡುವ ಸಲುವಾಗಿ ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಅನುಭವಧಾರೆ (ಅಜ್ಜ–ಅಜ್ಜಿಯಂದಿರ ದಿನ) ಕಾರ್ಯಕ್ರಮ ನಡೆಯಿತು.

ಅಜ್ಜಅಜ್ಜಿ, ತಂದೆತಾಯಿ, ಮೊಮ್ಮಕ್ಕಳು – ಹೀಗೆ ಮೂರು ತಲೆಮಾರುಗಳನ್ನು ಒಂದೆಡೆ ಸೇರಿಸುವ ಪ್ರಯತ್ನ ಈ ಕಾರ್ಯಕ್ರಮದಲ್ಲಿ ನಡೆಯಿತು. ಆವರಗೊಳ್ಳ ಪುರವರ್ಗ ಮಠದ ಓಂಕಾರ ಶಿವಾಚಾರ್ಯ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯವನ್ನು ವಹಿಸಿ ಆಶೀರ್ವಚನ ನೀಡಿದರು.

**ಕೃಷಿ ಸಂಸ್ಕೃತಿ ಕಲಿಸಿದ ಸಾವಯವ ಕೃಷಿ ಶಿಬಿರ:** ವಿದ್ಯಾರ್ಥಿಗಳಲ್ಲಿ ಸಾವಯವ ಕೃಷಿಯ ಅರಿವು ಮೂಡಿಸುವ ಹಾಗೂ ಸಾಮಾಜಿಕ ಜಾಗೃತಿಗಾಗಿ ಕಲ್ಯಾಣನಗರದ ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಲಯದಲ್ಲಿ ಡಿಸೆಂಬರ್ 24ರಿಂದ 28ರ ತನಕ 9ನೇ ತರಗತಿಯ ವಿದ್ಯಾರ್ಥಿಗಳಿಗೆ ಸಾವಯವ ಕೃಷಿ ಶಿಬಿರವನ್ನು ಆಯೋಜಿಸಲಾಯಿತು. ಬಾಲಕರು ಹಾಗೂ ಬಾಲಕಿಯರಿಗೆ ಪ್ರತ್ಯೇಕವಾಗಿ 5 ದಿನಗಳ ಕಾಲ ನಡೆದ ಸಾವಯವ ಶಿಬಿರದಲ್ಲಿ 26 ಬಾಲಕಿಯರು ಹಾಗೂ 21 ಬಾಲಕರು ಭಾಗವಹಿಸಿದರು.

ತಮಿಳುನಾಡಿನ ಕಾವೇರಿಪಟ್ಟಣಂನಲ್ಲಿ ನಡೆದ ಬಾಲಕ ಶಿಬಿರದಲ್ಲಿ ತೋಟಗಾರಿಕಾ ಅಧಿಕಾರಿ ಸುಗದೇವನ್, ಕಾವೇರಿಪಟ್ಟಣಂನ ಕೇಂಬ್ರಿಡ್ಜ್ ಇ–ಶಾಲೆಯ





ಸಂಸ್ಥಾಪಕರಾದ ಸನತ್ ಕುಮಾರ್ ಹಾಗೂ ಇ–ಶಾಲೆಯಲ್ಲಿ ಭೌತಶಾಸ್ತ್ರ ಮತ್ತು ಕೃಷಿ ಉಪನ್ಯಾಸಕರಾದ ಮೋಹನ್ ಅವರು ಕಸಿಮಾಡುವುದು, ವಿವಿಧ ಕೃಷಿ ವಿಧಾನಗಳು, ನೀರಾವರಿ ಕ್ರಮಗಳನ್ನು ತಿಳಿಸಿಕೊಟ್ಟರು. ಸಾವಯವ ತೋಟ–ಹೊಲಗಳಿಗೆ ಭೇಟಿ ನೀಡಿ ಸಾವಯವ ಕಳೆನಿವಾರಕವನ್ನು ವಿದ್ಯಾರ್ಥಿಗಳೇ ತಯಾರಿಸಿದರು. ಸಾವಯವ ಕೃಷಿಕ ಪ್ರಕಾಶ್, ಕೃಷಿ ಪಂಡಿತರಾದ ಶ್ರೀನಿವಾಸನ್ ಮುಂತಾದವರು ಆಗಮಿಸಿ ಮಾರ್ಗದರ್ಶನ ಮಾಡಿದರು.

ಮಂಡ್ಯ ಜಿಲ್ಲೆಯ ಸುತ್ತಮುತ್ತಲಿನ ಹಳ್ಳಿಗಳಲ್ಲಿ ನಡೆದ ಬಾಲಕಿಯರ ಶಿಬಿರದಲ್ಲಿ ಕೈಮಗ್ಗದಲ್ಲಿ ಸೀರೆ ನೇಯುವುದು, ವಿಭೂತಿ ತಯಾರಿಸುವುದು, ಆಲೆಮನೆಯಲ್ಲಿ ಬೆಲ್ಲ ತಯಾರಿಕೆ, ಗೋಉತ್ಪನ್ನಗಳ ತಯಾರಿಕಾ ಕೇಂದ್ರ ಹಾಗೂ ಕೃಷಿ ಸಂಶೋಧನಾ ಕೇಂದ್ರಕ್ಕೆ ಭೇಟಿ ನೀಡಿ ತಯಾರಿಕೆಯ ವಿಧಾನವನ್ನು ತಿಳಿದುಕೊಂಡರು.

**ಮನೆ–ಮನೆ ಭೇಟಿ:** ಶಾಲೆ ಹಾಗೂ ಪೋಷಕರ ನಡುವೆ ಸಂಬಂಧ ಕಲ್ಪಿಸುವ ಸಲುವಾಗಿ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಶಿಕ್ಷಕರು ಡಿಸೆಂಬರ್ 20 ಮತ್ತು 21ರಂದು ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ನೀಡಿದರು.

ಬಾಲವರ್ಗದಿಂದ 10ನೇ ತರಗತಿವರೆಗಿನ ಒಟ್ಟು 590 ವಿದ್ಯಾರ್ಥಿಗಳ ಮನೆಗಳಿಗೆ ಶಿಕ್ಷಕರ ತಂಡ ಭೇಟಿ ನೀಡಿತು. ಮಕ್ಕಳ ಹಾಗೂ ಶಾಲೆಯ

ಚಟುವಟಿಕೆಗಳ ಕುರಿತು ಪೋಷಕರೊಂದಿಗೆ ಮುಕ್ತ ಮಾತುಕತೆ ನಡೆಸಿದರು. AURA ಎಂಬ ಶೀರ್ಷಿಕೆಯಲ್ಲಿ ಪ್ಲಾಸ್ಟಿಕ್ ನಿಷೇಧದ ಕುರಿತು ಅಭಿಯಾನ ನಡೆಸಿ ಪ್ಲಾಸ್ಟಿಕ್ ಬಳಕೆಯಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳ ಮನೆಗಳಲ್ಲಿ ಜಾಗೃತಿ ಮೂಡಿಸಲಾಯಿತು. 5ನೇ ತರಗತಿಯ ಉತ್ಕರ್ಷ ಎಂಬ ವಿದ್ಯಾರ್ಥಿಯ ಪೋಷಕರು ಹುಟ್ಟುಹಬ್ಬದ ಸಂದರ್ಭದಲ್ಲಿ ಪ್ಲಾಸ್ಟಿಕ್ ನಿಷೇಧದ ಬಗ್ಗೆ ತಮ್ಮ ಕುಟುಂಬದ ಸದಸ್ಯರಿಗೆ ಹಾಗೂ ಅಕ್ಕಪಕ್ಕದ ಮನೆಯವರಿಗೆ ಜಾಗೃತಿ ಮೂಡಿಸಿದರು. ಶಾಲೆಯ ಚಟುವಟಿಕೆಗಳ ಬಗ್ಗೆ ಪೋಷಕರು ಶ್ಲಾಘಿಸಿದರು.

**ಕೈ–ತುತ್ತು ಕಾರ್ಯಕ್ರಮ:** ಸಾಮಾಜಿಕ ಸಾಮರಸ್ಯಕ್ಕಾಗಿ ಹಗರಿಬೊಮ್ಮನಹಳ್ಳಿಯ ಶಾರದಾ ಶಿಶುಮಂದಿರದಲ್ಲಿ ಕೈ–ತುತ್ತು ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ 122 ಮಾತೆಯರು ಹಾಜರಿದ್ದು ಮಕ್ಕಳಿಗೆ ಕೈತುತ್ತು ನೀಡಿ ಹರಸಿದರು.

**ಸೈನಿಕನಿಧಿ:** ವಿದ್ಯಾರ್ಥಿಗಳಲ್ಲಿ ಸೇವಾಮನೋಭಾವ ಹಾಗೂ ಸೇನೆಯ ಬಗೆಗೆ ಗೌರವ–ಅಭಿಮಾನ ಮೂಡಿಸುವ ಸಲುವಾಗಿ ಧಾರವಾಡದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ 'ಸೈನಿಕನಿಧಿ' ಎಂಬ ಯೋಜನೆ ಪ್ರಾರಂಭಿಸಲಾಗಿದೆ. ವಿದ್ಯಾರ್ಥಿಗಳು ಹುಟ್ಟುಹಬ್ಬ ಮುಂತಾದ ತಮ್ಮ ಜೀವನದ ವಿಶೇಷ ದಿನಗಳ ಸಂಭ್ರಮವನ್ನು ಈ ನಿಧಿಗೆ ಧನಸಹಾಯ ಮಾಡುವ ಮೂಲಕ ಆಚರಿಸಿಕೊಳ್ಳುತ್ತಾರೆ. ಹೀಗೆ ಸಂಗ್ರಹವಾದ ಹಣವನ್ನು ಪ್ರತೀ ವರ್ಷ ಹುತಾತ್ಮ ಯೋಧರ ಕುಟುಂಬಕ್ಕೆ ನೀಡುವ ಚಿಕ್ಕ ಪ್ರಯತ್ನವೇ ಸೈನಿಕ ನಿಧಿ. ಈ ವರ್ಷ ಗದಗ ಜಿಲ್ಲೆಯ ರೋಣ ತಾಲೂಕಿನ ಕರಮಡಿಯ ಹುತಾತ್ಮ ಯೋಧ ಸುಬೇದಾರ ವೀರೇಶ ಕುರಹಟ್ಟಿ ಅವರ ಸ್ಮರಣಾರ್ಥ ಅವರ ಧರ್ಮಪತ್ನಿ ಲಲಿತಾ ವೀರೇಶ್ ಕುರಹಟ್ಟಿ ಅವರಿಗೆ ನಿಧಿ ಸಮರ್ಪಿಸಿ ಗೌರವ ಸಲ್ಲಿಸಲಾಯಿತು.



## ರಾಷ್ಟ್ರೋತ್ಥಾನ ಶೈಕ್ಷಣಿಕ ಸಂಸ್ಥೆಗಳು ನಡೆಸಿದ ಸಮಾನ ಕಾರ್ಯಕ್ರಮಗಳು

ಮಕ್ಕಳ ಸರ್ವತೋಮುಖ ವಿಕಾಸಕ್ಕೆ ಪೂರಕ ಶಿಕ್ಷಣ ನೀಡುವ ಧ್ಯೇಯದೊಂದಿಗೆ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೋತ್ಥಾನ ಪರಿಷತ್‌ನ ಶಿಕ್ಷಣ ಸಂಸ್ಥೆಗಳಲ್ಲಿ ನಡೆಸಿದ ಸಮಾನ ಕಾರ್ಯಕ್ರಮಗಳು ಇಂತಿವೆ.

### ಅಕ್ಷರಾಭ್ಯಾಸ ಹಾಗೂ ವಿದ್ಯಾರಂಭ

ನೂತನ ಶೈಕ್ಷಣಿಕ ವರ್ಷಾರಂಭದ ಸಂದರ್ಭದಲ್ಲಿ ಪರಿಷತ್‌ನ ಎಲ್ಲ ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಸಲುವಾಗಿ ವಿದ್ಯಾರಂಭ ಕಾರ್ಯಕ್ರಮವನ್ನು ಹಾಗೂ ಹೊಸದಾಗಿ ಸೇರ್ಪಡೆಗೊಂಡ ಚಿಣ್ಣರಿಗೆ ಅಕ್ಷರಾಭ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಶಿಕ್ಷಕರು ವಿದ್ಯಾರ್ಥಿಗಳ ಹಣೆಗೆ ತಿಲಕವಿಟ್ಟು ಆರತಿ ಮಾಡಿ ಶಾಲೆಗೆ ಸ್ವಾಗತಿಸಿದರು.

ಹುಬ್ಬಳ್ಳಿಯ ರಾಮಕೃಷ್ಣ ವಿವೇಕಾನಂದ ಆಶ್ರಮದ ಪೂಜ್ಯ ಶ್ರೀರಘುವೀರಾನಂದ ಸ್ವಾಮೀಜಿ (ಧಾರವಾಡ), ಮೇಲುಕೋಟೆಯ ಯದುಗಿರಿ ಯತಿರಾಜ ಮಠದ ಪೀಠಾಧ್ಯಕ್ಷರಾದ ನಾರಾಯಣ ರಾಮಾನುಜ ಸ್ವಾಮೀಜಿ (ಥಣಿಸಂದ್ರ), ಹರಿಹರದ ಪಂಚಮಸಾಲಿ ಪೀಠದ ಜಗದ್ಗುರು ವಚನಾನಂದ ಮಹಾಸ್ವಾಮಿ (ದಾವಣಗೆರೆ), ತುಮಕೂರಿನ ಶ್ರೀರಾಮಕೃಷ್ಣ ವಿವೇಕಾನಂದ ಆಶ್ರಮದ ವೀರೇಶಾನಂದ ಸರಸ್ವತಿ (ರಾಮಮೂರ್ತಿನಗರ), ದಾವಣಗೆರೆಯ ಶಿವಯೋಗಿ ಮಠದ ಶ್ರೀ ಜಡೆಸಿದ್ದೇಶ್ವರ ಸ್ವಾಮಿಗಳು (ದಾವಣಗೆರೆ ವಿದ್ಯಾಲಯ), ಧಾರವಾಡದ ಮನಗುಂಡಿ ಗ್ರಾಮದ ಶ್ರೀ ಮ.ನಿ.ಪ್ರ. ಬಸವಾನಂದ ಸ್ವಾಮೀಜಿ (ಧಾರವಾಡ ವಿದ್ಯಾಲಯ) ಬಿಜಾಪುರದ ರಾಮಕೃಷ್ಣ–ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿರ್ಭಯಾನಂದ ಸರಸ್ವತಿ (ಬನಶಂಕರಿ), ಹಾವೇರಿಯ ಅಕ್ಕಿಮಠದ ಶ್ರೀಗುರುಲಿಂಗ ಸ್ವಾಮೀಜಿ (ಚಿತ್ರದುರ್ಗ), ಬಳ್ಳಾರಿಯ ಕೊಟ್ಟೂರಿನ ಶ್ರೀ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು (ಹಗರಿಬೊಮ್ಮನಹಳ್ಳಿ), ಧಾರವಾಡದ ಪೂಜ್ಯ ಯೋಗೀಶ್ವರ ಸ್ವಾಮೀಜಿ ಮುಂತಾದವರು ದಿವ್ಯ ಸಾನ್ನಿಧ್ಯ ವಹಿಸಿ ಅಕ್ಷರಾಭ್ಯಾಸ ನಡೆಸಿಕೊಟ್ಟರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಮಧ್ಯ ಕ್ಷೇತ್ರದ ಕಾರ್ಯಕಾರಿಣಿ ಸದಸ್ಯ ಡಾ. ಕಲ್ಲಡ್ಕ ಪ್ರಭಾಕರ ಭಟ್ (ಧಾರವಾಡ), ಆರೆಸ್ಸೆಸ್‌ನ ಹಿರಿಯ ಪ್ರಚಾರಕರಾದ ಚಂದ್ರಶೇಖರ ಭಂಡಾರಿ (ಕಲ್ಯಾಣನಗರ), ಆರೆಸ್ಸೆಸ್‌ನ ದಾವಣಗೆರೆ



ಜಿಲ್ಲಾ ಸಂಘಚಾಲಕರಾದ ಉಮಾಪತಿ (ದಾವಣಗೆರೆ), ವೇದಾಂತಭಾರತೀ ಸಂಶೋಧನ ಸಂಸ್ಥೆಯ ಲಕ್ಷ್ಮೀ ಹಾಗೂ ದೀಪಶ್ರೀ (ಉಲ್ಲಾಳ ಉಪನಗರ), ಕ್ಯಾನ್ಸರ್ ಸೊಸೈಟಿಯ ಉಪಾಧ್ಯಕ್ಷೆ ಡಾ. ವಿಜಯಲಕ್ಷ್ಮಿ ದೇಶಮಾನೆ (ಥಣಿಸಂದ್ರ ಪ. ಪೂ. ಕಾಲೇಜು) ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದರು.

**ಶಾಲಾ ಮಂತ್ರಿಮಂಡಲ:** ದೇಶದ ನೀತಿ–ನಿರ್ಧಾರಗಳನ್ನು ನಿರ್ಧರಿಸುವ ಮಹತ್ತ್ವದ ರಾಜಕೀಯ ವ್ಯವಸ್ಥೆಯ ಬಗೆಗೆ, ಚುನಾವಣೆ, ಸೂಕ್ತ ಅಭ್ಯರ್ಥಿಗಳ ಆಯ್ಕೆ, ಚುನಾಯಿತ ಮಂತ್ರಿಮಂಡಲದ ಕಾರ್ಯಚಟುವಟಿಕೆಗಳ ಬಗೆಗೆ ಹಾಗೂ ದೇಶದ ಪ್ರಜಾಪ್ರಭುತ್ವದ ಬಗೆಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಸಲುವಾಗಿ ಶಾಲಾ ಮಂತ್ರಿಮಂಡಲ ರಚನೆ ಮಾಡಲಾಗುತ್ತಿದೆ.

ಮತದಾನದ ಮೂಲಕ ಶಾಲಾ ಸಂಸತ್ತಿನ ಪ್ರತಿನಿಧಿಗಳ ಆಯ್ಕೆ ನಡೆಯುತ್ತದೆ. ಪ್ರತಿಜ್ಞಾವಿಧಿ ಹಾಗೂ ನಿರಂತರ ಸಂಸತ್ ಅಧಿವೇಶನ (ಶಾಲಾ ಮಂತ್ರಿಮಂಡಲದ ಅಧಿವೇಶನ)ಗಳನ್ನು ನಡೆಸಲಾಗುತ್ತಿದೆ.



ನಿವೃತ್ತ ಸೈನಿಕರಾದ ಕರ್ನಲ್ ಟಿ.ಎಸ್. ಗುರುರಾಜ್ (ಬನಶಂಕರಿ), ಚಾರ್ಟೆಡ್ ಅಕೌಂಟೆಂಟ್ ಬಾಲಕೃಷ್ಣನ್ (ಕಲ್ಯಾಣನಗರದ ಜೆಜಿಆರ್‌ವಿ), ನಿವೃತ್ತ ಪೊಲೀಸ್ ಅಧೀಕ್ಷಕರಾದ ಎಂ. ನಾಗರಾಜ್ (ರಾಮಮೂರ್ತಿನಗರ), ಆರೆಸ್ಸೆಸ್ ಧಾರವಾಡ ವಿಭಾಗದ ಶಾರೀರಿಕ ಪ್ರಮುಖರಾದ ವೆಂಕಟೇಶ ಕರೇಕಲ್ (ಧಾರವಾಡ), ದಾವಣಗೆರೆ ಮಹಾನಗರ ಪಾಲಿಕೆಯ ಮುಖ್ಯ ಲೇಖಾಧಿಕಾರಿ ಪ್ರಶಾಂತ್ ನಾಯಕ್ ಮತ್ತು ದಾವಣಗೆರೆ ವಿಶ್ವವಿದ್ಯಾಲಯದ ಫಿಜಿಕಲ್ ಡೈರೆಕ್ಟರ್ ಶಿವಶಂಕರ್ (ದಾವಣಗೆರೆ) ಮುಂತಾದವರು ಆಗಮಿಸಿ ಪ್ರತಿಜ್ಞಾ ವಿಧಿ ಬೋಧಿಸಿದರು.

**‘ಸೃಜನ’ ವಸ್ತುಪ್ರದರ್ಶನ:** ವಿದ್ಯಾರ್ಥಿಗಳ ಪ್ರತಿಭೆಗೆ ವೇದಿಕೆ ಕಲ್ಪಿಸಲು ಪರಿಷತ್ತಿನ ಎಲ್ಲ ಶಾಲೆಗಳಲ್ಲಿ ವಿವಿಧ ವಿಷಯಗಳ ಆಧಾರದ ಮೇಲೆ ವಸ್ತುಪ್ರದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಧಾರವಾಡದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆದ ‘ಸೃಜನ’ – ವಿಜ್ಞಾನ ಮತ್ತು ಕಲಾ ವಸ್ತುಪ್ರದರ್ಶನ ಕಾರ್ಯಕ್ರಮದಲ್ಲಿ ಕಲಾ ಮತ್ತು ವಿಜ್ಞಾನ ವಸ್ತು ಪ್ರದರ್ಶನ, ಕಥೆ ಬರೆಯುವ ಸ್ಪರ್ಧೆ, ಬೆಸ್ಟ್ ಔಟ್ ಆಫ್ ವೇಸ್ಟ್, ಚರ್ಚಾ ಸ್ಪರ್ಧೆ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು. ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿಯ ನಿರ್ದೇಶಕರಾದ ಪ್ರೊ. ಎಸ್. ಎಮ್. ಶಿವಪ್ರಸಾದ ಅವರು ಉದ್ಘಾಟಿಸಿದರು. ಜಲಸಂರಕ್ಷಣೆ ಮತ್ತು ಕೃಷಿಯಲ್ಲಿ ಸಾಧನೆಗೈದ ಕೃಷಿ ವಿಜ್ಞಾನಿ ಎಂ.ಎಸ್. ಶಿರಹಟ್ಟಿ ಅವರನ್ನು ಸಾಧಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

**ವಾರ್ಷಿಕ ಕ್ರೀಡೋತ್ಸವ:** ಮಕ್ಕಳ ಕ್ರೀಡಾ ಸಾಮರ್ಥ್ಯವನ್ನು ಹೊರತರುವ ಸಲುವಾಗಿ ರಾಷ್ಟ್ರೋತ್ಥಾನದ ಎಲ್ಲ ಶಾಲೆಗಳಲ್ಲಿ ಕ್ರೀಡೋತ್ಸವ ಕಾರ್ಯಕ್ರಮ ನಡೆಯಿತು. ವಿದ್ಯಾರ್ಥಿಗಳಿಗಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಯಿತು. ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರಮಟ್ಟದ ಕ್ರೀಡಾಕೂಟಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸಂಮಾನಿಸಲಾಯಿತು.





## ಶಾಲಾ ವಾರ್ಷಿಕೋತ್ಸವ

ವಿದ್ಯಾರ್ಥಿಗಳ ಮನೋವಿಕಾಸ ಹಾಗೂ ಅವರ ಪ್ರತಿಭೆಗಳಿಗೆ ವೇದಿಕೆ ನಿರ್ಮಿಸುವ ಸಲುವಾಗಿ ರಾಷ್ಟ್ರೋತ್ಥಾನ ಪರಿಷತ್‌ನ ಎಲ್ಲ ವಿದ್ಯಾಕೇಂದ್ರ/ವಿದ್ಯಾಲಯಗಳಲ್ಲಿ ಡಿಸೆಂಬರ್–ಜನವರಿ ತಿಂಗಳಲ್ಲಿ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಪ್ರತೀ ವರ್ಷ ಒಂದೊಂದು ವಿಶೇಷ ವಿಷಯವನ್ನು ಆಧರಿಸಿ ವಾರ್ಷಿಕೋತ್ಸವ ನಡೆಸಲಾಗುತ್ತಿದೆ.

- ನರ್ಸರಿ, ಪ್ರಾಥಮಿಕ, ಹಿರಿಯ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ವಿವಿಧ ಶೀರ್ಷಿಕೆಗಳಲ್ಲಿ ವಾರ್ಷಿಕೋತ್ಸವ (ರಾಷ್ಟ್ರೋತ್ಸವ) ನಡೆಯಿತು. ವಿದ್ಯಾರ್ಥಿಗಳು ಆಯಾ ಶೀರ್ಷಿಕೆಗೆ ಸಂಬಂಧಿಸಿದ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು.
- ಕಳೆದ ಶೈಕ್ಷಣಿಕ ಸಾಲಿನಲ್ಲಿ ಉನ್ನತ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಗಳನ್ನು ನೀಡಿ ಗೌರವಿಸಲಾಯಿತು.
- ಐಎಎಸ್ ಅಧಿಕಾರಿ ಶಾಲಿನಿ ರಜನೀಶ್, ರೇವಾ ವಿಶ್ವವಿದ್ಯಾಲಯದ ಉಪಕುಲಪತಿ ಯಶವಂತ ಕುಲಕರ್ಣಿ ಮತ್ತು ನೀಲಕುದುರು ಇನ್ಫೋ ಸಂಸ್ಥೆಯ ನಿರ್ದೇಶಕ ನೀಲಕುದುರು ವಂದಿತ್ (ಥಣಿಸಂದ್ರ), ದಾವಣಗೆರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಮತ್ತು ದೇವರಳ್ಳಿಯ ಜವಾಹರ ನವೋದಯ ವಿದ್ಯಾಲಯದ ಪ್ರಾಂಶುಪಾಲರಾದ ಸ್ವಾತಿ ರಾಮಲಿಂಗಮ್, ದಾವಣಗೆರೆ ದಕ್ಷಿಣ ವಲಯ ಶಿಕ್ಷಣಾಧಿಕಾರಿ ಬಿ.ಸಿ. ಸಿದ್ದಪ್ಪ ಮತ್ತು ಬಳ್ಳಾರಿ ಮಹಾನಗರ ಪಾಲಿಕೆಯ ಆಯುಕ್ತರಾದ ಮಂಜುನಾಥ್ ಆರ್. (ದಾವಣಗೆರೆ), ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೇಸ್‌ಸೈನ್ಸ್ ಅಂಡ್ ಟೆಕ್ನಾಲಜಿಯ ಕುಲಪತಿಗಳಾದ ಪದ್ಮಭೂಷಣ ಬಿ.ಎನ್. ಸುರೇಶ್ (ಬನಶಂಕರಿ), ಆರೆಸ್ಸೆಸ್‌ನ ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯವಾಹ ಡಾ. ಜಯಪ್ರಕಾಶ್ ಮತ್ತು ಆಗ್ವೇರ್ ಡಿಜಿಟಲ್ ಸೊಲ್ಯೂಷನ್ಸ್ ಪ್ರೈ.ಲಿ.ನ ನಿರ್ದೇಶಕರಾದ ಶಿವಪ್ರಸಾದ್ ಜಿ. (ಕಲ್ಯಾಣನಗರ ಜೆಜಿಆರ್‌ವಿ), ಅಂತಾರಾಷ್ಟ್ರೀಯ ಪವರ್ ಲಿಫ್ಟರ್ ಎನ್.ಡಿ. ಕುಮಾರ್ (ಚಿತ್ರದುರ್ಗ), ಸಂಸ್ಕಾರ ಭಾರತಿಯ ಪ.ರಾ. ಕೃಷ್ಣಮೂರ್ತಿ (ಹಗರಿಬೊಮ್ಮನಹಳ್ಳಿ), ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿಯ ನಿರ್ದೇಶಕರಾದ ಪ್ರೊ. ಎಸ್.ಎಮ್. ಶಿವಪ್ರಸಾದ (ಧಾರವಾಡ) ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿದರು.
- ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಹೊಯ್ಸಳ ಶೌರ್ಯ ಪ್ರಶಸ್ತಿ ಪಡೆದ ಹೆಚ್.ಕೆ. ಅಂಬಿಕಾ ಮತ್ತು ಹೆಚ್.ಕೆ. ದೀಕ್ಷಿತಾ ಅವರನ್ನು ಸಂಮಾನಿಸಲಾಯಿತು.

## ವ್ಯಕ್ತಿತ್ವ ವಿಕಸನ ಶಿಬಿರ/ಬೇಸಿಗೆ ಶಿಬಿರ

ಮಕ್ಕಳನ್ನು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿ ಅವರ ಬೌದ್ಧಿಕ, ಮಾನಸಿಕ ಕ್ಷಮತೆಯನ್ನು ಹೆಚ್ಚಿಸುವ ಉದ್ದೇಶದಿಂದ ರಾಷ್ಟ್ರೋತ್ಥಾನದ ವಿದ್ಯಾಸಂಸ್ಥೆಗಳಲ್ಲಿ ಬೇಸಿಗೆ ಶಿಬಿರ / ವ್ಯಕಿತ್ವ ವಿಕಸನ ಶಿಬಿರಗಳನ್ನು (ಚಿಗುರು ಇತ್ಯಾದಿ) ನಡೆಸಲಾಗುತ್ತಿದೆ.

ಶಿಬಿರದಲ್ಲಿ ಮಕ್ಕಳಿಗೆ ಹಾಡು, ಕಥೆ, ಶ್ಲೋಕ, ಯೋಗ, ಸಂಸ್ಕೃತ ಸಂಭಾಷಣೆಯ ಮಾರ್ಗದರ್ಶನ ಹಾಗೂ ಅನುಶಾಸನ, ಸಮಯ ಪಾಲನೆ, ಶಿಸ್ತುಗಳ ಕುರಿತು ಜಾಗೃತಿ ಮೂಡಿಸಲಾಯಿತು.

## ಸಂಕಲ್ಪ

10ನೇ ತರಗತಿ ವಿದ್ಯಾಭ್ಯಾಸ ಪೂರೈಸಿ ಶಾಲೆಯಿಂದ ಬೀಳ್ಕೊಡಲಿರುವ ವಿದ್ಯಾರ್ಥಿಗಳಿಗಾಗಿ ಶೈಕ್ಷಣಿಕ ವರ್ಷದ ಅಂತ್ಯದ ವೇಳೆಗೆ ಆಯಾ ವಿದ್ಯಾಸಂಸ್ಥೆಗಳಲ್ಲಿ 'ಸಂಕಲ್ಪ' ಕಾರ್ಯಕ್ರಮವನ್ನು ಆಚರಿಸಲಾಗುತ್ತಿದೆ. ಪೂಜ್ಯ ಸ್ವಾಮಿಜೀಗಳ ಹಾಗೂ ಸಮಾಜದ ಗಣ್ಯವ್ಯಕ್ತಿಗಳ ಉಪಸ್ಥಿತಿಯಲ್ಲಿ ವಿದ್ಯಾರ್ಥಿಗಳು ಭಾರತ ದೇಶದ ನಕ್ಷೆಯ ಚಿತ್ರದ ಮೇಲೆ ದೀಪ ಬೆಳಗಿಸಿ ಭಾರತಕ್ಕಾಗಿ ಬದುಕುವ ಸಂಕಲ್ಪ ಕೈಗೊಂಡರು.



# ವಿವಿಧ ದಿನಾಚರಣೆಗಳು

ಮಕ್ಕಳಲ್ಲಿ ಸಾಮಾಜಿಕ ಕಳಕಳಿ ಹಾಗೂ ದೇಶ–ಧರ್ಮ–ಸಂಸ್ಕೃತಿಯ ಬಗೆಗೆ ಅಭಿಮಾನ, ಗೌರವ ಮೂಡಿಸುವ ಉದ್ದೇಶದಿಂದ ರಾಷ್ಟ್ರೋತ್ಥಾನ ಪರಿಷತ್‌ನ ವಿದ್ಯಾಸಂಸ್ಥೆಗಳಲ್ಲಿ ವಿವಿಧ ದಿನಾಚರಣೆಗಳನ್ನು ಆಚರಿಸಲಾಗುತ್ತಿದೆ.

**ಮಹಾತ್ಮರ ಸ್ಮರಣೆ:** ಭವಿಷ್ಯದ ಕನಸು ಕಾಣಬೇಕಾದ ಮಕ್ಕಳಿಗೆ ಹೇಗೆ ಬದುಕಬೇಕು, ಯಾರಂತೆ ಬದುಕಬೇಕು ಎಂಬ ಬಗ್ಗೆ ಆದರ್ಶ ವ್ಯಕ್ತಿಗಳ ಅಗತ್ಯವಿದೆ. ಭಾರತದಲ್ಲಿ ಈ ರೋಲ್ ಮಾಡೆಲ್‌ಗಳಿಗೇನೂ ಕೊರತೆಯಿಲ್ಲ. ಪ್ರಾಚೀನ ಕಾಲದಿಂದ ಈವರೆಗೂ ಸಮಾಜಕ್ಕಾಗಿ ಸಮರ್ಪಿತ ಜೀವನ ನಡೆಸಿದ ಪರಂಪರೆಯೇ ನಮ್ಮಲ್ಲಿದೆ. ಆದರೆ ಇವರನ್ನು ನಮ್ಮ ಎಳೆಯ ಪೀಳಿಗೆಯ ಮುಂದೆ ತೆರೆದಿಡುವ ಕಾರ್ಯ ಅಷ್ಟಾಗಿ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ರಾಷ್ಟ್ರೋತ್ಥಾನ ಪರಿಷತ್ ನಮ್ಮ ಮಹಾಪುರುಷರನ್ನು ಪರಿಚಯಿಸುವ ನಿರಂತರ ಪ್ರಯತ್ನ ನಡೆಸುತ್ತಿದೆ.



ರಾಷ್ಟ್ರದ ನಾಡು–ನುಡಿ, ಸಂಸ್ಕೃತಿ, ಸ್ವಾಭಿಮಾನ, ಅಖಂಡತೆಗಾಗಿ ತಮ್ಮ ಜೀವನವನ್ನು ತೈಲದಂತೆ ಉರಿಸಿದ ಭಾರತದ ಮಹಾನ್ ಚೇತನಗಳ ಜೀವನವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಸಲುವಾಗಿ ಪರಿಷತ್‌ನ ವಿದ್ಯಾಸಂಸ್ಥೆಗಳಲ್ಲಿ ಅವರ ಸ್ಮರಣೆ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಹೀಗೆ ಪ್ರತೀ ಶಾಲೆಯಲ್ಲಿ ನೂರಕ್ಕೂ ಅಧಿಕ ಮಹಾಪುರುಷರ ಪರಿಚಯ ನಡೆಯಿತು.

**ವಿಶ್ವ ಪರಿಸರ ದಿನಾಚರಣೆ:** ಜೂನ್ 5ರಂದು ಪರಿಷತ್‌ನ ಎಲ್ಲ ಶೈಕ್ಷಣಿಕ ಸಂಸ್ಥೆಗಳಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಪರಿಸರದ ಮಹತ್ತ್ವದ ಬಗ್ಗೆ ಮಕ್ಕಳಲ್ಲಿ ಹಾಗೂ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

- ತಮ್ಮ ಜೀವನದಲ್ಲಿ ನೀರಿನ ಮಿತಬಳಕೆ, ಸ್ವಚ್ಛತೆ, ಪ್ಲಾಸ್ಟಿಕ್ ತ್ಯಜಿಸುವ ಪ್ರತಿಜ್ಞೆಯನ್ನು ವಿದ್ಯಾರ್ಥಿಗಳು ಸ್ವೀಕರಿಸಿದರು.
- ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಬೀದಿಗಳಲ್ಲಿ ಜಾಥಾ, ನಾಟಕ ಕಾರ್ಯಕ್ರಮ ನಡೆಯಿತು.

**ಅಂತಾರಾಷ್ಟ್ರೀಯ ಯೋಗ ದಿನಾಚರಣೆ:** ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ರಾಷ್ಟ್ರೋತ್ಥಾನ ಪರಿಷತ್‌ನ ಅನೇಕ ಶಾಲೆಗಳಲ್ಲಿ ಜೂನ್ 21ರಂದು ಅಂತಾರಾಷ್ಟ್ರೀಯ ಯೋಗದಿನವನ್ನು ಆಚರಿಸಲಾಯಿತು. ಯೋಗದ ಕುರಿತು ಮಕ್ಕಳಲ್ಲಿ ಆಸಕ್ತಿ ಮೂಡಿಸುವ ಸಲುವಾಗಿ ಯೋಗಾಸನ ಪ್ರದರ್ಶನ, ಯೋಗಾಸನ ಸ್ಪರ್ಧೆ, ಯೋಗಪಿರಮಿಡ್ಡುಗಳ ರಚನೆ, ಸಾಮೂಹಿಕ ಪ್ರದರ್ಶನ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.

**ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯೋತ್ಸವ:** ದೇಶಕ್ಕೆ ಸ್ವಾತಂತ್ರ್ಯಪ್ರಾಪ್ತಿಯಾದ ಮಹತ್ತ್ವದ ಕ್ಷಣವಾದ ಸ್ವಾತಂತ್ರ್ಯ ದಿನಾಚರಣೆ ಹಾಗೂ ದೇಶದ ಪ್ರಜಾಪ್ರಭುತ್ವ–ಸಾರ್ವಭೌಮತೆಯ ಸಂಕೇತವಾದ ಗಣರಾಜ್ಯೋತ್ಸವ ಕಾರ್ಯಕ್ರಮಗಳನ್ನು ನಮ್ಮ ಶಾಲೆಗಳಲ್ಲಿ ಸಡಗರದಿಂದ ಆಚರಿಸಲಾಯಿತು.

ವಿದ್ಯಾಲಯದ ವಿದ್ಯಾರ್ಥಿಗಳು ಸ್ವಾತಂತ್ರ್ಯ ಹೋರಾಟಗಾರರ ಶೌರ್ಯ ತ್ಯಾಗ ಬಲಿದಾನ ಹಾಗೂ ಪುಲ್ವಾಮಾ ದಾಳಿಯ ಕುರಿತ ಕಿರುನಾಟಕ; ಟೇಕ್ವಾಂಡೋ, ವ್ಯಾಯಾಮ ಪ್ರದರ್ಶನ ಹಾಗೂ ವೀರ ಯೋಧರ ದೇಶಪ್ರೇಮವನ್ನು ಬಿಂಬಿಸುವ ನೃತ್ಯ ರೂಪಕ, ದೇಶಭಕ್ತಿ ಗೀತೆ ಗಾಯನ ಮುಂತಾದ ಸಾಂಸ್ಕೃತಿಕ



ಕಾರ್ಯಕ್ರಮಗಳು ಹಾಗೂ ಇಂಗ್ಲಿಷ್, ಹಿಂದಿ ಮತ್ತು ಕನ್ನಡ ಭಾಷೆಗಳಲ್ಲಿ ಭಾಷಣ ಸ್ಪರ್ಧೆ ನಡೆಯಿತು.

ವಿದ್ಯಾರ್ಥಿಗಳು ಶಾಲೆಯ ಸುತ್ತಮುತ್ತಲಿನ ಪ್ರಮುಖ ಬೀದಿಗಳಲ್ಲಿ ಘೋಷ್ ಸಹಿತ ಪಥಸಂಚಲನ ನಡೆಸಿದರು.

ವಿವಿಧ ಕ್ರೀಡಾಕೂಟಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಹಾಗೂ 10ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಮುಖ್ಯ ಅತಿಥಿಗಳು ಬಹುಮಾನ ನೀಡಿ ಅಭಿನಂದಿಸಿದರು.

ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಮಾಜಿ ಸೈನಿಕರಾದ ಮಡಿವಾಳಪ್ಪ ಮೆಳವಂಕಿ (ಧಾರವಾಡ), ವಾಯುಪಡೆಯ ಕಮಾಂಡರ್ ಪ್ರೇಮಕುಮಾರ್ ಕೃಷ್ಣಸ್ವಾಮಿ (ಥಣಿಸಂದ್ರ), ನಿವೃತ್ತ ಕರ್ನಲ್ ಜೆ. ಪೀಟರ್ ಸೆಲೆಸ್ಟೆನ್ (ಕಲ್ಯಾಣನಗರ), ದಾವಣಗೆರೆಯ ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ಚಂದ್ರಶೇಖರ್ ಆರ್. ಬಾಣಾಪುರಮಠ (ದಾವಣಗೆರೆ), ಮಾಧುರಿ ಟ್ರಾನ್ಸ್‌ಪೋರ್ಟ್‌ನ ಮಾಲೀಕರಾದ ಗಿರೀಶ್ (ಚಿತ್ರದುರ್ಗ), ನಿವೃತ್ತ ಕರ್ನಲ್ ಬೆನ್ನಿ ಸೆಬ್ಯಾಸ್ಟಿಯನ್ (ರಾಮಮೂರ್ತಿನಗರ), ಡಿಆರ್‌ಡಿಓ ಬೆಂಗಳೂರು ಘಟಕದ ನಿರ್ದೇಶಕರಾದ ಡಾ. ಪಿ. ರಘೋತ್ತಮ ರಾವ್ (ಬನಶಂಕರಿ) ಮುಂತಾದವರು ಆಗಮಿಸಿ ಧ್ವಜಾರೋಹಣ ನೆರವೇರಿಸಿದರು.

ಗಣರಾಜ್ಯೋತ್ಸವದಲ್ಲಿ ಹುಬ್ಬಳ್ಳಿಯ ಕೆಎಲ್‌ಇ ಇಂಜಿನಿಯರಿಂಗ್‌ನ ಗಣಕಯಂತ್ರ ಹಾಗೂ ಅಭಿಯಂತರ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ. ಗೋಪಾಲಕೃಷ್ಣ ಜೋಶಿ (ಧಾರವಾಡ), ಗ್ರೂಪ್ ಕ್ಯಾಪ್ಟನ್(ನಿ) ವಾಮರಸಿಂಹ (ಉಲ್ಲಾಳು ಉಪನಗರ), ನಿವೃತ್ತ ಸೈನಿಕರಾದ ಮಂಜುನಾಥ ಅಂಡಿ (ಧಾರವಾಡ), ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಮೇಜರ್ (ನಿ) ಡಾ. ಕೆ.ಬಿ. ಸುನೀಲ್ ಕುಮಾರ್ (ದಾವಣಗೆರೆ), ಏರ್ ಕಮಾಂಡರ್ ಸುಮೀರ್ ಟಂಡನ್ (ಥಣಿಸಂದ್ರ), ಮಿಲಿಟರಿ ಏವಿಯೇಷನ್‌ನ ನಿವೃತ್ತ ಬೋಧಕರಾದ ಮಲ್ಲಿಕಾರ್ಜುನ್ ಆರ್. ವಗ್ಗೇರಿ (ಬನಶಂಕರಿ) ನೌಕಾದಳದ (ನಿ) ಅಧಿಕಾರಿ ಆರ್. ರಾಜ್ (ರಾಮಮೂರ್ತಿನಗರ), ಆರ್ಮಿ ಡಿಜಿಟಲ್ ಸೆಂಟರ್‌ನ ಸ್ಥಾಪಕ ಮೇಜರ್ ಜನರಲ್ (ನಿ) ಎನ್.ಆರ್. ಅನಂತ (ಕಲ್ಯಾಣನಗರ) ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಕನ್ನಡ ರಾಜ್ಯೋತ್ಸವ (ನವೆಂಬರ್ 1), ರಾಷ್ಟ್ರಭಾಷಾ ದಿನ, ವಿಶ್ವ ರಕ್ತದಾನಿಗಳ ದಿನಾಚರಣೆ (ಜೂನ್ 6), ರಾಷ್ಟ್ರೀಯ ಗ್ರಂಥಾಲಯ ದಿನಾಚರಣೆ (ಆಗಸ್ಟ್ 13), ಓಝೋನ್ ದಿನಾಚರಣೆ, ಕಾರ್ಗಿಲ್ ವಿಜಯೋತ್ಸವ ಮುಂತಾದ ದಿನಾಚರಣೆಗಳನ್ನು ಎಲ್ಲ ವಿದ್ಯಾಲಯ/ಕೇಂದ್ರಗಳಲ್ಲಿ ಆಚರಿಸಲಾಯಿತು.

## ಮನೋವಿಕಾಸಕ್ಕೆ ಪೂರಕ ಚಟುವಟಿಕೆಗಳು

ಸಮಗ್ರವಿಕಾಸದ ಮೂಲಕ ವ್ಯಕ್ತಿನಿರ್ಮಾಣ, ತನ್ಮೂಲಕ ಸುಸಂಪನ್ನ ರಾಷ್ಟ್ರನಿರ್ಮಾಣದ ಗುರಿಯಿಂದ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೋತ್ಥಾನ ಪರಿಷತ್‌ನ ಶೈಕ್ಷಣಿಕ ಸಂಸ್ಥೆಗಳಲ್ಲಿ ಮಕ್ಕಳಲ್ಲಿ ಸಾಮೂಹಿಕತೆ ಹಾಗೂ ಅನ್ಯೋನ್ಯತೆ ಮೂಡಿಸುವ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

**ಗುರುಪೂರ್ಣಿಮೆ:** ಗುರುವಿನ ಮಹತ್ತ್ವವನ್ನು ಮಕ್ಕಳಿಗೆ ತಿಳಿಸಿಕೊಡುವ ಹಾಗೂ ನಮ್ಮ ಸಂಸ್ಕೃತಿ ಸಮಾಜದ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ವಿವಿಧ ವಿದ್ಯಾಲಯ/ಕೇಂದ್ರಗಳಲ್ಲಿ ಆಷಾಢ ಶುಕ್ಲ ಹುಣ್ಣಿಮೆಯಂದು ಗುರುಪೂರ್ಣಿಮೆಯನ್ನು ಆಚರಿಸಲಾಗುತ್ತಿದೆ. ವಿದ್ಯಾರ್ಥಿಗಳಿಂದ ಗುರುವಿನ ಮಹತ್ತ್ವವನ್ನು ಸಾರುವ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

**ರಕ್ಷಾಬಂಧನ:** ವ್ಯಕ್ತಿ–ವ್ಯಕ್ತಿ ನಡುವಿನ ಬಾಂಧವ್ಯದ ಸಂಕೇತ ಹಾಗೂ ಸಂಘಟಿತ ಶಕ್ತಿಯ ಮಹತ್ತ್ವವನ್ನು ಸಾರುವ ಮತ್ತು ಭಾರತೀಯ ಇತಿಹಾಸದಲ್ಲಿ ಐತಿಹಾಸಿಕ ಹಿನ್ನೆಲೆಯಿರುವ ರಕ್ಷಾಬಂಧನ ಉತ್ಸವವನ್ನು ರಾಷ್ಟ್ರೋತ್ಥಾನ ಪರಿಷತ್‌ನ ವಿವಿಧ ಪ್ರಕಲ್ಪಗಳಲ್ಲಿ ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು.

ಶ್ರೀಕೃಷ್ಣ ಜನ್ಮಾಷ್ಟಮಿ, ಗಣೇಶೋತ್ಸವ, ಶಿವರಾತ್ರಿ, ಸಾಮೂಹಿಕ ಸತ್ಯನಾರಾಯಣ ಪೂಜೆ, ಭಾರತಮಾತಾ ಪೂಜನಾ, ಸಾಮೂಹಿಕ ಹುಟ್ಟುಹಬ್ಬ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.



## ಕೀರ್ತಿ ತಂದ ಪ್ರತಿಭೆಗಳು

**ಇಂಡಿಯನ್ ಬುಕ್‌ಆಫ್ ರೆಕಾರ್ಡ್‌ನಲ್ಲಿ ದಾಖಲೆ:** ರಾಮಮೂರ್ತಿನಗರದ ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ 10ನೆಯ ತರಗತಿಯ ವಿದ್ಯಾರ್ಥಿ ಕೌಶಿಕ್ ಜಿ. ಅವರು ಶಲಭಾಸನದ (Longest to hold stand Yoga pose) ಅಂತಿಮ ಸ್ಥಿತಿಯಲ್ಲಿ 45 ನಿಮಿಷ 10 ಸೆಕೆಂಡ್‌ಗಳ ಕಾಲ ನಿಲ್ಲುವ ಮೂಲಕ ಇಂಡಿಯನ್ ಬುಕ್ ಆಫ್ ರೆಕಾರ್ಡ್ ಮತ್ತು ಗೋಲ್ಡನ್ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲೆ ನಿರ್ಮಿಸಿದರು.

ಥಣಿಸಂದ್ರದ 10ನೇ ತರಗತಿಯ ವಿದ್ಯಾರ್ಥಿನಿ ಸ್ಫೂರ್ತಿ ಅವರು 2019ರ AISSE ಪರೀಕ್ಷೆಯಲ್ಲಿ 500ಕ್ಕೆ 496 ಅಂಕ ಪಡೆದು 3ನೇ ರ‍್ಯಾಂಕ್ ಗಳಿಸಿ ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವದಂದು ಪ್ರಶಸ್ತಿಯನ್ನು ಪಡೆದಿದ್ದಾರೆ.

**ಅಂತಾರಾಷ್ಟ್ರೀಯ ಜಾಂಬೂರಿ ಶಿಬಿರಕ್ಕೆ ಆಯ್ಕೆ:** ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿನಿ ಶ್ರೇಯಾ ಯು. ವರ್ಣೇಕರ್ ಅವರು ದಾವಣಗೆರೆಯ ಸ್ಕೌಟ್ ಗೈಡ್ಸ್ ವಿಭಾಗದಿಂದ ಕರ್ನಾಟಕ ರಾಜ್ಯದ ಪರವಾಗಿ ಅಮೆರಿಕದಲ್ಲಿ ನಡೆಯುವ ಅಂತಾರಾಷ್ಟ್ರೀಯ ಜಾಂಬೂರಿ ಶಿಬಿರಕ್ಕೆ ಆಯ್ಕೆಯಾಗಿದ್ದಾರೆ.

### ರಾಷ್ಟ್ರಮಟ್ಟದ ಪ್ರಶಸ್ತಿ

- ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ತಂಡವು ಬಿಹಾರದಲ್ಲಿ ನಡೆದ ರಾಷ್ಟ್ರಮಟ್ಟದ ಟೇಬಲ್ ಟೆನ್ನಿಸ್ ಸ್ಪರ್ಧೆಯಲ್ಲಿ (ಹೃಷಿಕೇಶ್ ಶೆಟ್ಲೂರ್, ಥವನೀಶ್, ಅಭಿರಾಮ್ ಭಟ್), ಭೂಪಾಲ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಈಜು ಸ್ಪರ್ಧೆಯಲ್ಲಿ (ಸ್ವಾತಿಕ್ ಕಶ್ಯಪ್, ಅಂಕಿತ ಗ್ರೀಷ್ಮಾ) ಪ್ರಥಮ ಸ್ಥಾನವನ್ನು ಗಳಿಸಿದೆ. ರಾಷ್ಟ್ರಮಟ್ಟದ ಸೆಸ್ಟೊಬಾಲ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಚಾಂಪಿಯನ್ ಶಿಪ್ ಪಟ್ಟ ಪಡೆದಿದೆ. Cestoball Federation of India ಆಯೋಜಿಸಿದ ರಾಷ್ಟ್ರಮಟ್ಟದ Cestoball ಸ್ಪರ್ಧೆಯಲ್ಲಿ ಶ್ರವಣ್ & ಭರತ್ ಜೋಷಿ (ಬಾಲಕರ) ಹಾಗೂ ಟಿಯಾ & ಲಾಸ್ಯ, ವಸುಂಧರಾ (ಬಾಲಕಿಯರ) ವಿಜೇತರಾಗುವ ಮೂಲಕ ವಿದ್ಯಾಕೇಂದ್ರವು ಚಾಂಪಿಯನ್ ಪಟ್ಟ ಗಳಿಸಿದೆ.
- ರಾಮಮೂರ್ತಿನಗರದ ಜೆಜಿಆರ್‌ವಿಕೆಯ ವಿದ್ಯಾರ್ಥಿಗಳು ರಾಷ್ಟ್ರೀಯ ಮಟ್ಟದ ಥ್ರೋಬಾಲ್ ಸ್ಪರ್ಧೆಯಲ್ಲಿ (ಬಾಲಕಿಯರು) ಪ್ರಥಮ ಸ್ಥಾನವನ್ನು ಹಾಗೂ ಭೂಪಾಲ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಈಜು ಸ್ಪರ್ಧೆಯಲ್ಲಿ 9 ಚಿನ್ನ, ಮೀರತ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಸ್ಕೇಟಿಂಗ್ ಸ್ಪರ್ಧೆಯಲ್ಲಿ 6 ಚಿನ್ನ, 2 ಬೆಳ್ಳಿ ಮತ್ತು ಬಿಲ್ವಿದ್ಯೆ ಸ್ಪರ್ಧೆಯಲ್ಲಿ 2 ಚಿನ್ನದ ಪದಕ ಗಳಿಸಿದರು.
- ಬಿಹಾರ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಬಾಲಕಿಯರ ವಾಲಿಬಾಲ್ ಸ್ಪರ್ಧೆ ಮತ್ತು ಮೈಸೂರಿನಲ್ಲಿ ನಡೆದ ರಾಷ್ಟ್ರಮಟ್ಟದ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಹಾಗೂ ರಾಷ್ಟ್ರಮಟ್ಟದ ಕರಾಟೆ ಸ್ಪರ್ಧೆಯಲ್ಲಿ (6 ಕಂಚು) ರಾಮಮೂರ್ತಿನಗರದ ಜೆಜಿಆರ್‌ವಿಕೆಯು ತೃತೀಯ ಸ್ಥಾನ ಗಳಿಸಿದೆ.
- ಪ್ರಾಂತ ಮತ್ತು ಕ್ಷೇತ್ರದ ಜ್ಞಾನ ವಿಜ್ಞಾನ ಮೇಳದಲ್ಲಿ ರಾಮಮೂರ್ತಿನಗರದ ಜೆಜಿಆರ್‌ವಿಕೆಯ ವಿದ್ಯಾರ್ಥಿಗಳು ವಿಜ್ಞಾನ ಮತ್ತು ಗಣಿತ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾಗಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದರು.
- ರಾಜ್ಯ ಮಟ್ಟದ ಥ್ರೋಬಾಲ್ ಸ್ಪರ್ಧೆ (ಬಾಲಕರು), ಮಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ಟೇಬಲ್ ಟೆನಿಸ್ ಮತ್ತು ಚದುರಂಗ ಸ್ಪರ್ಧೆಯಲ್ಲಿ (ಬಾಲಕಿಯರು) ರಾಮಮೂರ್ತಿನಗರದ ಜೆಜಿಆರ್‌ವಿಕೆಯ ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಗಳಿಸಿದರು.

**ಜಿಲ್ಲಾ ಯುವ ವಿಜ್ಞಾನಿಯಾಗಿ ಆಯ್ಕೆ :** ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಮಂಡಳಿ ಆಯೋಜಿಸಿದ 2019ನೇ ಸಾಲಿನ ಜಿಲ್ಲಾ ಮಟ್ಟದ 27ನೇ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶದಲ್ಲಿ ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿಗಳು (ಅಭಿಜ್ಞಾ ತನ್ವಿ ಡಿ. ಮತ್ತು ಸೋನು ಟಿ.ಎಸ್.) ದಾವಣಗೆರೆ ಜಿಲ್ಲಾ ಬಾಲ ವಿಜ್ಞಾನಿ ಪ್ರಶಸ್ತಿ ಪಡೆದು ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾದರು.



ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಆಯೋಜಿಸಿದ ಸ್ಪರ್ಧೆಯಲ್ಲಿ ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿನಿ ಕುಶಿ ಅವರು ದಾವಣಗೆರೆ ಜಿಲ್ಲಾಮಟ್ಟದ ಯುವ ವಿಜ್ಞಾನಿಯಾಗಿ ಆಯ್ಕೆಯಾಗಿದ್ದಾರೆ. ಸ್ಪರ್ಧೆಯಲ್ಲಿ ಜಿಲ್ಲೆಯ 30ಕ್ಕೂ ಅಧಿಕ ಶಾಲೆಗಳು ಪ್ರತಿನಿಧಿಸಿದ್ದವು.

**ಪ್ರಾಂತ ಮಟ್ಟದ ಈಜು ಸ್ಪರ್ಧೆ:** ಆಗಸ್ಟ್ 11ರಂದು ನಡೆದ ವಿದ್ಯಾಭಾರತಿ ಶಿಕ್ಷಣ ಸಮೂಹಗಳ ಪ್ರಾಂತಮಟ್ಟದ ಈಜುಸ್ಪರ್ಧೆಯಲ್ಲಿ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ನಾಲ್ಕು ವಿದ್ಯಾರ್ಥಿಗಳು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

**ಜಿಲ್ಲಾ ಮಟ್ಟದ ಯೋಗ ಸ್ಪರ್ಧೆ:** ವಿದ್ಯಾಭಾರತಿ ಕರ್ನಾಟಕದ ವತಿಯಿಂದ ನಡೆದ ಬೆಂಗಳೂರು ಜಿಲ್ಲಾಮಟ್ಟದ ಯೋಗ ಸ್ಪರ್ಧೆಯ ರಿದಮಿಕ್ ವಿಭಾಗದಲ್ಲಿ ಹಾಗೂ ಕಬಡ್ಡಿ ಸ್ಪರ್ಧೆಯಲ್ಲಿ ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿಗಳು ಪ್ರಥಮ ಸ್ಥಾನವನ್ನು ಪಡೆದಿದ್ದಾರೆ.

**ತಾಲೂಕು ಮಟ್ಟಕ್ಕೆ ಆಯ್ಕೆ:** ಆಗಸ್ಟ್ 19ರಂದು ಚಿತ್ರದುರ್ಗದ ಶ್ರೀತರಳುಬಾಳು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಪಶ್ಚಿಮ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಚಿತ್ರದುರ್ಗದ ಜ್ಞಾನಭಾರತಿ ವಿದ್ಯಾಮಂದಿರದ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ 4 ಪ್ರಥಮ, 6 ದ್ವಿತೀಯ ಹಾಗೂ 5 ತೃತೀಯ ಬಹುಮಾನಗಳನ್ನು ಗಳಿಸಿ ತಾಲ್ಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

**ಸಾಹಿತ್ಯ–ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಪ್ರಥಮ:** ಸೆ. 12ರಂದು ದಾವಣಗೆರೆ ನಗರ ಮಟ್ಟದ ಪ್ರೌಢಶಾಲಾ ಬಾಲಕ/ಬಾಲಕಿಯರ ಸಾಹಿತ್ಯ ಮತ್ತು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿಗಳು ಸಮೂಹಗೀತೆ, ಸಾಮೂಹಿಕ ನೃತ್ಯ, ರಸಪ್ರಶ್ನೆ ಮತ್ತು ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದರು. ಸ್ಪರ್ಧೆಯಲ್ಲಿ ಒಟ್ಟು 20 ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಮಕ್ಕಳ ತ್ರಿಭಾಷಾ ಕವಿಗೋಷ್ಠಿಯಲ್ಲಿ ಪ್ರಥಮ:** ಧಾರವಾಡದ ಮಕ್ಕಳ ಅಕಾಡೆಮಿ ನಡೆಸಿದ ಮಕ್ಕಳ ತ್ರಿಭಾಷಾ ಕವಿಗೋಷ್ಠಿಯಲ್ಲಿ ಧಾರವಾಡದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿಗಳು ಕನ್ನಡದಲ್ಲಿ ಪ್ರಥಮ ಹಾಗೂ ಸಮಾಧಾನಕರ, ಇಂಗ್ಲಿಷ್ ಭಾಷೆಯಲ್ಲಿ ತೃತೀಯ ಸ್ಥಾನ ಮತ್ತು ಹಿಂದಿಯಲ್ಲಿ ಸಮಾಧಾನಕರ ಬಹುಮಾನ ಪಡೆದರು.

ಬಾಗಲಕೋಟೆಯಲ್ಲಿ ನಡೆದ ಸಿಬಿಎಸ್‌ಇ ಕ್ಲಸ್ಟರ್ ಮಟ್ಟದ ಖೋಖೋ ಪಂದ್ಯಾವಳಿಯಲ್ಲಿ ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಬಾಲಕಿಯರ ತಂಡ ತೃತೀಯ ಸ್ಥಾನವನ್ನು ಪಡೆದಿದೆ.

**ಅಂತರ ಶಾಲಾ ಸ್ಪರ್ಧೆ**

ಸೆಪ್ಟೆಂಬರ್ 6ರಂದು ಬೆಂಗಳೂರಿನ ಸೌಂದರ್ಯ ಸೆಂಟ್ರಲ್ ಸ್ಕೂಲ್‌ನಲ್ಲಿ ನಡೆದ 3ನೇ ಅಂತರಶಾಲಾ ಈಜು ಸ್ಪರ್ಧೆಯಲ್ಲಿ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿಗಳು 19 ಚಿನ್ನ, 11 ಬೆಳ್ಳಿ ಮತ್ತು 4 ಕಂಚಿನ ಪದಕಗಳನ್ನು ಪಡೆದರು. ಸ್ಪರ್ಧೆಯಲ್ಲಿ 80 ಶಾಲೆಗಳಿಂದ ಒಟ್ಟು 300 ಈಜು ಸ್ಪರ್ಧಿಗಳು ಭಾಗವಹಿಸಿದ್ದರು.

ಜನವರಿ 11ರಂದು ನಡೆದ ಅಂತರ ಶಾಲಾ ಈಜು ಸ್ಪರ್ಧೆಯಲ್ಲಿ ಥಣಿಸಂದ್ರದ ವಿದ್ಯಾಕೇಂದ್ರವು 256 ಅಂಕಗಳಿಂದ ಸಮಗ್ರ ಪ್ರಶಸ್ತಿ ಪಡೆಯಿತು. ಸ್ಪರ್ಧೆಯಲ್ಲಿ 68 ಶಾಲೆಗಳ 234 ವಿದ್ಯಾರ್ಥಿಗಳು ಭಾಗವಹಿಸಿದರು.

ದಿಶಾ ಭಾರತ್ ಸಂಸ್ಥೆ ಆಗಸ್ಟ್ 6ರಂದು ಆಯೋಜಿಸಿದ 'ನೊ ಯುವರ್ ಕಂಟ್ರಿ' (ದೇಶವನ್ನು ಅರಿಯೋಣ) ಎಂಬ ಅಂತರಶಾಲಾ ಸ್ಪರ್ಧೆಯಲ್ಲಿ ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿಗಳು ಪ್ರದರ್ಶಿಸಿದ ನಾಟಕ ದ್ವಿತೀಯ ಸ್ಥಾನ ಪಡೆದಿದೆ.

ಸೆಪ್ಟೆಂಬರ್ 12ರಂದು ನಡೆದ ಇಂಟರ್ ಸ್ಕೂಲ್ ಕಾಂಪಿಟೀಷನ್‌ನಲ್ಲಿ ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿಗಳು ಸಂಗೀತದ ಸೀನಿಯರ್ ಸೋಲೋ, ಜೂನಿಯರ್ ಸೋಲೋ, ಜೂನಿಯರ್ ಹಾಗೂ ಸೀನಿಯರ್ ಗ್ರೂಪ್ ಸಾಂಗ್‌ನಲ್ಲಿ ದ್ವಿತೀಯ ಸ್ಥಾನವನ್ನು ಪಡೆದರು.



ಡಿ. 16ರಂದು ಹರಿಯಾಣದಲ್ಲಿ ನಡೆದ ರಾಷ್ಟ್ರಮಟ್ಟದ ಹೆರಿಟೇಜ್ ಕ್ವಿಜ್ ಸ್ಪರ್ಧೆಯಲ್ಲಿ ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ನಾಲ್ಕನೇ ಸ್ಥಾನ ಪಡೆದಿದ್ದಾರೆ.

## ಸಾಮಾಜಿಕ ಚಟುವಟಿಕೆಗಳು

**ಗ್ರಾಮ ವಿಕಾಸ:** ಗ್ರಾಮ ವಿಕಾಸದ ದೃಷ್ಟಿಯಿಂದ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರವು ಶಾಲೆಯ ಸಮೀಪದ ಯರಪ್ಪನಹಳ್ಳಿ ಗ್ರಾಮವನ್ನು ಆಯ್ಕೆ ಮಾಡಿಕೊಂಡಿದ್ದು, ಅಲ್ಲಿ ಕಳೆದ ಮೂರ್‍ನಾಲ್ಕು ವರ್ಷಗಳಿಂದ ವಿವಿಧ ಚಟುವಟಿಕೆಗಳನ್ನು ನಡೆಸುತ್ತಿದೆ.

ಅಲ್ಲಿನ ವಿದ್ಯಾರ್ಥಿಗಳಿಗೆ ಸಂಸ್ಕಾರ ಎಂಬ ಕಾರ್ಯಕ್ರಮದಡಿ ಯೋಗ, ಸಂಗೀತ, ದೇಶಭಕ್ತಿ ಗೀತೆಗಳನ್ನು ಕಲಿಸಿಕೊಡಲಾಗುತ್ತಿದೆ. ಗ್ರಾಮ ಸಾಮರಸ್ಯಕ್ಕಾಗಿ ಊರ ಜನರನ್ನು ಸೇರಿಸಿ ದೀಪೋತ್ಸವ, ಗೋಪೂಜೆ, ತುಳಸಿಪೂಜೆ ಮತ್ತು ಭಾರತಮಾತಾ ಪೂಜನ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.

**ಸರ್ಕಾರಿ ಶಾಲೆಗಳಲ್ಲಿ ಉಚಿತ ತರಬೇತಿ:** ಸರ್ಕಾರೀ ಶಾಲೆಗಳನ್ನು ವಿಕಾಸಗೊಳಿಸಲು ಕೈಜೋಡಿಸಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರಗಳು ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ಥಣಿಸಂದ್ರ, ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಹಾಗೂ ರಾಮಮೂರ್ತಿನಗರದ ಜೆಜಿಆರ್‌ವಿಕೆ ವಿದ್ಯಾಕೇಂದ್ರದ ಶಿಕ್ಷಕರು ಸುತ್ತಮುತ್ತಲಿನ 50ಕ್ಕೂ ಅಧಿಕ ಸರ್ಕಾರೀ ಶಾಲೆಗಳಲ್ಲಿ ವಾರಕ್ಕೊಮ್ಮೆ ನಿರಂತರವಾಗಿ ಉಚಿತ ಯೋಗ ಶಿಕ್ಷಣವನ್ನು ನೀಡಲಾಗಿದೆ.

- ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಿಂದ ಸುತ್ತಲಿನ 8 ಸರ್ಕಾರಿ ಶಾಲೆಗಳಿಗೆ ಸಂಗೀತ ಶಿಕ್ಷಣವನ್ನು ನೀಡಲಾಗಿದೆ.
- 19 ಶಾಲೆಗಳ 3600 ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಯೋಗದರಿಯನ್ನು ಉಚಿತವಾಗಿ ನೀಡಲಾಗಿದೆ. ಕೆ.ಆರ್. ಪುರಂ ವಿಧಾನಸಭಾ ಕ್ಷೇತ್ರದ ಶಾಸಕರಾದ ಬೈರತಿ ಬಸವರಾಜ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಯೋಗದರಿಗಳನ್ನು ವಿತರಿಸಿದರು.
- ವಿವೇಕಾನಂದ ಜಯಂತಿಯಂದು ಬನಶಂಕರಿ ಶಾಲೆಯ ಶಿಕ್ಷಕರು ವಿವಿಧ ಶಾಲೆಗಳಿಗೆ ಭೇಟಿ ನೀಡಿ ಮಕ್ಕಳಿಗೆ ವಿವೇಕಾನಂದರ ವಿಚಾರಧಾರೆಗಳ ಕುರಿತು ಅರಿವು ಮೂಡಿಸಿದರು.

**ಸರ್ಕಾರೀ ಶಾಲಾ ಯೋಗಾಸನ ಸ್ಪರ್ಧೆ:** ಜನವರಿ 11ರಂದು ಸ್ವಾಮಿ ವಿವೇಕಾನಂದರ ಜನ್ಮದಿನದ ಪ್ರಯುಕ್ತ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರವು ಸರ್ಕಾರೀ ಅಂತರ್ ಶಾಲಾ ಯೋಗಾಸನ ಸ್ಪರ್ಧೆಯನ್ನು ಆಯೋಜಿಸಲಾಯಿತು. ಬೆಂಗಳೂರು ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತರಾಯ ಅವರು ಸ್ಪರ್ಧೆಯನ್ನು ಉದ್ಘಾಟಿಸಿ 'ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಶಿಕ್ಷಕರು ಸರ್ಕಾರಿ ಶಾಲೆಗಳಿಗೆ ಆಗಮಿಸಿ ಯೋಗಶಿಕ್ಷಣ ನೀಡುತ್ತಿರುವುದು ಸಂತಸದ ವಿಷಯ. ಇದಕ್ಕಾಗಿ ರಾಷ್ಟ್ರೋತ್ಥಾನಕ್ಕೆ ಅಭಿನಂದನೆಗಳು' ಎಂದರು. ಬೆಂಗಳೂರು ದಕ್ಷಿಣ ಕ್ಷೇತ್ರದ ಶಿಕ್ಷಣಾಧಿಕಾರಿಗಳಾದ ಕಮಲಾಕರ ಅವರು ವಿಜೇತರಿಗೆ ಬಹುಮಾನ ವಿತರಿಸಿದರು. ಸ್ಪರ್ಧೆಯಲ್ಲಿ 27 ಸರ್ಕಾರೀ ಶಾಲೆಗಳ 270 ವಿದ್ಯಾರ್ಥಿಗಳು ಭಾಗವಹಿಸಿದರು.

**ಹಳ್ಳಿಯ ಜನರಿಗಾಗಿ ಆರೋಗ್ಯ ತಪಾಸಣಾ ಶಿಬಿರ:** ಗ್ರಾಮೀಣ ಜನರಿಗೂ ಉತ್ತಮ ವೈದ್ಯಕೀಯ ಸೌಲಭ್ಯ ದೊರಕುವಂತಾಗಬೇಕು ಎಂಬ ಕಳಕಳಿಯಿಂದ ಮುಂಗಾನಹಳ್ಳಿಯ ರಾಷ್ಟ್ರೋತ್ಥಾನ ವಿದ್ಯಾಲಯದ ವತಿಯಿಂದ ಸಾರ್ವಜನಿಕರಿಗಾಗಿ ಕಣ್ಣಿನ ತಪಾಸಣಾ ಶಿಬಿರವನ್ನು ಆಯೋಜಿಸಲಾಯಿತು. 192 ಮಂದಿ ಸಾರ್ವಜನಿಕರು ಕಣ್ಣಿನ ಪರೀಕ್ಷೆ ನಡೆಸಿಕೊಂಡು ಚಿಕಿತ್ಸೆ ಪಡೆದರು.

**ಭಾರತಮಾತಾ ಪೂಜನ:** ಹಳ್ಳಿಯ ಜನರಲ್ಲಿ ಸಾಮರಸ್ಯ ಹಾಗೂ ಭಾರತದ ಬಗೆಗೆ ಹೆಮ್ಮೆ ಅಭಿಮಾನ ಮೂಡಿಸುವ ಸಲುವಾಗಿ ಹಗರಿಬೊಮ್ಮನಹಳ್ಳಿಯ ರಾಷ್ಟ್ರೋತ್ಥಾನ ಶಾಲೆಗಳ ಶಿಕ್ಷಕರು ಹಾಗೂ ವಿದ್ಯಾಥಿಗಳು ಸುತ್ತಮುತ್ತಲಿನ 156 ನಗರಗಳಲ್ಲಿ ಭಾರತ ಮಾತಾ ಪೂಜನ ಕಾರ್ಯಕ್ರಮವನ್ನು ಆಯೋಜಿಸಿದರು. ಊರ ಪ್ರಮುಖರ ಉಪಸ್ಥಿತಿಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ 5000ಕ್ಕೂ ಅಧಿಕ ಮಂದಿ ಭಾಗವಹಿಸಿದರು. 2 ದೇವಸ್ಥಾನಗಳಲ್ಲಿ, 8 ಹೈಸ್ಕೂಲ್ ಹಾಸ್ಟೆಲ್, 2 ಕಾಲೇಜು ಹಾಸ್ಟೆಲ್ ಮತ್ತು 8 ಮಹಿಳಾ ಸಂಘಗಳಲ್ಲಿ ಭಾರತಮಾತಾ ಪೂಜನ ಕಾರ್ಯಕ್ರಮ ನಡೆಸಲಾಯಿತು. ಸುಮಾರು 1000ಕ್ಕೂ ಅಧಿಕ ಜನರು ಭಾಗವಹಿಸಿದರು.

# TAPAS ತಪಸ್ ಮತ್ತು ಸಾಧನಾ saadhana

ಭಾರತೀಯ ಯುವಜನರ ಬುದ್ಧಿವಂತಿಕೆಯನ್ನು ಜಗತ್ತು ಕೌತುಕದಿಂದ ನೋಡುತ್ತಿದೆ. ಆದರೆ ಭಾರತದಲ್ಲಿನ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳು ಆರ್ಥಿಕ ದುರ್ಬಲತೆಯಿಂದಲೋ ಸೂಕ್ತ ಮಾರ್ಗದರ್ಶನವಿಲ್ಲದೆಯೋ, ಆಯ್ಕೆಯ ಸಮಸ್ಯೆಯಿಂದಲೋ ಅವರ ಪ್ರತಿಭೆ ಹೊರಹೊಮ್ಮಲು ಅಸಾಧ್ಯವಾಗಿದೆ. ಈ ಸಮಸ್ಯೆಯನ್ನು ಗಮನದಲ್ಲಿರಿಸಿಕೊಂಡು ಆರ್ಥಿಕ ಮತ್ತು ಸಾಮಾಜಿಕವಾಗಿ ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಹಾಗೂ ಪ್ರತಿಷ್ಠಿತ ಉನ್ನತ ಶಿಕ್ಷಣಕ್ಕೆ ಪೂರಕವಾದ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ನೀಡುವ ಉದ್ದೇಶದಿಂದ ರಾಷ್ಟ್ರೋತ್ಥಾನ ಪರಿಷತ್ 'ತಪಸ್' (ಬಾಲಕರಿಗಾಗಿ) ಹಾಗೂ ಸಾಧನಾ (ಬಾಲಕಿಯರಿಗಾಗಿ) ಎಂಬ ವಿಶಿಷ್ಟ ಯೋಜನೆಯನ್ನು ನಡೆಸುತ್ತಿದೆ.



ಆರ್ಥಿಕವಾಗಿ ದುರ್ಬಲವಾಗಿರುವ ಕುಟುಂಬದ ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ (ಹೆಣ್ಣು ಮಕ್ಕಳಿಗೆ) ಉಚಿತ ವಸತಿ ಸಹಿತ ಪಿ.ಯು.ಸಿ. ಶಿಕ್ಷಣದ ಜೊತೆಗೆ ಪ್ರತಿಷ್ಠಿತ NEET/CET ಪ್ರವೇಶ ಪರೀಕ್ಷೆಗೆ ತರಬೇತಿಗೊಳಿಸುವುದೇ **'ಸಾಧನಾ'** ಯೋಜನೆಯ ಉದ್ದೇಶ.

ಆರ್ಥಿಕವಾಗಿ ದುರ್ಬಲವಾಗಿರುವ ಕುಟುಂಬದ ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ (ಗಂಡು ಮಕ್ಕಳಿಗೆ) ಉಚಿತ ವಸತಿ ಸಹಿತ ಪಿ.ಯು.ಸಿ. ಶಿಕ್ಷಣದ ಜೊತೆಗೆ ಐಐಟಿ-ಜೆಇಇ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿಗೊಳಿಸುವುದೇ **'ತಪಸ್'** ಯೋಜನೆಯ ಉದ್ದೇಶ.

## TAPAS ತಪಸ್

ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ದುರ್ಬಲ ಕುಟುಂಬದ ಪ್ರತಿಭಾವಂತ ಗಂಡುಮಕ್ಕಳನ್ನು ಪ್ರತಿಷ್ಠಿತ ಐಐಟಿ–ಜೆಇಇ ಶಿಕ್ಷಣ ಪಡೆಯುವಂತೆ ಮಾಡುವ ಸಲುವಾಗಿ 2012ರಲ್ಲಿ 'ತಪಸ್' ಯೋಜನೆ ಪ್ರಾರಂಭಗೊಂಡಿತು.

ಈ ಯೋಜನೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ವಸತಿ, ಭೋಜನ, ಕಾಲೇಜು ಶುಲ್ಕ, ಅಧ್ಯಯನ ಸಾಮಗ್ರಿ, ತರಬೇತಿ ಸೇರಿದಂತೆ 2 ವರ್ಷಗಳ ಶಿಕ್ಷಣ ಸಂಪೂರ್ಣ ಉಚಿತವಾಗಿ ನೀಡಲಾಗುತ್ತದೆ. ಇದಕ್ಕಾಗಿ ಬೆಂಗಳೂರಿನ ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಲಯದ ಪರಿಸರದಲ್ಲಿ ಸುಸಜ್ಜಿತ ಪ್ರಯೋಗಾಲಯ, ಗ್ರಂಥಾಲಯ, ವಸತಿ ನಿಲಯಗಳಂತಹ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ರಾಷ್ಟ್ರೋತ್ಥಾನದ ಪಿ.ಯು. ಕಾಲೇಜಿನಲ್ಲಿ ಶಿಕ್ಷಣ ನೀಡಲಾಗುತ್ತದೆ.

ಪ್ರತಿಷ್ಠಿತ ಬೇಸ್ ಸಂಸ್ಥೆಯ ಸಹಯೋಗದಲ್ಲಿ ಈ ಚಟುವಟಿಕೆ ನಡೆಯುತ್ತಿದೆ. ಐಐಟಿ–ಜೆಇಇ ಸ್ಪರ್ಧಾತ್ಮಕ ಪರೀಕ್ಷೆಗೆ ಮಕ್ಕಳನ್ನು ಸಿದ್ಧಪಡಿಸುವ ಹಿನ್ನೆಲೆಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ ವಿಷಯಗಳ ಶ್ರೇಷ್ಠ ಮಟ್ಟದ ಸಾರಾಂಶವುಳ್ಳ ಪ್ರಶ್ನೋತ್ತರ ಸಹಿತ ಅಭ್ಯಾಸಪಾಠ್ಯಗಳನ್ನು ಸಿದ್ಧಪಡಿಸಿ, ಅವುಗಳನ್ನು ಪರಿಣಾಮಕಾರಿಯಾಗುವಂತೆ ಮಕ್ಕಳಿಗೆ ಮಾರ್ಗದರ್ಶನ ನೀಡುವ ಕಾರ್ಯವನ್ನು 'ಬೇಸ್' ಸಂಸ್ಥೆ ಮಾಡುತ್ತಿದೆ.

### ವಿದ್ಯಾರ್ಥಿಗಳ ಸಂಪರ್ಕ

- ರಾಜ್ಯದ ಎಲ್ಲ ಪ್ರೌಢಶಾಲೆಗಳಿಗೆ ವರ್ಷಕ್ಕೆರಡು ಬಾರಿ ತಪಸ್ ಪತ್ರಕಗಳನ್ನು ಕಳುಹಿಸಿ ಪರೀಕ್ಷೆಗೆ ಹೆಸರು ನೋಂದಾಯಿಸಿಕೊಳ್ಳುವಂತೆ ವಿನಂತಿಸಲಾಗುತ್ತದೆ
- ಪ್ರತೀ ವರ್ಷ ರಾಜ್ಯದ 100 ಕ್ಕಿಂತ ಹೆಚ್ಚು ಮೊರಾರ್ಜಿ, ಜೆ.ಎನ್.ವಿ. (ಜವಾಹರ್ ನವೋದಯ ವಿದ್ಯಾಲಯ), ಸರ್ಕಾರಿ ಇನ್ನಿತರ ಶಾಲೆಗಳಿಗೆ ಖುದ್ದಾಗಿ ಭೇಟಿ ನೀಡಿ ಪ್ರಚಾರ ಮಾಡಲಾಗುತ್ತದೆ.
- ವಿವಿಧ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟಿಸಲಾಗುತ್ತದೆ.

### ಆಯ್ಕೆ ಪ್ರಕ್ರಿಯೆ

- ಪ್ರಸ್ತುತ 10ನೇ ತರಗತಿ ಓದುತ್ತಿರುವ ಕುಟುಂಬದ ವಾರ್ಷಿಕ ಆದಾಯ ರೂ. 1,50,000 ಮೀರಿರದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.
- ಡಿಸೆಂಬರ್ 25ರಂದು ರಾಜ್ಯದ ಎಲ್ಲ ಜಿಲ್ಲೆಗಳೂ ಸೇರಿದಂತೆ 40 ಸ್ಥಾನಗಳಲ್ಲಿ ಏಕಕಾಲದಲ್ಲಿ ಪ್ರವೇಶ ಪರೀಕ್ಷೆ ನಡೆಸಲಾಗುತ್ತದೆ.
- ಮೆರಿಟ್ ಆಧಾರದ ಮೇಲೆ 200 ವಿದ್ಯಾರ್ಥಿಗಳ ಆಯ್ಕೆ ಮಾಡಲಾಗುತ್ತದೆ.
- ಆಯ್ಕೆಯಾದ 200 ವಿದ್ಯಾರ್ಥಿಗಳ ಮನೆಗೆ ಪರಿಷತ್ತಿನ ಕಾರ್ಯಕರ್ತರು ಖುದ್ದು ಭೇಟಿ ನೀಡಿ, ಪ್ರತಿಯೊಬ್ಬ ವಿದ್ಯಾರ್ಥಿಗಳ ವಾಸ್ತವ ಸ್ಥಿತಿಗತಿಗಳ ಸಮೀಕ್ಷೆ ಮಾಡಲಾಗುತ್ತದೆ.
- 10ನೇ ತರಗತಿ ಪರೀಕ್ಷೆಯ ನಂತರ ಬೆಂಗಳೂರಿನಲ್ಲಿ 10 ದಿನಗಳ ವಸತಿ ಆಯ್ಕೆ ಶಿಬಿರ ನಡೆಸಲಾಗುತ್ತದೆ
- ಗ್ರಹಣ ಶಕ್ತಿ, ಆಸಕ್ತಿ, ಸಮಯದ ಸದುಪಯೋಗ, ನಡವಳಿಕೆ ಇತ್ಯಾದಿಗಳನ್ನು ಗಮನದಲ್ಲಿರಿಸಿಕೊಂಡು ಅಂತಿಮವಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

### 2019–20ರ ಅಂಕಿ–ಅಂಶ

- ಪ್ರಸ್ತುತ 2019–20ನೇ ಸಾಲಿನಲ್ಲಿ ಒಟ್ಟು 3820 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.
- ಮೊದಲ ಸುತ್ತಿನಲ್ಲಿ ಆಯ್ಕೆಯಾದ ರಾಜ್ಯದ 25 ಜಿಲ್ಲೆಗಳ 203 ವಿದ್ಯಾರ್ಥಿಗಳ ಮನೆಗೆ ಭೇಟಿ ನೀಡಲಾಯಿತು.
- ವಸತಿ ಶಿಬಿರಕ್ಕೆ ಆಯ್ಕೆಯಾದವರು – 124 ವಿದ್ಯಾರ್ಥಿಗಳು
- ತಪಸ್ 2019–20ಗೆ ಆಯ್ಕೆಯಾದವರು – 32 ವಿದ್ಯಾರ್ಥಿಗಳು
- 2019–20ನೇ ಸಾಲಿನಲ್ಲಿ ಪ್ರಥಮ ಪಿ.ಯು.ಯಲ್ಲಿ 32 ಹಾಗೂ ದ್ವಿತೀಯ ಪಿ.ಯು.ಸಿ.ಯಲ್ಲಿ 45 ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಿದ್ದಾರೆ.

**ಫಲಾನುಭವಿಗಳು**

| ವರ್ಷ | 1st PU | 2nd PU | ವರ್ಷ | 1st PU | 2nd PU |
|---|---|---|---|---|---|
| 2012–13 | 38 | 0 | 2016–17 | 37 | 35 |
| 2013–14 | 38 | 34 | 2017–18 | 37 | 34 |
| 2014–15 | 40 | 38 | 2018–19 | 46 | 37 |
| 2015–16 | 38 | 34 | 2019–20 | 33 | 46 |

**ವಿದ್ಯಾರ್ಥಿಗಳ ಮಾನಸಿಕ, ಶಾರೀರಿಕ, ಬೌದ್ಧಿಕ, ಭಾವನಾತ್ಮಕ ಮತ್ತು ಸಾಂಸ್ಕೃತಿಕ ವಿಕಾಸಕ್ಕಾಗಿ ನಡೆದ ಚಟುವಟಿಕೆಗಳು:**

- **ವಿದ್ಯಾರಂಭ:** ಹೊಸದಾಗಿ ಪ್ರವೇಶದ ಪಡೆದ ವಿದ್ಯಾರ್ಥಿಗಳಿಗಾಗಿ ಏಪ್ರಿಲ್ 24ರಂದು ನಡೆದ ವಿದ್ಯಾರಂಭ ಕಾರ್ಯಕ್ರಮದಲ್ಲಿ ಸೆಲ್ಕೊ ಸಂಸ್ಥೆಯ ಸಂಸ್ಥಾಪಕರಾದ ಹರೀಶ್ ಹಂದೆಯವರು ಮುಖ್ಯ ಅತಿಥಿಗಳಾಗಿ ಆಗಮಿಸಿ ತಮ್ಮ ಐಐಟಿ ವಿದ್ಯಾಭ್ಯಾಸದ ಅನುಭವ ಹಾಗೂ ಐಐಟಿಯ ಮಹತ್ತ್ವವನ್ನು ವಿವರಿಸಿದರು. ಗ್ಲೋಬಲ್ ಎಡ್ಜ್ ಸಂಸ್ಥೆಯ ಸ್ಥಾಪಕರಾದ ಎಂ.ಪಿ. ಕುಮಾರ್, ಎಚ್.ಎಸ್. ನಾಗರಾಜ್, ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ದಿನೇಶ್ ಹೆಗ್ಡೆ ಹಾಗೂ ಪೋಷಕರು ಉಪಸ್ಥಿತರಿದ್ದರು.
- **ತಪಸ್ ಕುರಿತು ಬಾಂಬೆ ಐಐಟಿ ಮೆಚ್ಚುಗೆ:** ಮುಂಬೈ ಐಐಟಿಯ ಪ್ರಾಚಾರ್ಯ ಸೂರ್ಯಕಾಂತ್, ಸದಸ್ಯರಾದ ಖುಷ್ಬೂ ಮತ್ತು ರೋಹಿಣಿ ಅವರ ತಂಡ 2019ರ ಜುಲೈ 16ರಿಂದ 22ರ ತನಕ ಒಂದು ವಾರಗಳ ಕಾಲ ತಪಸ್ ವಿದ್ಯಾರ್ಥಿಗಳೊಂದಿಗೆ ವಾಸ್ತವ್ಯ ಮಾಡಿದರು. ತಪಸ್‌ನ ಕಾರ್ಯವೈಖರಿ, ತರಗತಿ, ವಿದ್ಯಾರ್ಥಿಗಳ ದಿನಚರಿ–ಪಠ್ಯೇತರ ಚಟುವಟಿಕೆಗಳು, ಬೋಧನಕ್ರಮ ಮುಂತಾದವುಗಳನ್ನು ತಿಳಿದುಕೊಂಡ ಅವರು ಪ್ರಸ್ತುತ ತಪಸ್‌ನಲ್ಲಿರುವ ಪ್ರತಿ ವಿದ್ಯಾರ್ಥಿಗಳೊಂದಿಗೆ ಹಾಗೂ ವಿವಿಧ ಐಐಟಿಗಳಲ್ಲಿರುವ ಹಳೆ ವಿದ್ಯಾರ್ಥಿಗಳೊಂದಿಗೆ ವೈಯಕ್ತಿಕ ಮಾತುಕತೆ ನಡೆಸಿ, ಕೆಲವರ ಮನೆಗಳಿಗೆ ಭೇಟಿ ನೀಡಿದರು. ತಪಸ್ ಯೋಜನೆಯ ಕಲ್ಪನೆ, ಕಾರ್ಯ ಹಾಗೂ ವ್ಯವಸ್ಥೆಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.
- **ವ್ಯಕ್ತಿತ್ವ ವಿಕಸನ ಶಿಬಿರ:** ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕಾಗಿ ಚಾಮರಾಜನಗರ ಜಿಲ್ಲೆಯ ಬಿಳಿಗಿರಿ ರಂಗನ ಬೆಟ್ಟದ ಸುತ್ತೂರು ಮಠದ ಕುಟೀರದಲ್ಲಿ ಆಗಸ್ಟ್ 15ರಿಂದ 18ರ ವರೆಗೆ 4 ದಿನಗಳ ಕಾಲ ವ್ಯಕ್ತಿತ್ವ ವಿಕಸನ ಶಿಬಿರವನ್ನು ಆಯೋಜಿಸಿಲಾಯಿತು. ಭಾರತದ ಪರಂಪರೆ, ಸಾಧಕರು, ಸಾಧನೆ, ಸಂಸ್ಕೃತಿ, ಸಂಸ್ಕಾರ, ನಾಯಕತ್ವ ಗುಣಗಳ ಬಗೆಗೆ ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆಯ ನಿವೃತ್ತ ಅಧಿಕಾರಿ ಗೋಪಿನಾಥ್, ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ ರಘುನಂದನ ಮುಂತಾದ ವಿವಿಧ ಕ್ಷೇತ್ರಗಳ ಸಾಧಕರು ಮಾರ್ಗದರ್ಶನ ಮಾಡಿದರು. ಸ್ಥಳೀಯ ಸೋಲಿಗ ಜನಾಂಗದ ಮನೆ 'ಪೋಡು'ಗಳಿಗೆ ಭೇಟಿ ನೀಡಿ ಅವರೊಂದಿಗೆ ಅವರ ಜೀವನ ಶೈಲಿ, ಹಬ್ಬಗಳ ಆಚರಣೆಗಳ ಕುರಿತು ಮಾತುಕತೆ ನಡೆಸಿದರು. ಆ ಜನಾಂಗದ ಜಾನಪದ ನೃತ್ಯ, ಸಂಗೀತವನ್ನು ವೀಕ್ಷಿಸಿದರು.






- **ಮಾತೃಸಂಗಮ:** ತಪಸ್ ಹಾಗೂ ಸಾಧನಾ ವಿದ್ಯಾರ್ಥಿಗಳ ತಾಯಂದಿರ 'ಮಾತೃಸಂಗಮ' ಕಾರ್ಯಕ್ರಮವು 2020ರ ಜನವರಿ 4 ಮತ್ತು 5ರಂದು ನಡೆಯಿತು. ನಮ್ಮ ಕುಟುಂಬಪದ್ಧತಿ, ನಮ್ಮ ಮನೆ, ಸ್ವಚ್ಛತೆ, ಆರೋಗ್ಯ–ಮನೆಮದ್ದು, ಸಂಸ್ಕಾರ ಮುಂತಾದ ವಿಷಯಗಳ ಕುರಿತು ಸಮಾಜದ ಹಿರಿಯರು ಆಗಮಿಸಿ ತಿಳಿಸಿದರು. ರಾಯಚೂರಿನ ಕವಿತಾಳ್ ಗ್ರಾಮದ ಇಂಜಿನಿಯರ್ ಪದವೀಧರೆ ಕೃಷಿಕ ಮಹಿಳೆ ಕವಿತಾ ಮಿಶ್ರಾ, ಜಯದೇವ ಹೃದ್ರೋಗ ಸಂಸ್ಥೆಯ ಮಕ್ಕಳ ವೈದ್ಯರಾದ ಡಾ॥ ವಿಜಯಲಕ್ಷ್ಮಿ ಬಾಳೇಕುಂದ್ರಿ, ಹರಿದಾಸ ಸಂಘದ ಹ.ರಾ. ನಾಗರಾಜಾಚಾರ್ಯ ಅವರು ಆಗಮಿಸಿ ಮಾರ್ಗದರ್ಶನ ನೀಡಿದರು. ಎರಡು ದಿನಗಳ ಕಾಲ 150 ಮಂದಿ ತಾಯಂದಿರು ಭಾಗವಹಿಸಿದರು.

- **ಐಐಟಿ ಸಂದರ್ಶನ:** ವಿದ್ಯಾರ್ಥಿಗಳಿಗೆ ಐಐಟಿ ಬಗೆಗೆ ಸ್ಫೂರ್ತಿ–ಪ್ರೇರಣೆ ಮೂಡಿಸುವ ಸಲುವಾಗಿ ನವೆಂಬರ್ 23ರಂದು ತಪಸ್ ವಿದ್ಯಾರ್ಥಿಗಳನ್ನು ಚೆನ್ನೈ ಐಐಟಿ ಸಂದರ್ಶನಕ್ಕೆ ಕರೆದೊಯ್ಯಲಾಯಿತು. ಐಐಟಿಯಲ್ಲಿರುವ ಅವಕಾಶಗಳು, ತರಬೇತಿ, ಸಂಶೋಧನೆ ಮತ್ತು ಮಾರ್ಗದರ್ಶನದ ಕುರಿತು ಅಲ್ಲಿಯ ಪ್ರಾಧ್ಯಾಪಕರು ತಿಳಿಸಿದರು.

- **ಆರೋಗ್ಯ ತಪಾಸಣಾ ಶಿಬಿರ:** ಸಾಧಕನಿಗೆ ಆರೋಗ್ಯ ಮುಖ್ಯ. ಹೀಗಾಗಿ ಪ್ರತಿವರ್ಷ ಮಕ್ಕಳ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗುತ್ತದೆ. ಈ ವರ್ಷ ಬಿ.ಜಿ.ಎಸ್. ಆಸ್ಪತ್ರೆಯ ವೈದ್ಯಕೀಯ ಹಾಗೂ ಶುಶ್ರೂಕಿಯರ ತಂಡದವರು ಆಗಮಿಸಿ ತಪಾಸಣೆ ನಡೆಸಿ, ಸಣ್ಣಪುಟ್ಟ ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ಸೂಚಿಸಿದರು.

- **ಹಬ್ಬಗಳ ಆಚರಣೆ:** ವಿದ್ಯಾರ್ಥಿಗಳಲ್ಲಿ ಗುಣನಿರ್ಮಾಣ ಹಾಗೂ ಮಾನಸಿಕ ವಿಕಾಸಕ್ಕಾಗಿ ಸರಸ್ವತಿಪೂಜೆ, ಸಂಕ್ರಾಂತಿ, ಯುಗಾದಿ, ಗಣೇಶೋತ್ಸವ, ದೀಪಾವಳಿ ಮುಂತಾದ ಹಬ್ಬಗಳನ್ನು ಹಾಗೂ ಗುರುಪೂಜಾ ಉತ್ಸವ, ಸ್ವಾತಂತ್ರ್ಯ ದಿನಾಚರಣೆ, ಗಾಂಧಿಜಯಂತಿ, ಅಂಬೇಡ್ಕರ್ ಜಯಂತಿ, ಯೋಗ ದಿನಾಚರಣೆ, ರಥಸಪ್ತಮಿ ಮುಂತಾದ ಕಾರ್ಯಕ್ರಮಗಳನ್ನು ಆಚರಿಸಲಾಗುತ್ತಿದೆ. ಬೆಂಗಳೂರಿನ ಪ್ರತಿಷ್ಠಿತ ಸಾಫ್ಟ್‌ವೇರ್ ಕಂಪೆನಿಯ ಉದ್ಯೋಗಿಗಳು ತಪಸ್ ವಿದ್ಯಾರ್ಥಿಗಳೊಂದಿಗೆ ದೀಪಾವಳಿ ಹಬ್ಬವನ್ನು ಆಚರಿಸಿದರು. ಮಕ್ಕಳೊಂದಿಗೆ ಪಟಾಕಿ ಸಿಡಿಸಿ ಸಂಭ್ರಮಿಸಿದರು.

- **ಸಂಕಲ್ಪ:** ತಮ್ಮ ಎರಡು ವರ್ಷಗಳ ಕಠಿಣ ಪರಿಶ್ರಮದಿಂದ ಶಿಕ್ಷಣ ಮುಗಿಸಿ ಮುಂದಿನ ಉನ್ನತ ಶಿಕ್ಷಣಕ್ಕೆ ಹೋಗುವ ದ್ವಿತೀಯ ಪಿ.ಯು. ವಿದ್ಯಾರ್ಥಿಗಳಿಗಾಗಿ ಪ್ರತೀ ವರ್ಷ ಸಂಕಲ್ಪ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.



## ಪಕ್ಷಿನೋಟ

- ಈಗಾಗಲೇ 7 ತಂಡಗಳ 284 ಮಂದಿ ಬಡ ವಿದ್ಯಾರ್ಥಿಗಳು ತಮ್ಮ ಎರಡು ವರ್ಷಗಳ ಶಿಕ್ಷಣ ಪಡೆದು ಉನ್ನತ ಶಿಕ್ಷಣಕ್ಕಾಗಿ ಹೊರಬಂದಿದ್ದಾರೆ. ಹಲವರು ತಮ್ಮ ವೃತ್ತಿ ಜೀವನಕ್ಕೆ ಕಾಲಿಟ್ಟಿದ್ದಾರೆ.

- ಈವರೆಗೆ 19 ವಿದ್ಯಾಥಿಗಳು ದೇಶದ 7 ವಿವಿಧ ಐಐಟಿಗಳಲ್ಲಿ ಪ್ರವೇಶ ಪಡೆದಿದ್ದಾರೆ. 39 ಮಂದಿ ಎನ್.ಐ.ಟಿ (ಸುರತ್ಕಲ್ ಇತ್ಯಾದಿ) ಪ್ರವೇಶ ಪಡೆದಿದ್ದಾರೆ. ಉಳಿದವರು ಬೆಂಗಳೂರಿನ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜುಗಳಾದ ಆರ್.ವಿ., ಪಿ.ಇ.ಎಸ್., ಬಿ.ಎಂ.ಎಸ್. ಕಾಲೇಜುಗಳಲ್ಲಿ ಪ್ರವೇಶ ಪಡೆದಿದ್ದಾರೆ.

## ಪರಿಣಾಮ

- ತಪಸ್ ಒಬ್ಬ ವಿದ್ಯಾರ್ಥಿಯ ಜೀವನವನ್ನಷ್ಟೇ ಅಲ್ಲದೆ ಅವರ ಇಡೀ ಪರಿವಾರದವರನ್ನೂ ಬದಲಾಯಿಸಿದೆ. ಆರ್ಥಿಕಮಟ್ಟದ ಜೊತೆಗೆ ಸಮಾಜದಲ್ಲಿ ಅವರ ಗುರುತಿಸುವಿಕೆ ಬದಲಾಗಿದೆ.

- ಹೈಸ್ಕೂಲ್, ಕಾಲೇಜು ವಿದ್ಯಾರ್ಥಿಗಳು ತಮ್ಮ ಮುಂದಿನ ಶೈಕ್ಷಣಿಕ ಆಯ್ಕೆಯ ಬಗೆಗೆ ತಪಸ್ ವಿದ್ಯಾರ್ಥಿಗಳ ಮಾರ್ಗದರ್ಶನ ಪಡೆಯುತ್ತಿದ್ದಾರೆ.

saadhana

# ಸಾಧನಾ

ಬಹಳಷ್ಟು ಹೆತ್ತವರು ಹೆಣ್ಣುಮಕ್ಕಳನ್ನು ಕಾಲೇಜು ಶಿಕ್ಷಣಕ್ಕಾಗಿ ದೂರದ ಪ್ರದೇಶಕ್ಕೆ ಕಳುಹಿಸುವ ಶಕ್ತಿ ಹೊಂದಿರುವುದಿಲ್ಲ. ಹಾಗಾಗಿ, ಸಮೀಪದ ಯಾವುದೋ ಸರ್ಕಾರಿ ಕಾಲೇಜಿಗೆ ಕೆಲವರು ಸೇರಿಸಿದರೆ ಮತ್ತೆ ಕೆಲವರು ಮದುವೆ ಮಾಡಿ 'ಜವಾಬ್ದಾರಿ ಮುಗಿಯಿತು' ಎಂದು ಕೈ ತೊಳೆದುಕೊಳ್ಳುತ್ತಾರೆ. ಆದರೆ, ಗ್ರಾಮೀಣ ಭಾಗದ ಪ್ರತಿಭಾವಂತ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒಂದಿಷ್ಟು ಅನುಕೂಲ ಕಲ್ಪಿಸಿದರೆ ಅವರು ಯಾರಿಗೂ ಕಡಮೆ ಇಲ್ಲದಂತೆ ಸಾಧನೆಯ ಹೆಗ್ಗುರುತುಗಳನ್ನು ಮೂಡಿಸಬಲ್ಲರು. ಈ ನಿಟ್ಟಿನಲ್ಲಿ ವ್ಯಾಪಕ ಚಿಂತನ–ಮಂಥನ ನಡೆಸಿ ಹೆಣ್ಣುಮಕ್ಕಳಿಗಾಗಿಯೇ 2017–18ರ ಶೈಕ್ಷಣಿಕ ವರ್ಷದಿಂದ 'ಸಾಧನಾ' ಎಂಬ ಯೋಜನೆಯನ್ನು ಆರಂಭಿಸಲು ನಿರ್ಧರಿಸಲಾಗಿದೆ.

ಬಾಲಕರಿಗಾಗಿ ಇರುವ ತಪಸ್‌ನಂತೆಯೇ ನಡೆಯುವ ಈ ಯೋಜನೆಯಲ್ಲಿ ಆಯ್ಕೆಯಾದ ಬಡ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ಬೆಂಗಳೂರಿನ ಥಣಿಸಂದ್ರದಲ್ಲಿರುವ ರಾಷ್ಟ್ರೋತ್ಥಾನ ಪದವಿ ಪೂರ್ವ ಕಾಲೇಜಿನಲ್ಲಿ ಎರಡು ವರ್ಷಗಳ ಪಿಯುಸಿ ಶಿಕ್ಷಣವನ್ನು ಸಂಪೂರ್ಣ ಉಚಿತವಾಗಿ ನೀಡಲಾಗುತ್ತದೆ. ಅಲ್ಲದೆ, ಆಯ್ಕೆಯಾದ ವಿದ್ಯಾರ್ಥಿನಿಯರಿಗೆ ಎನ್‌ಇಇಟಿ (National Eligibility and Entrance) ಹಾಗೂ ಸಿಇಟಿ ಪ್ರವೇಶ ಪರೀಕ್ಷೆಗಳಿಗಾಗಿ ತರಬೇತಿ ನೀಡಲಾಗುತ್ತದೆ. ಊಟ, ಹಾಸ್ಟೆಲ್ ಸೌಲಭ್ಯ ಹಾಗೂ ಅಧ್ಯಯನ ಸಾಮಗ್ರಿಯನ್ನು ಉಚಿತವಾಗಿ ಪೂರೈಸಲಾಗುತ್ತದೆ.

## 2019–20ರ ಅಂಕಿ–ಅಂಶಗಳ ವಿವರ

- 2019ನೇ ಸಾಲಿನಲ್ಲಿ ಒಟ್ಟು 4398 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.
- ಮೊದಲ ಸುತ್ತಿನಲ್ಲಿ ಆಯ್ಕೆಯಾದ ರಾಜ್ಯದ 28 ಜಿಲ್ಲೆಗಳ 250 ವಿದ್ಯಾರ್ಥಿನಿಯರ ಮನೆಗೆ ಭೇಟಿ ನೀಡಲಾಯಿತು.
- ಅಂತಿಮ ಆಯ್ಕೆ ಶಿಬಿರಕ್ಕೆ ಬಂದವರು : 154
- ಸಾಧನಾ 2019–21ಗೆ ಆಯ್ಕೆಯಾದವರು : 51

2017ರಿಂದ ಈವರೆಗೆ ಒಟ್ಟು 150 ವಿದ್ಯಾರ್ಥಿನಿಯರು ಸಾಧನಾದಲ್ಲಿ ಶಿಕ್ಷಣ ಪಡೆದಿದ್ದಾರೆ. ಒಟ್ಟು 12 ಮಂದಿ ಎನ್‌ಇಇಟಿ ಪ್ರವೇಶ ಪಡೆದಿದ್ದಾರೆ.



## ವಿದ್ಯಾರ್ಥಿನಿಯರ ವಿಕಾಸಕ್ಕಾಗಿ ನಡೆಸಿದ ಚಟುವಟಿಕೆಗಳು

**ವಿದ್ಯಾರಂಭ:** ವಿದ್ಯಾರ್ಥಿನಿಯರಲ್ಲಿ ಭಾರತೀಯ ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸುವ ಸಲುವಾಗಿ ಏಪ್ರಿಲ್ 21ರಂದು ವಿದ್ಯಾರಂಭ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕ್ಯಾನ್ಸರ್ ಸೊಸೈಟಿಯ ಉಪಾಧ್ಯಕ್ಷರಾದ ಡಾ. ವಿಜಯಲಕ್ಷ್ಮಿ ದೇಶಮಾನೆ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದರು. ಬೇಸ್ ಸಂಸ್ಥೆಯ ಸಿಇಒ ಅನಂತ ಕುಲಕರ್ಣಿ, ಬೆಂಗಳೂರಿನ ಸುಮುಖಾಯ ಟ್ರಸ್ಟ್‌ನ ಸದಸ್ಯ ನಾಗರಾಜ್, ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಅವರು ಉಪಸ್ಥಿತರಿದ್ದರು.

**ದಿನಾಚರಣೆಗಳು:** ವಿದ್ಯಾರ್ಥಿಗಳ ಮಾನಸಿಕ ವಿಕಾಸಕ್ಕಾಗಿ ಕಾರ್ಗಿಲ್ ವಿಜಯ ದಿವಸ್, ಗುರುಪೂರ್ಣಿಮೆ, ಸ್ವಾತಂತ್ರ್ಯ ದಿನಾಚರಣೆ, ಕನ್ನಡ ರಾಜ್ಯೋತ್ಸವ, ಕನಕದಾಸ ಜಯಂತಿ, ವಿವೇಕಾನಂದ ಜಯಂತಿ, ಸರಸ್ವತಿ ಪೂಜೆ, ಕಲಾಂಜಲಿ, ತ್ಯಾಗರಾಜರ ಆರಾಧನೆ, ರಾಷ್ಟ್ರೀಯ ಮತದಾನ ದಿನಾಚರಣೆ, ಶಿವಾಜಿ ಜಯಂತಿ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.

**ಸಂಕಲ್ಪ:** ತಮ್ಮ ಎರಡು ವರ್ಷಗಳ ಕಠಿಣ ಪರಿಶ್ರಮದಿಂದ ಶಿಕ್ಷಣ ಮುಗಿಸಿ ಮುಂದಿನ ಉನ್ನತ ಶಿಕ್ಷಣಕ್ಕೆ ಹೋಗುವ ದ್ವಿತೀಯ ಪಿ.ಯು. ವಿದ್ಯಾರ್ಥಿಗಳಿಗಾಗಿ ಮೇ 9ರಂದು ಸಂಕಲ್ಪ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕುಟುಂಬ ಪ್ರಬೋಧನದ ಪ್ರಮುಖರಾದ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಅವರು ಮಾರ್ಗದರ್ಶನ ಮಾಡಿದರು. ಗೇಲ್‌ನ ಪ್ರಧಾನ ವ್ಯವಸ್ಥಾಪಕರಾದ ವಿವೇಕ್ ವಾತೋಡ್ಕರ್, ಸಾಧನಾ ಮತ್ತು ತಪಸ್ ಪ್ರಕಲ್ಪದ ರೂವಾರಿಗಳಾದ ಎಂ.ಪಿ. ಕುಮಾರ್, ಬೇಸ್ ಸಂಸ್ಥೆಯ ಸಿಇಒ ಅನಂತ ಕುಲಕರ್ಣಿ ಅವರು ಉಪಸ್ಥಿತರಿದ್ದರು.

# ಸಂವಿತ್ ರಿಸರ್ಚ್ ಫೌಂಡೇಶನ್

Samvit
Integrating Knowledge for Purposeful Lives

**ಪಠ್ಯಕ್ರಮ ಅಳವಡಿಕೆ: 139 ಶಾಲೆಗಳು**
ರಾಷ್ಟ್ರೋತ್ಥಾನ ಶಾಲೆಗಳಲ್ಲದೇ ಬಿಜಿಎಸ್‌ನ 5, ಜೆಎಸ್‌ಎಸ್‌ನ 5, ಬಾಗಲಕೋಟೆಯ ಬಿವಿವಿಎಸ್‌ನ 6, ಸೇಡಂನ ಕೆಬಿಯ 5, ಪುತ್ತೂರಿನ ವಿವಿಎಸ್‌ನ 13, ಮೈಸೂರಿನ ಎಬಿಯ 9 ಹಾಗೂ ಬೆಂಗಳೂರಿನ 40 ಮತ್ತು ಬೆಳಗಾವಿಯ 24 ಸರ್ಕಾರೀ ಶಾಲೆಗಳು ಸೇರಿದಂತೆ ಒಟ್ಟು 139 ಶಾಲೆಗಳಲ್ಲಿ ಸಂವಿತ್ ಪಠ್ಯಕ್ರಮವನ್ನು ಅಳವಡಿಸಲಾಗಿದೆ.

ಶೈಕ್ಷಣಿಕ ತಜ್ಞರು, ಶಿಕ್ಷಕರು ಹಾಗೂ ಸಂಶೋಧಕರನ್ನು ಒಂದೆಡೆ ಸೇರಿಸಿ, ಸಮಗ್ರ ಶಿಕ್ಷಣ ಪದ್ಧತಿಯ ಕ್ರಮಗಳನ್ನು ಸುಧಾರಿಸಲು ಏರ್ಪಡಿಸಿರುವ ಒಂದು ಮುಕ್ತ ಹಾಗೂ ಸಮರ್ಥ ವೇದಿಕೆ. ಪ್ರಸ್ತುತ ಶಿಕ್ಷಣ ಕ್ರಮದ ನ್ಯೂನ್ಯತೆಗಳನ್ನು, ಮಿತಿಗಳನ್ನು ಗುರುತಿಸಿ ನೂತನ, ಸರಳ, ಹಾಗೂ ವ್ಯವಸ್ಥಿತ ಶಿಕ್ಷಣ ಕ್ರಮವನ್ನು ರೂಪಿಸುತ್ತಿದೆ.

## ಕಾರ್ಯಯೋಜನೆ

- ಪ್ರಸ್ತುತ ಶಿಕ್ಷಣ ಕ್ರಮದ ನ್ಯೂನತೆಗಳನ್ನು, ಮಿತಿಗಳನ್ನು ಗುರುತಿಸಿ, ನೂತನ, ಸರಳ ಹಾಗೂ ವ್ಯವಸ್ಥಿತ ಶಿಕ್ಷಣ ಕ್ರಮವನ್ನು ರೂಪಿಸುವುದು.
- ಸಂಶೋಧನಾ ಮಾದರಿಗಳನ್ನು ರೂಪಿಸಿ, ಅದನ್ನು ಅನ್ಯಾನ್ಯ ಶಿಕ್ಷಣ ಸಂಸ್ಥೆಗಳಿಗೆ ಒದಗಿಸಿ, ಅವುಗಳ ವೈಜ್ಞಾನಿಕ ಬಳಕೆಗೆ ಅವಕಾಶ ಕಲಿಸುವುದು.
- ಸಂಶೋಧನಾ ಪ್ರಬಂಧಗಳು, ವಿವಿಧ ಪ್ರಯೋಗ ಹಾಗೂ ಶಿಕ್ಷಣ ಕ್ರಮಗಳ ಪ್ರಯೋಗಾತ್ಮಕ ಹಾಗೂ ಅಧ್ಯಯನಾಧಾರಿತ ವಿಷಯಗಳ (ಕೇಸ್ ಸ್ಟಡೀಸ್) ಯಶಸ್ವಿ ಪ್ರಯೋಗಗಳ ವರದಿಗಳನ್ನು ಪ್ರಕಟಿಸುವುದು.
- ವ್ಯಾಪಕ ಹಾಗೂ ವಿಸ್ತೃತ ಅಳವಡಿಕೆಗಾಗಿ ಶಿಕ್ಷಕರಿಗೆ ನೂತನ ಶಿಕ್ಷಣ ಪದ್ಧತಿ ಹಾಗೂ ಕ್ರಮಗಳ ಸೂಕ್ತ ತರಬೇತಿ ನೀಡುವುದು.
- ವಿಭಿನ್ನ ಶೈಕ್ಷಣಿಕ ಸಂಸ್ಥೆಗಳ ಶೈಕ್ಷಣಿಕ ಸಂಶೋಧನಾ ವಿವರಗಳು ಹಾಗೂ ಸಮಗ್ರ ಮಾಹಿತಿ ಸಂಗ್ರಹಿಸುವುದು.
- ಶಿಕ್ಷಣ ನೀತಿಗಳನ್ನು ರೂಪಿಸುವವರು ರಾಷ್ಟ್ರಮಟ್ಟದಲ್ಲಿ ಈ ನೂತನ ಶಿಕ್ಷಣ ಕ್ರಮದ ವಿಶಿಷ್ಟ ಸಂಶೋಧನಾ ಕ್ರಮಗಳನ್ನು ಪ್ರಾಯೋಗಿಕವಾಗಿ ಅನುಸರಿಸಲು ಮತ್ತು ಅಳವಡಿಸಿಕೊಳ್ಳಲು ನೆರವಾಗುವುದು.

## ಕಾರ್ಯಾನುಷ್ಠಾನ:

- ಸರಳ, ಸಮರ್ಥ ಅನುಕರಣೀಯ ಶೈಕ್ಷಣಿಕ ಮಾದರಿಗಳನ್ನು ರಚಿಸಿ ಶಿಕ್ಷಣ ವ್ಯವಸ್ಥೆಯಲ್ಲಿ ಈಗಾಗಲೇ ಉಂಟಾಗಿರುವ ಬೃಹತ್ ಕಂದರಗಳನ್ನು, ಕುಂದುಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ Yoga at School (YaS); Stories for Life (SfL) and Pride of India(PoI) – ಎನ್ನುವ 3 ಪಠ್ಯಕ್ರಮವನ್ನು ಸಿದ್ಧಪಡಿಸಲಾಗಿದೆ. ಹಾಗೂ ಈ ಪ್ರಠ್ಯಕ್ರಮವನ್ನು ಕರ್ನಾಟಕದಾದ್ಯಂತ 139 ಶಾಲೆಗಳಲ್ಲಿ ಅಳವಡಿಸಲ್ಪಟ್ಟಿದೆ.
- ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಸಹಕಾರದಿಂದ ಸಂವಿತ್ ರಿಸರ್ಚ್ ಫೌಂಡೇಶನ್ ತಯಾರಿಸಿರುವ ಯೋಗ ಪಠ್ಯಕ್ರಮವನ್ನು 40 ಸರ್ಕಾರಿ ಶಾಲೆಗಳಲ್ಲಿ ಅಳವಡಿಸಲ್ಪಟ್ಟಿದೆ. ಈ ಪಠ್ಯಕ್ರಮದ ಅಳವಡಿಕೆಯಿಂದ ಮಕ್ಕಳಲ್ಲಿ ಆರೋಗ್ಯ, ಶಾಲೆಯ ಹಾಜರಾತಿ ಮತ್ತು ಏಕಾಗ್ರತೆಗಳಲ್ಲಿ ಸಕಾರಾತ್ಮಕ ಬೆಳವಣಿಗೆಯಾಗಿರುವುದು ಅಧ್ಯಯನದಿಂದ ದೃಢಪಟ್ಟಿದೆ.
- ಪರಿಪೂರ್ಣ ಜೀವನ ರೂಪಿಸುವಲ್ಲಿ ವ್ಯಕ್ತಿತ್ವ ವಿಕಸನದ ಕತೆಗಳ ಪಾತ್ರ ಮಹತ್ವದ್ದು. ಇದನ್ನು ಗಮನದಲ್ಲಿರಿಸಿಕೊಂಡು ಮಾದರಿ ಜೀವನವನ್ನು

ಪರಿಚಯಿಸುವ ಪುಸ್ತಕಗಳನ್ನು (1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕವಾಗಿ ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ತಲಾ 10 ಪುಸ್ತಕಗಳನ್ನು) ಸಿದ್ಧಪಡಿಸಲಾಗಿದೆ. ಇವುಗಳ ಕುರಿತು ಮೊದಲ ಸುತ್ತಿನ ತಜ್ಞರ ಸಮೀಕ್ಷೆ ನಡೆದಿದೆ. ಈ ಕಥೆಗಳನ್ನು ಧ್ವನಿಸುರುಳಿ ಮಾಡುವ ಪ್ರಯತ್ನ ನಡೆಯುತ್ತಿದೆ.

- ವಿದ್ಯಾರ್ಥಿಗಳಲ್ಲಿ ಭಾರತೀಯನಾಗಿರುವುದಕ್ಕೆ ಹೆಮ್ಮೆ, ಅಭಿಮಾನ ಪಡುವ ಭಾವನೆಗಳನ್ನು ಬೆಳೆಸಲು, ವಿಜ್ಞಾನ, ಗಣಿತ, ಇತಿಹಾಸ ಹಾಗೂ ಕಲಾ ವಿಭಾಗಗಳಲ್ಲಿ ಭಾರತದ ಶ್ರೇಷ್ಠತೆಯನ್ನು ಪರಿಚಯಿಸುವ ನಿಟ್ಟಿನಲ್ಲಿ ಪ್ರೈಡ್ ಆಫ್ ಇಂಡಿಯಾ (PoI) ಎಂಬ ಪಠ್ಯಕ್ರಮವನ್ನು ತಯಾರಿಸಲಾಗಿದೆ. ಪ್ರಸ್ತುತ ವಿಜ್ಞಾನ ಹಾಗೂ ಗಣಿತ ವಿಭಾಗದಲ್ಲಿ 6, 7 ಮತ್ತು 8ನೇ ತರಗತಿಯ NCERT ಪಠ್ಯಕ್ರಮಕ್ಕನುಗುಣವಾಗಿ ಭಾರತೀಯ ಶ್ರೇಷ್ಠತೆಯನ್ನು ವಿದ್ಯಾರ್ಥಿಗಳಿಗೆ ತಲುಪಿಸುವ ಕಾರ್ಯಕ್ರಮ ನಡೆಯುತ್ತಿದೆ.
- ಈ ಕಾರ್ಯದಲ್ಲಿ ವಿವಿಧ ಪ್ರಮುಖ ಸಂಸ್ಥೆಗಳನ್ನು ಜೋಡಿಸಿಕೊಳ್ಳಲಾಗುತ್ತಿದೆ. ಸಂವಿತ್‌ನ ಯೋಗ ಅಟ್ ಸ್ಕೂಲ್ (YaS) ಪಠ್ಯಕ್ರಮವನ್ನು ಎಸ್–ವ್ಯಾಸ ವಿಶ್ವವಿದ್ಯಾಲಯ ಪರಿಷ್ಕೃತಗೊಳಿಸಿದೆ. ಎಸ್–ವ್ಯಾಸ ಅವರ ಸಂಯೋಜನೆಯಲ್ಲಿ ಶಿಕ್ಷಕರ ತರಬೇತಿ ನಡೆಸಲು ಅನುಮತಿ ದೊರಕಿದೆ. ಯೂತ್ ಫಾರ್ ಸೇವಾ ಸಂಸ್ಥೆಯ ಸಂಯೋಜನೆಯಲ್ಲಿ ಸರ್ಕಾರೀ ಶಾಲೆಗಳಲ್ಲಿ ಸ್ಟೋರೀಸ್ ಫಾರ್ ಲೈಫ್ (SfL) ಅಳವಡಿಸಲು ಪ್ರಯತ್ನ ನಡೆಯುತ್ತಿದೆ.






- ಶಾಲೆಗಳಲ್ಲಿನ ಅನುಷ್ಠಾನದ ಪ್ರಗತಿಯನ್ನು ಗಮನಿಸಲು ಸಂವಿತ್ ಮೊಬೈಲ್ appನ್ನು ಸಿದ್ಧಪಡಿಸಲಾಗಿದೆ. ವೆಬ್‌ಸೈಟ್ www.samvitresearch.org, ಸೋಶಿಯಲ್ ಮೀಡಿಯಾ ಅಕೌಂಟ್ಸ್ ತೆರೆಯಲಾಗಿದೆ.

## 2019–2020ರಲ್ಲಿ ನಡೆದ ಕಾರ್ಯಕ್ರಮಗಳು

- ಪ್ರಾಂಶುಪಾಲರು ಮತ್ತು ಆಡಳಿತ ವರ್ಗದವರಿಗಾಗಿ ತಿಳುವಳಿಕೆ ಕಾರ್ಯಾಗಾರ – 12
- ಶಿಕ್ಷಕರ ತರಬೇತಿ ಕಾರ್ಯಕ್ರಮಗಳು – 5
- ಆಚಾರ್ಯ ತರಬೇತಿ ಕಾರ್ಯಕ್ರಮಗಳು – 1
- 10ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ವಿಶೇಷ ಕಾರ್ಯಕ್ರಮ – 10 ಶಾಲೆಗಳಲ್ಲಿ
- ಈ ವರ್ಷದ ಫಲಾನುಭವಿಗಳು – 75000 ವಿದ್ಯಾರ್ಥಿಗಳು

# ರಾಷ್ಟ್ರೋತ್ಥಾನ ಬಳಗ

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರತರಾದ ಸಮಾನಮನಸ್ಕರೆಲ್ಲ ಒಂದೆಡೆ ಸೇರಿ ಸಮಗ್ರ ಸಮಾಜಪರಿವರ್ತನೆಗಾಗಿ ಶ್ರಮಿಸುವುದಕ್ಕೆ ನಿರ್ಮಾಣಗೊಂಡ ವೇದಿಕೆಯೇ ರಾಷ್ಟ್ರೋತ್ಥಾನ ಬಳಗ. ಪರಿಷತ್‌ನ ಧ್ಯೇಯ-ಧೋರಣೆಗಳನ್ನು ಆಂದೋಲನದ ರೂಪದಲ್ಲಿ ರಾಜ್ಯಾದ್ಯಂತ ಪಸರಿಸುವ ಕಾರ್ಯದಲ್ಲಿ ರಾಷ್ಟ್ರೋತ್ಥಾನ ಬಳಗಗಳು ಕಾರ್ಯನಿರತವಾಗಿವೆ. ಜಿಲ್ಲೆ, ತಾಲೂಕು, ಗ್ರಾಮ ಮಟ್ಟದಲ್ಲೂ ಬಳಗದ ಘಟಕಗಳು ಇವೆ. ಸದ್ಯ ರಾಷ್ಟ್ರೋತ್ಥಾನ ಬಳಗದ ಚಟುವಟಿಕೆಗಳು ಶಿವಮೊಗ್ಗ ಜಿಲ್ಲೆಯ ಹೊಳೆಹೊನ್ನೂರು, ಸಾಗರ, ಕಾರಣಗಿರಿ, ಶಿವಮೊಗ್ಗ ನಗರ ಮೊದಲಾದ ಕ್ಷೇತ್ರಗಳಲ್ಲಿ ಸಕ್ರಿಯವಾಗಿವೆ.



**ದಂಪತಿಗಳ ಸಮಾವೇಶ:** ಕುಟುಂಬ ವ್ಯವಸ್ಥೆ ಹಾಗೂ ಕೌಟುಂಬಿಕ ಸಾಮರಸ್ಯದ ಮಹತ್ತ್ವದ ಕುರಿತು ಅರಿವು ಮೂಡಿಸುವ ಸಲುವಾಗಿ ಕಾರಣಗಿರಿ ರಾಷ್ಟ್ರೋತ್ಥಾನ ಬಳಗ ಹಾಗೂ ಸ್ಥಳೀಯ ಸಂಘಟನೆಗಳ ಆಶ್ರಯದಲ್ಲಿ ದಂಪತಿಗಳ ಸಮಾವೇಶ ನಡೆಯಿತು. ಶಿವಮೊಗ್ಗದ ಖ್ಯಾತ ಮನೋವೈದ್ಯ ಡಾ॥ ಕೆ.ಆರ್. ಶ್ರೀಧರ್, ಕುಟುಂಬ ಪ್ರಬೋಧನದ ಶಿವಮೊಗ್ಗ ವಿಭಾಗ ಸಂಯೋಜಕ ವಿಜೇಂದ್ರ ಪ್ರಕಾಶ್ ಮತ್ತೂರು ಮುಂತಾದವರು ಆಗಮಿಸಿ ಮಾರ್ಗದರ್ಶನ ಮಾಡಿದರು.

**ಕೃಷ್ಣ ಜನ್ಮಾಷ್ಟಮಿ:** ಸಾಮಾಜಿಕ ಜಾಗೃತಿ ಮೂಡಿಸುವ ಸಲುವಾಗಿ ಕಾರಣಗಿರಿಯ ರಾಷ್ಟ್ರೋತ್ಥಾನ ಬಳಗದ ಆಶ್ರಯದಲ್ಲಿ ಆಗಸ್ಟ್ 18ರಂದು 29ನೇ ವರ್ಷದ ಶ್ರೀಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮ ನಡೆಯಿತು. ಹತ್ತಾರು ಮಕ್ಕಳು ಕೃಷ್ಣನ ವೇಷತೊಟ್ಟು, ಕೃಷ್ಣನ ಲೀಲೆಗಳನ್ನು ತೋರುವ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

**ಕಂಪ್ಯೂಟರ್ ತರಬೇತಿ:** ಗ್ರಾಮೀಣರಿಗೆ ನೆರವಾಗುವ ಸಲುವಾಗಿ ಕಾರಣಗಿರಿಯ ರಾಷ್ಟ್ರೋತ್ಥಾನ ಬಳಗದಿಂದ 6 ತಿಂಗಳ ಉಚಿತ ಕಂಪ್ಯೂಟರ್ ತರಬೇತಿ ಹಾಗೂ ಸ್ಪೋಕನ್ ಇಂಗ್ಲಿಷ್ ತರಗತಿಗಳನ್ನು ಆಯೋಜಿಸಿತು. ಗ್ರಾಮಭಾರತಿ ಟ್ರಸ್ಟ್ ಹಾಗೂ ಸೆಲ್ಕೋ ಸೋಲಾರ್ ಫೌಂಡೇಶನ್‌ನ ಸೋಲಾರ್ ಚಾಲಿತ ಕಂಪ್ಯೂಟರ್‌ಗಳನ್ನು ಕಲಿಕೆಗೆ ಬಳಸಲಾಯಿತು. ಇದು ಹಲವರ ಮೆಚ್ಚುಗೆಗೆ ಪಾತ್ರವಾಯಿತು.

**ರಕ್ತದಾನ ಶಿಬಿರ:** ಕಾರಣಗಿರಿಯ ರಾಷ್ಟ್ರೋತ್ಥಾನ ಬಳಗ ಹಾಗೂ ಮತ್ತಿತರ ಸಾಮಾಜಿಕ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ರಕ್ತದಾನ ಶಿಬಿರ ನಡೆಯಿತು. 50ಕ್ಕೂ ಅಧಿಕ ಮಂದಿ ರಕ್ತದಾನ ಮಾಡಿದರು.

**ಪೇಜಾವರಶ್ರೀ ನುಡಿನಮನ:** ಕಾರಣಗಿರಿಯ ರಾಷ್ಟ್ರೋತ್ಥಾನ ಬಳಗದ ವತಿಯಿಂದ ನಡೆದ ಪೇಜಾವರ ಶ್ರೀಗಳ ಸಂಸ್ಮರಣಾ ಕಾರ್ಯಕ್ರಮದಲ್ಲಿ ಲೇಖಕ ಡಾ॥ ಹಾದಿಗಲ್ಲು ಲಕ್ಷ್ಮೀನಾರಾಯಣ, ಡಾ॥ ಗಣಪತಿಭಟ್ ಕವಲಕ್ಕಿ, ತಾಲ್ಲೂಕು ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಡಾ॥ ರಾಮಚಂದ್ರರಾವ್, ಕಾರಣಗಿರಿ ದೇವಸ್ಥಾನದ ಸಮಿತಿ ಅಧ್ಯಕ್ಷ ಪ್ರಭಾಕರ್, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಇಲಿಯಾಸ್, ಲೇಖಕ ಅಂಬ್ರಯ್ಯ ಮಠ ಮುಂತಾದವರು ನುಡಿನಮನ ಸಲ್ಲಿಸಿದರು.

**ಪುಸ್ತಕ ಬಿಡುಗಡೆ:** ಕಾರಣಗಿರಿ ರಾಷ್ಟ್ರೋತ್ಥಾನ ಬಳಗ ಮತ್ತು ಅಖಿಲ ಭಾರತ ಸಾಹಿತ್ಯ ಪರಿಷತ್‌ನ ಆಶ್ರಯದಲ್ಲಿ ಹೊಸನಗರದಲ್ಲಿ ನಡೆದ 'ಉಟ್ಟಬಟ್ಟೆಯಲ್ಲಿ ಹೊರಟುಬಂದವರು' ಪುಸ್ತಕದ ಪರಿಚರ್ಚೆ ಕಾರ್ಯಕ್ರಮ ನಡೆಯಿತು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ರೋಹಿತ್ ಚಕ್ರತೀರ್ಥ, ವಿಕ್ರಮ ವಾರಪತ್ರಿಕೆಯ ಸಂಪಾದಕ ವೃಷಾಂಕ ಭಟ್ ನಿವಣೆ ಅವರು ಪುಸ್ತಕದ ಕುರಿತು ಮಾತನಾಡಿದರು.

**ಸಂಗೀತೋತ್ಸವ:** ತ್ಯಾಗರಾಜ ಆರಾಧನೆ ಪ್ರಯುಕ್ತ ಕಾರಣಗಿರಿ ರಾಷ್ಟ್ರೋತ್ಥಾನ ಬಳಗದ ವತಿಯಿಂದ ನಡೆದ ಸಂಗೀತೋತ್ಸವ ಕಾರ್ಯಕ್ರಮದಲ್ಲಿ ಶಿವಮೊಗ್ಗದ ಶಾರದಾ ಸಂಗೀತ ವಿದ್ಯಾಲಯದವರು ತ್ಯಾಗರಾಜರ ಪಂಚರತ್ನ ಕೀರ್ತನೆಗಳು ಹಾಗೂ ಉತ್ಸವ ಸಂಪ್ರದಾಯ ಕೀರ್ತನೆಗಳ ಗೋಷ್ಠಿಗಾಯನ ನಡೆಸಿಕೊಟ್ಟರು. ವಿವಿಧ ಸಂಗೀತ ಶಾಲೆಗಳ ವಿದ್ಯಾರ್ಥಿಗಳಿಂದ ಸಂಗೀತ ಕಾರ್ಯಕ್ರಮ ನಡೆಯಿತು.

**ಸಾಹಿತ್ಯ ಸಂಸ್ಕೃತಿ ಉತ್ಸವ ಮತ್ತು ಸಾಮೂಹಿಕ ಸತ್ಯನಾರಾಯಣ ಪೂಜೆ:** ಕಾರಣಗಿರಿ ಶ್ರೀ ಸಿದ್ಧಿವಿನಾಯಕಸ್ವಾಮಿಯ ಸನ್ನಿಧಿಯಲ್ಲಿ ಕಾರಣಗಿರಿ ರಾಷ್ಟ್ರೋತ್ಥಾನ ಬಳಗದ ವತಿಯಿಂದ ಫೆಬ್ರುವರಿ 15 ಮತ್ತು 16ರಂದು ಸಾಹಿತ್ಯ ಸಂಸ್ಕೃತಿ ಉತ್ಸವ ಮತ್ತು 28ನೇ ವರ್ಷದ ಸಾಮೂಹಿಕ ಸತ್ಯನಾರಾಯಣ ಪೂಜೆ ನಡೆಯಿತು.

- ನಾಡೋಜ ಡಾ. ಎಸ್.ಆರ್. ರಾಮಸ್ವಾಮಿಯವರ ಸಾಹಿತ್ಯದ ಅವಲೋಕನ ಎಂಬ ವಿಷಯದ ಕುರಿತು ನಡೆದ ಸಾಹಿತ್ಯ ಸಂಸ್ಕೃತಿ ಉತ್ಸವವನ್ನು ಲೇಖಕಿ, ಶಿವಮೊಗ್ಗದ ಕರ್ನಾಟಕ ಸಂಘದ ಪೂರ್ವಾಧ್ಯಕ್ಷೆ ವಿಜಯಾ ಶ್ರೀಧರ್ ಅವರು ಉದ್ಘಾಟಿಸಿದರು. ಶಿವಮೊಗ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಿ.ಬಿ. ಶಂಕರಪ್ಪ ಕರೆ ಅಧ್ಯಕ್ಷತೆ ವಹಿಸಿದರು. ಆರ್ಥಿಕ ತಜ್ಞ ಪ್ರೊ. ಬಿ.ಎಮ್. ಕುಮಾರಸ್ವಾಮಿ (ರಾಮಸ್ವಾಮಿಯವರ ಶತಮಾನದ ತಿರುವಿನಲ್ಲಿ ಭಾರತ ಮತ್ತು ಆರ್ಥಿಕತೆಯ ಎರಡು ಧ್ರುವಗಳು ಪುಸ್ತಕಗಳು), ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ರೋಹಿತ್ ಚಕ್ರತೀರ್ಥ, ಸಾಮಾಜಿಕ ಕಾರ್ಯಕರ್ತ ಲೋಹಿತಾಶ್ವ ಕೇದಿಗೆರೆ ಅವರು ರಾಮಸ್ವಾಮಿಯವರ ವಿವಿಧ ಗ್ರಂಥಗಳ ವಿಶ್ಲೇಷಣೆ ಮಾಡಿದರು. ಕಲಾದರ್ಶನ ಮಾಸಪತ್ರಿಕೆಯ ಪ್ರಧಾನ ಸಂಪಾದಕ ಹಾದಿಗಲ್ಲು ಲಕ್ಷ್ಮೀನಾರಾಯಣ ಮತ್ತು ಡಾ. ಶಾಂತರಾಮ್ ಪ್ರಭು ಸಮಾರೋಪ ಭಾಷಣ ಮಾಡಿದರು. ನಿವೃತ್ತ ಉಪನ್ಯಾಸಕ ಪದ್ಮನಾಭ ಅಡಿಗ, ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷ ಕೆ. ಇಲಿಯಾಸ್ ಉಪಸ್ಥಿತರಿದ್ದರು.
- ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಗಾಯಕ ನಗರ ಶ್ರೀನಿವಾಸ್ ಉಡುಪ, ಮತ್ತು ಸಾಹಿತಿ ಎಡ್ವರ್ಡ್ ಡಿಸೋಜ ಅವರನ್ನು ಸಮ್ಮಾನಿಸಲಾಯಿತು. ಸುಗಮ ಸಂಗೀತ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.
- **ಧರ್ಮಜಾಗರಣ ಸಮಾರಂಭ:** ಸಹಸ್ರಾಧಿಕ ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ಧರ್ಮಜಾಗರಣ ಸಮಾರಂಭದಲ್ಲಿ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಕರ್ನಾಟಕ ಸರ್ಕಾರದ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಸಚ್ಚಿದಾನಂದ ಮೂರ್ತಿ, ರಾಷ್ಟ್ರೋತ್ಥಾನ ಪರಿಷತ್ತಿನ ಆಡಳಿತ ಮಂಡಳಿ ಸದಸ್ಯ ದ್ವಾರಕಾನಾಥ್ ಉಪಸ್ಥಿತರಿದ್ದರು. ಐದು ಸಾವಿರಕ್ಕೂ ಹೆಚ್ಚು ಭಕ್ತರು ಭಾಗವಹಿಸಿದರು.

- **ಸಂಮಾನ:** ಧರ್ಮಜಾಗರಣ ಸಮಾರಂಭದಲ್ಲಿ ಹೊಸನಗರದ ಪಾದರಕ್ಷೆ ತಯಾರಕ ಆರ್. ಮೂರ್ತಿ ಹಾಗೂ ಸಂಪೇಕಟ್ಟೆಯ ಗ್ರಾಮೀಣ ಕುಲುಮೆ ಕೆಲಸಗಾರ ಚಂದ್ರಶೇಖರ ಆಚಾರಿ ಅವರನ್ನು ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಸಂಮಾನಿಸಿದರು.



# ಕೇಂದ್ರ ಕಾರ್ಯಾಲಯ

**ಪರಿಷತ್ತಿನ ಕೇಂದ್ರ ಕಾರ್ಯಾಲಯದ ಉದ್ಯೋಗಿ ಕಾರ್ಯಕರ್ತರ ವೈಯಕ್ತಿಕ ಬೆಳವಣಿಗೆಗಾಗಿ ಹಾಗೂ ಅವರಲ್ಲಿ ಸಾಮಾಜಿಕ ಜಾಗೃತಿ ಮೂಡಿಸುವ ವಿವಿಧ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.**

**ಕಾರ್ಯಕರ್ತರ ಅಭ್ಯಾಸ ವರ್ಗ:** ರಾಷ್ಟ್ರೋತ್ಥಾನ ಪರಿಷತ್‌ನ ಕಾರ್ಯಕರ್ತರ ಬೆಳವಣಿಗೆಗಾಗಿ ಕಾರ್ಯಕರ್ತರ ಅಭ್ಯಾಸ ವರ್ಗ ನಡೆಸಲಾಗುತ್ತಿದೆ.

ಪರಿಷತ್ತಿನಲ್ಲಿ ಉದ್ಯೋಗಿ ಕಾರ್ಯಕರ್ತರ ಅಭ್ಯಾಸವರ್ಗವು ನವೆಂಬರ್ 14ರಿಂದ ನ. 16ರ ತನಕ ಮೈಸೂರಿನ ಕೆ.ಆರ್. ನಗರ ತಾಲೂಕಿನ (ಎಡತೊರೆ ಮಠಕ್ಕೆ ಸೇರಿದ) ಜಪದಕಟ್ಟೆಯಲ್ಲಿ ನಡೆಯಿತು. ಅಭ್ಯಾಸವರ್ಗದಲ್ಲಿ ಕೇಂದ್ರ ಕಛೇರಿ, ಮುದ್ರಣಾಲಯ, ಯೋಗ ಹಾಗೂ ರಕ್ತನಿಧಿಯ ನೂರಕ್ಕೂ ಅಧಿಕ ಮಂದಿ ಕಾರ್ಯಕರ್ತರು ಭಾಗವಹಿಸಿದರು. ಪರಿಷತ್ತಿನ ಉಪಾಧ್ಯಕ್ಷರಾದ ಎ. ಗೋಪಾಲಕೃಷ್ಣ ನಾಯಕ್, ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ, ಆಡಳಿತ ಮಂಡಳಿ ಸದಸ್ಯರಾದ ಕೆ.ಎಸ್. ನಾರಾಯಣ್ ಹಾಗೂ ವಿವಿಧ ಪ್ರಕಲ್ಪಗಳ ಪ್ರಮುಖರು ಭಾಗವಹಿಸಿ ಮಾರ್ಗದರ್ಶನ ಮಾಡಿದರು.

**ಪ್ರಮುಖ ಕಾರ್ಯಕರ್ತರ ಅಭ್ಯಾಸವರ್ಗ:** ಪ್ರಮುಖ ಕಾರ್ಯಕರ್ತರ ಅಭ್ಯಾಸ ವರ್ಗವು ಡಿ. 12ರಿಂದ 15ರ ತನಕ ಮಹಾರಾಷ್ಟ್ರದ ಕೊಲ್ಹಾಪುರ ಸಮೀಪದ ಕಣೇರಿಯಲ್ಲಿ ನಡೆಯಿತು. ಕಣೇರಿ ಮಠದ ಪೂಜ್ಯ ಶ್ರೀ ಕಾಡುಸಿದ್ಧೇಶ್ವರ ಸ್ವಾಮೀಜಿ ಅವರು ಆಗಮಿಸಿ ಆಶೀರ್ವಚನ ನೀಡಿದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖರಾದ ಮಂಗೇಶ್ ಭೆಂಡೇ, ಸಂಘದ ದಕ್ಷಿಣ ಮಧ್ಯ ಕ್ಷೇತ್ರೀಯ ಸಂಘಚಾಲಕರಾದ ವಿ. ನಾಗರಾಜ್, ಪ್ರಚಾರಕರಾದ ಸುಧೀರ್, ಪರಿಷತ್ತಿನ ಉಪಾಧ್ಯಕ್ಷರಾದ ಎ.ಜಿ.ಕೆ. ನಾಯಕ್ ಮುಂತಾದವರು ಆಗಮಿಸಿ ಮಾರ್ಗದರ್ಶನ ಮಾಡಿದರು.



**ಗೌರವ ನಮನ:** ಆರೆಸ್ಸೆಸ್‌ನ ಜ್ಯೇಷ್ಠ ಪ್ರಚಾರಕರಾದ ಬಾಬೂರಾವ್ ದೇಸಾಯಿ ಅವರ 95ನೇ ಜನ್ಮ ವರ್ಷದ ಪ್ರಯುಕ್ತ ಅವರನ್ನು ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಅವರು ಗೌರವಿಸಿದರು.

**ಸಂಮಾನ:** ಅವಿಭಕ್ತ ಕುಟುಂಬವೊಂದರ ಯಜಮಾನರಾದ ಕೆ.ಜಿ. ಸುಬ್ಬರಾಮ ಶೆಟ್ಟಿ ದಂಪತಿಗಳನ್ನು ರಾಷ್ಟ್ರೋತ್ಥಾನ ಪರಿಷತ್ತಿನ ಪರವಾಗಿ ಸಂಘದ ಹಿರಿಯ ಪ್ರಚಾರಕರಾದ ಸು. ರಾಮಣ್ಣ ಅವರು ಸಂಮಾನಿಸಿದರು. ರಾಷ್ಟ್ರೋತ್ಥಾನ ಪರಿಷತ್‌ನ ಕೇಶವ ಶಿಲ್ಪ ಸಭಾಂಗಣದಲ್ಲಿ ಜನವರಿ 13ರಂದು ಭಾರತೀಯ ಕುಟುಂಬ ಪದ್ಧತಿಯನ್ನು ಕುರಿತ 'ಉತ್ಥಾನ' ಮಾಸಪತ್ರಿಕೆಯ ವಿಶೇಷಾಂಕವನ್ನು ಲೋಕಾರ್ಪಣ ಕಾರ್ಯಕ್ರಮದಲ್ಲಿ ಸುಬ್ಬರಾಮಶೆಟ್ಟಿ ದಂಪತಿಗಳನ್ನು ಸಂಮಾನಿಸಲಾಯಿತು.





# ರಾಷ್ಟ್ರೋತ್ಥಾನ ವಾರ್ತಾ

ರಾಷ್ಟ್ರೋತ್ಥಾನ ಪರಿಷತ್‌ನ ಕಾರ್ಯಚಟುವಟಿಕೆಯ ಮೇಲೆ ಬೆಳಕು ಚೆಲ್ಲುವ ಹಾಗೂ ಸಮಾನ ಮನಸ್ಕರೊಂದಿಗೆ ಹಂಚಿಕೊಳ್ಳುವ ಮಾಧ್ಯಮವಾಗಿ ರಾಷ್ಟ್ರೋತ್ಥಾನ ವಾರ್ತಾ ತ್ರೈಮಾಸಿಕ ಪತ್ರಿಕೆಯಾಗಿ 1971ರಲ್ಲಿ ಪ್ರಾರಂಭವಾಯಿತು. ಇದೀಗ ಪರಿಷತ್‌ನ ಕಾರ್ಯಚಟುವಟಿಕೆಗಳು ವಿವಿಧ ಕ್ಷೇತ್ರಗಳಿಗೆ ವಿಸ್ತರಿಸಿದ್ದು, ಎಲ್ಲ ಪ್ರಕಲ್ಪಗಳೂ ತಮ್ಮದೇ ಆದ ಮಹತ್ತ್ವಪೂರ್ಣ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿವೆ. ಈ ಚಟುವಟಿಕೆಗಳನ್ನು ರಾಷ್ಟ್ರೋತ್ಥಾನದ ಪರಿವಾರದವರೊಂದಿಗೆ ಹಂಚಿಕೊಳ್ಳುವ ರಾಷ್ಟ್ರೋತ್ಥಾನ ಪರಿಷತ್‌ನ ಪರಿವಾರ ಪತ್ರಿಕೆಯಾಗಿ 'ರಾಷ್ಟ್ರೋತ್ಥಾನ ವಾರ್ತಾ' ಪ್ರತಿ ತಿಂಗಳು (ಮಾಸಿಕ ಪತ್ರಿಕೆಯಾಗಿ) ಹೊರಬರುತ್ತಿದೆ.




- ಪರಿಷತ್‌ನ ಎಲ್ಲ ಪ್ರಕಲ್ಪಗಳು ಒಂದು ತಿಂಗಳಲ್ಲಿ ನಡೆಸಿದ ಚಟುವಟಿಕೆಗಳನ್ನು ಹಂಚಿಕೊಳ್ಳುವ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತಿದೆ.
- ಅನೇಕ ಮಾಹಿತಿಪೂರ್ಣ–ಸಂಶೋಧನಾತ್ಮಕ ಭಾಷಣಗಳನ್ನು ಯಥಾವತ್ ಲಿಪಿರೂಪಕ್ಕಿಳಿಸಿ ಪ್ರಕಟಿಸಲಾಗಿದೆ. ಅನೇಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದನ್ನು ರೆಫರೆನ್ಸ್ ಆಗಿ ಬಳಸಿದ ಉದಾಹರಣೆಗಳೂ ಇವೆ.
- ಕಳೆದ 5 ವರ್ಷಗಳಿಂದ ಬಹುವರ್ಣಗಳಲ್ಲಿ ಮುದ್ರಣವಾಗುತ್ತಿದೆ.
- ಇಂದು ನಾಡಿನ ಗಣ್ಯ ಸಾಹಿತಿಗಳು, ಲೇಖಕರೆನಿಸಿರುವ ಅನೇಕ ಹಿರಿಯರು ಈ ಪತ್ರಿಕೆಯ ಸಂಪಾದಕರಾಗಿದ್ದ ಹೆಮ್ಮೆ ಇದೆ.
- ಕೇವಲ ಕಾರ್ಯಕ್ರಮಗಳ ವರದಿಗಷ್ಟೇ ಸೀಮಿತವಾಗದೆ ಓದುಗರು ಮತ್ತು ಪತ್ರಿಕೆಗೆ ಸಂಬಂಧ ಕಲ್ಪಿಸುವ ಪ್ರಯೋಗಗಳನ್ನು ನಡೆಸಲಾಗುತ್ತಿದೆ.
- ಪರಿಷತ್ ನಡೆಸುತ್ತಿರುವ ಚಟುವಟಿಕೆಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಸಮಾನಮನಸ್ಕರೊಂದಿಗೆ ಹಂಚಿಕೊಳ್ಳುವ ಸಲುವಾಗಿ 'ವಾಟ್ಸಾಪ್', ಫೇಸ್‌ಬುಕ್‌ಗಳಲ್ಲಿ ಕಾರ್ಯಾರಂಭಿಸಲಾಗಿದೆ. ಈ ಮೂಲಕ ವರದಿಯನ್ನು ಇನ್ನಷ್ಟು ಸದೃಢಗೊಳಿಸುವ ಪ್ರಯತ್ನ ನಡೆಯುತ್ತಿದೆ.

: /rashtrotthanaparishath
: @Rashtrotthana_P

# ಚಟುವಟಿಕೆಗಳು

ರಾಷ್ಟ್ರೋತ್ಥಾನ ಪರಿಷತ್ ನೋಂದಣಿಗೊಂಡ ಸಾಮಾಜಿಕ ಸೇವಾ ಸಂಸ್ಥೆಯಾಗಿದ್ದು, ಜನಶಿಕ್ಷಣ, ಜನಸೇವೆ ಹಾಗೂ ಜನಜಾಗೃತಿ ಉದ್ದೇಶಗಳನ್ನಿಟ್ಟುಕೊಂಡು ಕಾರ್ಯ ನಿರ್ವಹಿಸುತ್ತಿದೆ. ರಾಜ್ಯಾದ್ಯಂತ ಇರುವ ನಮ್ಮ ಪ್ರಕಲ್ಪಗಳು ಹಾಗೂ ಚಟುವಟಿಕೆಗಳನ್ನು ಹೀಗೆ ಪಟ್ಟಿ ಮಾಡಬಹುದು:

- ಪಾಠದ ಕೇಂದ್ರಗಳು
- ಹೊಲಿಗೆ ತರಬೇತಿ
- ಬಾಲಗೋಕುಲ
- ಸಂಸ್ಕಾರ ಕೇಂದ್ರ
- ಭಜನಾಕೇಂದ್ರ
- ನಂದಗೋಕುಲ
- ಚಿಕಿತ್ಸಾಲಯಗಳು
- ರಕ್ತಕೇಂದ್ರ
- ರೋಗಪರೀಕ್ಷಣಾ ಕೇಂದ್ರ
- 'ಸಂರಕ್ಷಾ' ತಲಸ್ಸೇಮಿಯಾ ಮಕ್ಕಳ ಆರೈಕೆ ಕೇಂದ್ರ
- ಹೋಮಿಯೋಪತಿ ಚಿಕಿತ್ಸಾಲಯ
- ಆಯುರ್ವೇದ ಚಿಕಿತ್ಸಾಲಯ
- ಅಂಗಮರ್ದನ
- ಅಗ್ನಿವೇಶ ಆಯುರ್ವೇದ ಅನುಷ್ಠಾನ
- ಯೋಗ ತರಬೇತಿ/ಚಿಕಿತ್ಸೆ
- ಫಿಟ್ನೆಸ್ ಸೆಂಟರ್
- ಸಂಗೀತ-ನೃತ್ಯ ಕೇಂದ್ರ
- ಕರಾಟೆ
- ಗ್ರಂಥಾಲಯ
- ವಾಚನಾಲಯ
- ಪ್ರೌಢಶಾಲೆಗಳು
- ಕಿರಿಯ, ಹಿರಿಯ ಪ್ರಾಥಮಿಕ ಶಾಲೆ
- ಪದವಿಪೂರ್ವ ಕಾಲೇಜು
- ಸಿಬಿಎಸ್ಇ ಶಾಲೆಗಳು
- ತಪಸ್
- ಸಾಧನಾ
- ಸಂವಿತ್
- ಗೋಶಾಲೆ
- ಪುಸ್ತಕ ಪ್ರಕಟಣೆ
- ಮಾಸಪತ್ರಿಕೆ
- ಕ್ಯಾಸೆಟ್, ಸಿ.ಡಿ. ಉತ್ಪಾದನೆ
- ಮುದ್ರಣ




1. ಕಲಬುರಗಿ
2. ಬಾಗಲಕೋಟೆ
3. ಧಾರವಾಡ
4. ಬಳ್ಳಾರಿ
5. ದಾವಣಗೆರೆ
6. ಶಿವಮೊಗ್ಗ
7. ಚಿತ್ರದುರ್ಗ
8. ಚಿಕ್ಕಮಗಳೂರು
9. ಚಿಕ್ಕಬಳ್ಳಾಪುರ
10. ಕೋಲಾರ
11. ಬೆಂಗಳೂರು
12. ರಾಮನಗರ

**ರಾಷ್ಟ್ರೋತ್ಥಾನ ಪರಿಷತ್**

ಕೇಶವಶಿಲ್ಪ, ಕೆಂಪೇಗೌಡನಗರ
ಬೆಂಗಳೂರು - 560 019
E-mail: rashtrotthana@gmail.com
Website: www.rashtrotthana.org



## ಆಡಳಿತ ಮಂಡಳಿ

ಅಧ್ಯಕ್ಷರು
**ಶ್ರೀ ಎಸ್.ಆರ್. ರಾಮಸ್ವಾಮಿ**
ಸಾಹಿತಿಗಳು

ಉಪಾಧ್ಯಕ್ಷರು
**ಶ್ರೀ ಎ. ಗೋಪಾಲಕೃಷ್ಣ ನಾಯಕ್**
ನಿವೃತ್ತ ಅಧಿಕಾರಿ, ಐಟಿಐ

ಪ್ರಧಾನ ಕಾರ್ಯದರ್ಶಿ
**ಶ್ರೀ ನಾ. ದಿನೇಶ್ ಹೆಗ್ಡೆ**
ಸಾಮಾಜಿಕ ಕಾರ್ಯಕರ್ತರು

ಖಜಾಂಚಿ
**ಶ್ರೀ ಗಣಪತಿ ಹೆಗಡೆ**
ಸಾರಿಗೆ ವ್ಯವಹಾರಸ್ಥರು

ಸದಸ್ಯರು
ಶ್ರೀ ಅಶೋಕ್ ಸೋನಕರ್, ಸೀನಿಯರ್ ಸೂಪರಿಂಟೆಂಡೆಂಟ್ ಆಫ್ ಪೋಸ್ಟ್ ಆಫೀಸಸ್ (ನಿ)
ಶ್ರೀ ಕೆ.ಎಸ್. ನಾರಾಯಣ, ಸಾಮಾಜಿಕ ಕಾರ್ಯಕರ್ತರು
ಶ್ರೀ ಎ.ಆರ್. ದ್ವಾರಕಾನಾಥ್, ವ್ಯವಸ್ಥಾಪಕರು (ನಿ), ಬಿಹೆಚ್‌ಇಎಲ್
ಶ್ರೀ ಬಿ.ಎಸ್. ರವಿಕುಮಾರ್, ಸಾಮಾಜಿಕ ಕಾರ್ಯಕರ್ತರು
ಶ್ರೀಮತಿ ಮಾಲಿನಿ ಭಾಸ್ಕರ್, ಸಾಮಾಜಿಕ ಕಾರ್ಯಕರ್ತರು